
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 16, 2009 ರೂ. 12/-


MLC
...ಸ್ಥಾನಗಳ ಸಮೀಕ್ಷೆ



...ಡ್ಡ ಗೌಡರ
...ಡ್ಡ ತಂತ್ರ



...ತ್ರಿಕ:
...ದೂ ನಾಯಕನ
...ಂಗ್
...ಾಂಗ್
...ರಾಣ




ವಿಕೃತ ನಟ ಆದಿ ಲೋಕೇಶನ

ಸೆಕ್ಸ್ ಮೇನಿಯಾ

BBMP
ವಾರ್ಡ್ ವಾರ್-ಹೆಬ್ಬಾಳ



ಕಟ್ಟಾ ಕುತಂತ್ರಕ್ಕೆ
ದಲಿತ ನಾಯಕ ಬಲಿ



ಮೈಸೂರು
ಡೀಸಿಯ
ಮರಕೋತಿ
ಆಟ

ಭೂಪಾಲ್ ದುರಂತವನ್ನು ಮರೆಯುವುದೆಂದರೆ...


8,000 ಜನರನ್ನು ಕೊಂದ ಬಿನ್ ಲಾಡೆನ್ ದೊಡ್ಡ ಭಯೋತ್ಪಾದಕನೋ ಅಥವಾ 20,000 ಜನರನ್ನು ಕೊಂದ ಆಂಡರ್‌ಸನ್‌ನೋ?

1984ರ ಡಿಸೆಂಬರ್ 2/3ರ ಮಧ್ಯರಾತ್ರಿ ಇಡೀ ಪ್ರಪಂಚದಲ್ಲೇ ಅತ್ಯಂತ ದೊಡ್ಡ ಔದ್ಯಮಿಕ ದುರಂತವೊಂದು ಭಾರತದ ಭೂಪಾಲ್‌ನಲ್ಲಿ ಸಂಭವಿಸಿತು. ಭೂಪಾಲ್‌ನ ಬಹುರಾಷ್ಟ್ರೀಯ ರಾಸಾಯನಿಕ ಕಂಪನಿಯಾದ ಯೂನಿಯನ್ ಕಾರ್ಬೈಡ್ ಫ್ಯಾಕ್ಟರಿ (UCC)ಯಲ್ಲಿ ದೊಡ್ಡ ಸ್ಫೋಟವೊಂದು ಸಂಭವಿಸಿ ಮೀಥೈಲ್ ಐಸೋಸಯನೇಟ್ ಎಂಬ ಅನಿಲ ಮೋಡದ ರೀತಿಯಲ್ಲಿ ಇಡೀ ಭೂಪಾಲ್‌ಅನ್ನು ಆವರಿಸಿಕೊಂಡಿತು. ಏನಾಯಿತೆಂದು ಅರಿಯುವ ವೇಳೆಗೆ ಆ ಕಂಪನಿಯ ಆಸುಪಾಸಿನಲ್ಲಿ ವಾಸಿಸುತ್ತಿದ್ದ 3000ಕ್ಕೂ ಹೆಚ್ಚು ಕೂಲಿ ಕಾರ್ಮಿಕರು ಸಾವಿಗೀಡಾದರು. ಬೆಳಗಾಗುವ ವೇಳೆಗೆ ಆರು ಲಕ್ಷ ಜನಸಂಖ್ಯೆಯಿದ್ದ ಭೂಪಾಲಿನ ಐದು ಲಕ್ಷಕ್ಕೂ ಹೆಚ್ಚು ನಾಗರಿಕರು ವಿವಿಧ ಬಗೆಯ ಕಣ್ಣುರಿತ, ಶ್ವಾಸ ತೊಂದರೆ, ವಾಂತಿ ಇನ್ನಿತ್ಯಾದಿ ನರಕಸದೃಶ ಬಾಧೆಗಳಿಂದ ಆಸ್ಪತ್ರೆಗಳಿಗೆ ಧಾವಿಸಿಬರಲಾರಂಭಿಸಿದರು. ಆದರೆ ಇದಕ್ಕೆ ಇಲಾಜು ಮಾಡಬಹುದಾದ ತಯಾರಿಯಾಗಲೀ, ವೈದ್ಯಕೀಯ ವ್ಯವಸ್ಥೆಯಾಗಲೀ ಭೂಪಾಲಿನಲ್ಲಿರಲಿಲ್ಲ. ಎಲ್ಲಕ್ಕಿಂತ ಮೀಥೈಲ್ ಐಸೋಸಯನೇಟ್ ಉಸಿರಾಡಿದ್ದರಿಂದ ತೊಂದರೆಯುಂಟಾಗಿದೆ ಎಂದು ಸಾಬೀತಾದರೆ ಕಂಪನಿ ಹೊಣೆಗಾರನಾಗಬೇಕಾಗುತ್ತದೆ ಎಂದು ಯೂನಿಯನ್ ಕಾರ್ಬೈಡ್ ಕಂಪನಿ ದೊಡ್ಡ ಷಡ್ಯಂತ್ರವನ್ನೇ ಹೆಣೆದಿತ್ತು.

ಈ ಮೀಥೈಲ್ ಐಸೋಸಯನೇಟ್ ಅನ್ನು ಸೇವಿಸಿದಲ್ಲಿ ಸೋಡಿಯಂ ಥಿಯೋಸಲ್ಫೈಟ್ ದ್ರಾವಣವನ್ನು ರೋಗಿ ಗಳಿಗೆ ಕೊಟ್ಟದ್ದರೆ ತತ್‌ಕ್ಷಣದ ಹಾನಿಯನ್ನಾದರೂ ತಡೆಗಟ್ಟಬಹುದಿತ್ತು. ಆದರೆ ಈ ದ್ರಾವಣವನ್ನು ಸೇವಿಸಿದವರಿಗೆ ಆರೋಗ್ಯ ಸುಧಾರಿಸಿದರೆ ಮೀಥೈಲ್ ಐಸೋಸಯನೇಟ್ ಸೇವನೆಯಿಂದಲೇ ಆರೋಗ್ಯಕ್ಕೆ ಹಾನಿಯಾಗಿತ್ತು ಎಂದು ಸಾಬೀತಾಗುತ್ತಿತ್ತು. ಆದ್ದರಿಂದ ಕಂಪನಿಯು ಆರೋಗ್ಯದ ತೊಂದರೆಯಿಂದ ಬಂದವರಿಗೆ ಮೇಲುಮೇಲಿನ ಇಲಾಜು ಮಾಡಿಕಳಿಸಿತೇ ವಿನಃ ಸೋಡಿಯಂ ಥಿಯೋಸಲ್ಫೈಟ್ ದ್ರಾವಣದ ಔಷದಿ ಕೊಡದಂತೆ ತಡೆಗಟ್ಟಿತು. ಸರ್ಕಾರಿ ಆಸ್ಪತ್ರೆಗಳು ಸಹ ಕಂಪನಿಯ ಆಣತಿಯಂತೆ ನಡೆದುಕೊಂಡವು! ಹೀಗಾಗಿ ಕಳೆದ 25 ವರ್ಷಗಳಲ್ಲಿ ಏನಿಲ್ಲವೆಂದರೂ 20,000ಕ್ಕೂ ಹೆಚ್ಚು ಜನ ಕಾರ್ಬೈಡ್ ಕಂಪನಿಯ ವಿಷಾನಿಲ ಸೋರಿಕೆಯಿಂದಾಗಿ ಪ್ರಾಣ ತೆತ್ತಿದ್ದಾರೆ. ಐದು ಲಕ್ಷಕ್ಕೂ ಹೆಚ್ಚು ಜನ ಈಗಲೂ ನರಕದಂಥ ಬದುಕನ್ನು ನಡೆಸುತ್ತಿದ್ದಾರೆ.


ಈಗ ಈ ಭೂಪಾಲ್ ದುರಂತ ಸಂಭವಿಸಿ 25 ವರ್ಷಗಳಾಗಿವೆ. ಜಗತ್ತಿನಲ್ಲೇ ಅತ್ಯಂತ ಭೀಕರವಾದ ಈ ದುರಂತದಿಂದ ನಾವು, ನಮ್ಮ ಸರ್ಕಾರ, ಜಗತ್ತು ಪಾಠಗಳನ್ನೇನಾದರೂ ಕಲಿತಿದ್ದೇವೆಯೇ? ಈಗಲೂ ಭೂಪಾಲ್ ಜನರು ವಿಷಾನಿಲದಿಂದ ಪಡುತ್ತಿರುವ ಪಾಡೊಂದೇ ಸಾಕು; ಅವರನ್ನು ಹಾಗೆ ಸಾಯಲು ಬಿಟ್ಟಿರುವ ಕಂಪನಿ ಪರವಾದ ಸರ್ಕಾರದ ಕ್ರಮಗಳೇ ಸಾಕು; ಈಗಲೂ ಯೂನಿಯನ್ ಕಾರ್ಬೈಡ್‌ನಂಥ ಭೀಕರ ಅನಾಹುತ ಮಾಡುವ ಕಾರ್ಖಾನೆಗಳಿಗೆ ಬೇಷರತ್ ಅನುಮತಿ ಕೊಡುತ್ತಿರುವ ಸರ್ಕಾರಿ ನೀತಿಗಳೇ ಸಾಕು; ಜಗತ್ತಿನಲ್ಲೇ ಅತ್ಯಂತ ದೊಡ್ಡ ನರಮೇಧವಾದ ಈ ಭೂಪಾಲ್ ದುರಂತಕ್ಕೆ ಕಾರಣರಾದ ತಪ್ಪಿತಸ್ಥರನ್ನು ಇನ್ನೂ ಶಿಕ್ಷಿಸದೇ ಬಿಟ್ಟಿರುವ ಸರ್ಕಾರದ ಬಹುರಾಷ್ಟ್ರೀಯ ಕಂಪನಿ ಪರವಾದ ಕುತಂತ್ರಗಳೇ ಸಾಕು – ಇವೆಲ್ಲ ಸಮಾಜ, ಸರ್ಕಾರ ಭೂಪಾಲ್ ದುರಂತದಿಂದ ಏನೇನೂ ಪಾಠ ಕಲಿತಿಲ್ಲವೆಂದು ಸಾಬೀತುಮಾಡುತ್ತವೆ.

ಅಸಲು ಭೂಪಾಲ್ ದುರಂತ ಸಂಭವಿಸಲು ಕಾರಣ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳದೆ ಆ ವೆಚ್ಚವನ್ನು ಉಳಿಸುವ ಕಂಪನಿಯ ದುರಾಸೆ. ಈ ಕಂಪನಿಯ ಮಾಲೀಕ ವಾರೆನ್ ಆಂಡರ್‌ಸನ್. 1969ರಲ್ಲಿ ಭೂಪಾಲ್‌ನಲ್ಲಿ ಸ್ಥಾಪನೆಯಾದ ಈ ಕಂಪನಿ ಆಗತಾನೆ ಭಾರತದಲ್ಲಿ ಪ್ರಾರಂಭವಾಗಿದ್ದ ಹಸಿರುಕ್ರಾಂತಿ ಕೃಷಿಗೆ ಬೇಕಾದ ಕ್ರಿಮಿನಾಶಕವಾದ ಕಾರ್ಬಾರಿಲ್ ಎಂಬ ರಾಸಾಯನಿಕವನ್ನು ಉತ್ಪಾದಿಸುತ್ತಿತ್ತು. 1979ರ ಸುಮಾರಿಗೆ ಅಲ್ಲಿ ಮೀಥೈಲ್ ಐಸೋಸಯನೇಟ್ ಉತ್ಪಾದನಾ ಘಟಕವೂ ಸೇರಿಕೊಂಡಿತು. ಆದರೆ ಅದರಿಂದ ಯಾವ ರೀತಿಯ ಪರಿಸರ ಮತ್ತು ಸಾಮಾಜಿಕ ಪರಿಣಾಮ ಉಂಟಾಗಬಹುದೆಂಬ ಯಾವುದೇ ಅಧ್ಯಯನವನ್ನಾಗಲೀ, ಎಚ್ಚರಿಕೆ ಗಳನ್ನಾಗಲೀ ಸರ್ಕಾರ ಅಥವಾ ಕಂಪನಿ ಕೈಗೊಳ್ಳಲಿಲ್ಲ. 1980ರ ನಂತರ ಇಂದಿರಾ ಗಾಂಧಿ ಮತ್ತೊಮ್ಮೆ ಪ್ರಧಾನಿಯಾದ ಮೇಲೆ ಭಾರತದ ಆರ್ಥಿಕತೆ ಯಲ್ಲಿ ವಿದೇಶಿ ಬಂಡವಾಳವನ್ನು



ಆಕರ್ಷಿಸುವ ನೀತಿಯನ್ನು ನಿಧಾನವಾಗಿ ಜಾರಿ ಮಾಡಲಾಯಿತು. ಇಂಥಾ ಸಂದರ್ಭದಲ್ಲಿ ಈ ಕಂಪನಿಯ ಬಗ್ಗೆ ನಿಗಾ ವಹಿಸಬೇಕಾದ ಎಲ್ಲಾ ಇಲಾಖೆ ಗಳು ಬಾಯಿಮುಚ್ಚಿ ಕೂತುಕೊಂಡಿದ್ದವು. ಆದರೂ ಈ ದುರಂತ ಸಂಭವಿಸುವುದಕ್ಕೆ ಮುನ್ನ ಹಲವಾರು ಬಾರಿ ಈ ಕಂಪನಿಯ ಸುರಕ್ಷತಾ ತಂಡವೇ ವಿಷಾನಿಲ ಸೋರಿಕೆಯ ಬಗ್ಗೆ ಎಚ್ಚರಿಕೆ ನೀಡಿತ್ತು. ಅದನ್ನು ತಡೆಗಟ್ಟಲು ಎರಡು ಕೋಟಿಗಿಂತಲೂ ಕಡಿಮೆ ವೆಚ್ಚವಾಗುವ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲು ಸಲಹೆ ಮಾಡಿತ್ತು.

ಆದರೆ ಅಷ್ಟು ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲೂ ಸಿದ್ಧವಿಲ್ಲದ ಈ ಅಮೆರಿಕನ್ ಕಂಪನಿ ತನ್ನ ಈ ಬೇಜವಾಬ್ದಾರಿಯಿಂದಲೇ 20,000 ಭಾರತೀಯರ ಸಾವಿಗೂ, ಐದು ಲಕ್ಷಕ್ಕೂ ಹೆಚ್ಚು ಭಾರತೀಯರ ನರಕಸದೃಶ ಬದುಕಿಗೂ ಕಾರಣವಾಯಿತು. ಅಂದ ಹಾಗೆ, ಇದೇ ಕಂಪನಿಗೆ ಅಮೆರಿಕದ ವರ್ಜೀನಿಯಾ ರಾಜ್ಯದಲ್ಲೂ ಇದೇ ಬಗೆಯ ಘಟಕವನ್ನು ಹೊಂದಿದೆ. ಅಲ್ಲಿ ಅಗತ್ಯಕ್ಕಿಂತಲೂ ಹೆಚ್ಚಿನ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡಿರುವುದರಿಂದ ಅಲ್ಲಿ ದುರಂತ ಸಂಭವಿಸಿಲ್ಲ. ಆದರೆ ಭಾರತೀಯರ ಪ್ರಾಣವನ್ನು ಅಗ್ಗವೆಂದು ಈ ಕಂಪನಿ ಭಾವಿಸಿದ್ದರಿಂದ ಇಲ್ಲಿ ಯಾವುದೇ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲಿಲ್ಲ.



ವಾಸ್ತವವಾಗಿ ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳು ಭಾರತೀಯರ ಬದುಕನ್ನು ಮಾತ್ರವಲ್ಲ, ಸಾವನ್ನೂ ಅಗ್ಗವಾಗಿಯೇ ಭಾವಿಸುತ್ತವೆ. 3000ಕ್ಕೂ ಹೆಚ್ಚು ಜನರ ಸಾವಿಗೆ ತಾನು ತೆಗೆದುಕೊಳ್ಳದೇ ಹೋದ ಎಚ್ಚರಿಕಾ ಕ್ರಮಗಳೇ ಕಾರಣವೆಂದು ಈವರೆಗೆ ಕಾರ್ಬೈಡ್ ಕಂಪನಿ ಒಪ್ಪಿಕೊಂಡಿಲ್ಲ. ಅದರ ಪ್ರಕಾರ ಯಾರೋ ಒಬ್ಬ ಕಿಡಿಗೇಡಿ ಕಾರ್ಮಿಕನ ದುಷ್ಕೃತ್ಯದಿಂದ ಈ ದುರಂತ ಸಂಭವಿಸಿತು. (ಇದೇ ಚಾಳಿಯನ್ನು ಕಲಿತುಕೊಂಡಿರುವ ಭಾರತ ಸರ್ಕಾರವೂ ಮೊನ್ನೆ ಕೈಗಾದಲ್ಲಿ ನಡೆದ ಅಣು ವಿಕಿರಣ ಸೋರಿಕೆಯನ್ನೂ ಅಲ್ಲಿನ ಕಾರ್ಮಿಕರ ತಲೆಗೇ ಕಟ್ಟುವ ಪ್ರಯತ್ನ ನಡೆಸಿದೆ!)

ಈ ವಿದೇಶಿ ಕಂಪನಿಗಳಿಗಂತೂ ಭಾರತೀಯರ ಜೀವಗಳ ಬಗ್ಗೆ ಕಾಳಜಿಯಿಲ್ಲ, ಆದರೆ ನಮ್ಮಿಂದಲೇ ಆಯ್ಕೆಯಾದ ಸರ್ಕಾರಕ್ಕಾದರೂ ಇದರ ಬಗ್ಗೆ ಕಾಳಜಿ ಇರಬೇಕಿತ್ತಲ್ಲವೇ! ಆ ಕಾಳಜಿಯಿದ್ದಿದ್ದರೆ ಅದು ಕನಿಷ್ಠ ಎರಡು ರೀತಿಯಲ್ಲಿ ವ್ಯಕ್ತವಾಗಬೇಕಿತ್ತು. ಒಂದು ಈ ದುರಂತಕ್ಕೆ ಕಾರಣರಾದವರನ್ನು ಬಂಧಿಸಿ ಶಿಕ್ಷೆ ಕೊಡಿಸುವುದು ಮತ್ತು ಎರಡನೆಯದು ತಮ್ಮದಲ್ಲದ ಕಾರಣಕ್ಕೆ ಬಲಿಯಾದವರ/ಬಲಿಯಾಗುತ್ತಿರುವವರನ್ನು ರಕ್ಷಿಸುವುದು. ಆದರೆ ಈ ಎರಡೂ ವಿಷಯಗಳಲ್ಲಿ 25 ವರ್ಷಗಳಿಂದ ಸರ್ಕಾರ ಅಪಾರ ನಿರ್ಲಕ್ಷ್ಯ, ಬೇಜವಾಬ್ದಾರಿತನ ಮತ್ತು ಕೊಲೆಗಡುಕತನವನ್ನು ಪ್ರದರ್ಶಿಸುತ್ತಿದೆ.

ಕಂಪನಿಯ ಬೇಜವಾಬ್ದಾರಿಯಿಂದಲೇ ವಿಷಾನಿಲ ಸೋರಿಕೆಯಾಗಿ ಸಾವಿರಾರು ಜನ ಸತ್ತರೂ ಅವರ ಸಾವಿಗೆ ಕಾರಣನಾದ ಯೂನಿಯನ್ ಕಾರ್ಬೈಡ್ ಮಾಲೀಕ ಆಂಡರ್‌ಸನ್‌ನನ್ನು ಐದು ದಿನಗಳ ಕಾಲ ನಮ್ಮ ಸರ್ಕಾರ ಬಂಧಿಸಿರಲಿಲ್ಲ. ಬಂಧಿಸಿದ ನಂತರವೂ ಆತನನ್ನು ಅಷ್ಟೊಂದು ಜನರ ಸಾವಿಗೆ ಹೊಣೆಗಾರನನ್ನಾಗಿ ಮಾಡುವ ಮೊಕದ್ದಮೆ ಹೂಡಲಿಲ್ಲ. ಅಷ್ಟೇ ಅಲ್ಲ ಭಾರತದ ನ್ಯಾಯಾಲಯದಲ್ಲಿ ನಡೆಯಲಿರುವ ವಿಚಾರಣೆಗೆ ತಾನು ಹಾಜರಾಗುತ್ತೇನೆಂದು ಆತ ನೀಡಿದ ಮೌಖಿಕ ಆಶ್ವಾಸನೆಯ ಮೇರೆಗೆ ಆತ ಅಮೆರಿಕಕ್ಕೆ ಹಾರಿಹೋಗಲು ಅವಕಾಶ ನೀಡಿತ್ತು. ಇದಕ್ಕೆ ಪ್ರಧಾನಿಯ ಸಚಿವಾಲಯದಿಂದಲೇ ನೇರವಾಗಿ ಆದೇಶ ಬಂದಿತ್ತು. ಏಕೆಂದರೆ ಆ ವೇಳೆಗಾಗಲೇ ವಿದೇಶಿ ಬಂಡವಾಳಕ್ಕೆ ಆತಂಕ ಉಂಟುಮಾಡುವ ಯಾವುದೇ ನ್ಯಾಯಬದ್ಧ ಅಥವಾ ಕಾನೂನುಬದ್ಧ ಕ್ರಮಗಳನ್ನು ತೆಗೆದುಕೊಳ್ಳಬಾರದೆಂಬ ನೀತಿ ಸರ್ಕಾರದಲ್ಲಿ ದೃಢವಾಗಿ ನೆಲೆಯೂರಿತ್ತು.

ಅಂದು ಅಮೆರಿಕಕ್ಕೆ ಹಾರಿಹೋದ ಆಂಡರ್‌ಸನ್ ಇದುವರೆಗೂ ಭಾರತಕ್ಕೆ ಕಾಲಿಟ್ಟಿಲ್ಲ. ಅಮೆರಿಕದ ಕೋರ್ಟ್ ನಲ್ಲಾದರೂ ಆತನ ವಿಚಾರಣೆ ಮಾಡಬೇಕೆಂಬ ಭಾರತ ಸರ್ಕಾರದ ಅಹವಾಲನ್ನು ಅಮೆರಿಕ ತಿರಸ್ಕರಿಸಿದೆ. ಅಷ್ಟು ಮಾತ್ರವಲ್ಲ, ಆತನನ್ನು ಅಮೆರಿಕದಿಂದ ಭಾರತಕ್ಕಾದರೂ ಸಾಗಹಾಕಬೇಕೆಂಬ ಕೋರಿಕೆಯನ್ನೂ ಅಮೆರಿಕ ನಿರಾಕರಿಸಿದೆ. ಅಮೆರಿಕದ 8000 ಪ್ರಜೆಗಳ ಸಾವಿಗೆ ಕಾರಣನಾದನೆಂಬ ಊಹೆಯಿಂದಲೇ ಒಸಾಮಾ ಬಿನ್ ಲಾಡನ್‌ಗಾಗಿ ಅಫಘಾನಿಸ್ತಾನದ ಮೇಲೆ ಯುದ್ಧ





» ಶಿವಸುಂದರ್

ನಡೆಸುತ್ತಿರುವ ಅಮೆರಿಕ, ಹತ್ತಾರು ಸಾವಿರ ಜನರನ್ನು ಕೊಂದುಹಾಕಿರುವ ಅಮೆರಿಕ, 20,000ಕ್ಕೂ ಹೆಚ್ಚು ಭಾರತೀಯರ ಸಾವಿಗೆ ನೇರ ಕಾರಣನಾಗಿರುವ ಆಂಡರ್‌ಸನ್‌ಗೆ ಮಾತ್ರ ತನ್ನ ದೇಶದಲ್ಲಿ ಸಂಪೂರ್ಣ ರಕ್ಷಣೆ ಕೊಡುತ್ತಿದೆ.

1984ರಲ್ಲಿ ಆತನ ವಿರುದ್ಧ ಕೇಸು ದಾಖಲಾಗಿದ್ದರೂ 1992ರವರೆಗೆ ಯಾವುದೇ ಕೋರ್ಟಿನಲ್ಲಿ ಆಂಡರ್‌ಸನ್ ಹಾಜರಾಗದೇ ಇದ್ದದ್ದರಿಂದ ಭೂಪಾಲಿನ ಮ್ಯಾಜಿಸ್ಟ್ರೇಟ್ ಕೋರ್ಟು ಆತನನ್ನು 'ತಲೆ ಮರೆಸಿಕೊಂಡಿರುವ ಆರೋಪಿ' ಎಂದು ಘೋಷಿಸಿತು. ಈಗಲೂ ಆತ ಭಾರತದ ನ್ಯಾಯಾಲಯಗಳ ಪಾಲಿಗೆ ತಲೆ ಮರೆಸಿಕೊಂಡಿರುವ ಆರೋಪಿಯೇ! ಆದರೆ 2002ರಲ್ಲಿ ಗ್ರೀನ್‌ಪೀಸ್ ಎಂಬ ಪರಿಸರವಾದಿ ಸಂಘಟನೆಯ ಕಾರ್ಯಕರ್ತನೊಬ್ಬ ಆತನ ಇರುವಿಕೆಯನ್ನು ಪತ್ತೆಹಚ್ಚಿದ. ಆತ ಅಮೆರಿಕದ ಮಾಜಿ ಅಧ್ಯಕ್ಷರುಗಳು ವಾಸಿಸುವ ನ್ಯೂಯಾರ್ಕಿನ ಖಾಸಗಿ ಎಸ್ಟೇಟಿನಲ್ಲಿ ಐಷಾರಾಮೀ ಜೀವನ ನಡೆಸುತ್ತಿದ್ದಾನೆ. ಆದರೂ ಅಮೆರಿಕ ಆತನ ಪತ್ತೆಯೇ ಇಲ್ಲವೆಂದು ಈಗಲೂ ವಾದಿಸುತ್ತಿದೆ. ಅದು ಹೋಗಲಿ, ಭಾರತ ಸರ್ಕಾರ ಸಹ ಆತನನ್ನು ಭಾರತಕ್ಕೆ ಹಸ್ತಾಂತರಿಸುವ ಕೋರಿಕೆಯನ್ನು ಕೈಬಿಡುವುದು ವಾಸಿಯೆಂದು ಸಾಕ್ಷಾತ್ ಭಾರತದ ಸಾಲಿಸಿಟರ್ ಜನರಲ್ ಆಗಿದ್ದ ಸೋಲಿ ಸೊರಾಬ್ಜಿಯವರು ಭಾರತ ಸರ್ಕಾರಕ್ಕೆ ಸಲಹೆ ನೀಡಿದ್ದರು! ಇದರ ಹಿನ್ನೆಲೆಯಲ್ಲೇ ಪ್ರಕರಣದ ತನಿಖೆ ಮಾಡುತ್ತಿದ್ದ ಸಿಬಿಐ 20,000 ಜನರ ಸಾವಿಗೆ ಕಾರಣನಾಗಿದ್ದ ಆಂಡರ್‌ಸನ್ ವಿರುದ್ಧ ಕನಿಷ್ಠ 10 ವರ್ಷಗಳ ಕಾಲ ಶಿಕ್ಷೆಯಾಗುವ ಅಪರಾಧವಾದ ಕೊಲೆ ಹೊಣೆಗಾರಿಕೆಯ ಮೊಕದ್ದಮೆಯ (Culpabale Homicide) ಬದಲಾಗಿ ಗರಿಷ್ಠ ಎರಡು ವರ್ಷಗಳಷ್ಟು ಮಾತ್ರ ಸಜೆಯಾಗುವ ಅಪರಾಧಾತ್ಮಕ ಬೇಜವಾಬ್ದಾರಿ (Criminal negligence) ಮೊಕದ್ದಮೆಯನ್ನಾಗಿ ಬದಲಾಯಿಸಲೂ ಪ್ರಯತ್ನಿಸಿತ್ತು. ಆದರೆ ನ್ಯಾಯಾಲಯ ಛೀಮಾರಿ ಹಾಕಿದ ಮೇಲೆ ಆ ಪ್ರಯತ್ನಗಳನ್ನು ಕೈಬಿಟ್ಟಿತು.

ಇನ್ನು ಸತ್ತವರಿಗೆ ಮತ್ತು ನರಕದಂಥ ಬದುಕು ನಡೆಸುತ್ತಿರುವವರಿಗೆ ಕಂಪನಿಯಿಂದ ಸರ್ಕಾರ ಏನು ಪರಿಹಾರ ಕೊಡಿಸಿದೆ ಎಂಬುದನ್ನು ನೋಡಿದರೆ ಈ ಸರ್ಕಾರಗಳು ನಾವು ಆಯ್ಕೆ ಮಾಡಿದವೋ ಅಥವಾ ಕಂಪನಿಗಳು ಆಯ್ಕೆ ಮಾಡಿದವೋ ಎಂಬ ಅನುಮಾನ ಬರುತ್ತದೆ. ವಿಷಾನಿಲ ಸೋರಿಕೆಗೆ ಕಂಪನಿಯೇ ಕಾರಣವೆಂದು ಸಾಬೀತು ಪಡಿಸಿದ ಮೇಲೆ ಜನತೆಯ ಒತ್ತಾಯದ ಕಾರಣಕ್ಕೆ ಸರ್ಕಾರ ಕಂಪನಿಯಿಂದ ಮೂರು ಬಿಲಿಯನ್ ಡಾಲರ್ – ಅಂದರೆ ಇಂದಿನ ಲೆಕ್ಕದಲ್ಲಿ 15,000 ಕೋಟಿ ರೂಪಾಯಿ – ಪರಿಹಾರವನ್ನು ಕೇಳಿತು. ಇದು ಸಹ ಅಮೆರಿಕದಲ್ಲಿ ಇದೇ ಬಗೆಯ ದುರಂತ ಸಂಭವಿಸಿದ್ದರೆ ಕೊಡಬೇಕಾಗಿದ್ದ ಪರಿಹಾರದ ಶೇ.20ಕ್ಕಿಂತ ಕಡಿಮೆ. ಅಲ್ಲಿ ಸಮುದ್ರದಲ್ಲಿ ತೈಲ ಸೋರಿಕೆಯಾಗಿ ಮೀನುಗಳು ಸತ್ತಿದ್ದಕ್ಕೇ 25,000 ಕೋಟಿಗೂ ಹೆಚ್ಚಿನ ಪರಿಹಾರವನ್ನು ಅಲ್ಲಿನ ಕಂಪನಿಗಳು ತೆತ್ತಿವೆ. ಈ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ದೇಶದ ಮೀನುಗಳಿಗೆ ಕೊಡುವಷ್ಟು ಬೆಲೆಯನ್ನೂ ಭಾರತೀಯರ ಜೀವಗಳಿಗೆ ಕೊಡುವುದಿಲ್ಲ. ಹೋಗಲಿ ಕಾರ್ಬೈಡ್ ಕಂಪನಿ ಆ ಮೂರು ಬಿಲಿಯನ್ ಡಾಲರ್‌ಗಳನ್ನು ತೆತ್ತಿತೇ? ಇಲ್ಲ! 1989ರಲ್ಲಿ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯ ಇಡೀ ಪ್ರಕರಣಕ್ಕೆ ಅಂತಿಮ ಪರಿಹಾರವೆಂದು ಕೇವಲ 450 ಮಿಲಿಯನ್ ಡಾಲರ್ ಮೊತ್ತಕ್ಕೆ ಒಪ್ಪಿಕೊಳ್ಳಬೇಕೆಂದು ಆದೇಶ ಹೊರಡಿಸಿತು. ಅಂದರೆ ಸರ್ಕಾರ ಮೊದಲು ಕೇಳಿದ್ದ ಪರಿಹಾರದ ಶೇ.15ರಷ್ಟು ಮೊತ್ತಕ್ಕೆ – ಅಂದರೆ ಕೇವಲ 1500 ಕೋಟಿಗೆ – ಅಂತಿಮ ಸೆಟೆಲ್‌ಮೆಂಟ್ ಆಗಿಹೋಯಿತು. ಸರ್ಕಾರ ಇದರ ವಿರುದ್ಧ ಒಂದು ಸಣ್ಣ ಗೊಣಗಾಟವನ್ನೂ ಮಾಡಲಿಲ್ಲ. ಇಂಥ ಜನದ್ರೋಹಿ ಕಂಪನಿಪರ ಆದೇಶ ನೀಡಿದ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶ ಆರ್.ಎಸ್. ಪಾಠಕ್‌ರನ್ನು ಅಂತರರಾಷ್ಟ್ರೀಯ ನ್ಯಾಯಮಂಡಲಿಯ ನ್ಯಾಯಾಧೀಶನನ್ನಾಗಿ ನೇಮಕ ಮಾಡುವಂತೆ ವಿಶ್ವಸಂಸ್ಥೆಯಲ್ಲಿ ಅಮೆರಿಕ ಠರಾವು ಪಾಸು ಮಾಡಿತು!

ವಾಸ್ತವವಾಗಿ ಕಂಪನಿ ಕೇವಲ 3000 ಸಾವುಗಳನ್ನು ಮತ್ತು 1,02,000 ಬಾಧಿತರನ್ನು ಮಾತ್ರ ವಿಷಾನಿಲ ಸೋರಿಕೆಯಿಂದ ಹಾನಿಗೊಳಗಾದವರೆಂದು ಗುರುತಿಸಿತು. ಆದರೆ 2005ರಲ್ಲಿ ಸರ್ಕಾರದ ವೆಲ್‌ಫೇರ್ ಕಮಿಷನರ್‌ರವರೇ ಗುರುತಿಸಿದ ಹಾಗೆ ಸತ್ತವರ ಸಂಖ್ಯೆ 8000 ಮತ್ತು ಬಾಧಿತರ ಸಂಖ್ಯೆ 5,25,000. ಅಂದರೆ ಒಟ್ಟು ಬಾಧಿತರಲ್ಲಿ ಕೇವಲ 1/5 ಭಾಗದಷ್ಟು ಜನರಿಗೆ ಮಾತ್ರ ಕಂಪನಿ ಪರಿಹಾರ ವಿತರಣೆ ಮಾಡಿದೆ. ಆದ್ದರಿಂದ ಪರಿಹಾರದ ಮೊತ್ತವನ್ನು ಐದು ಪಟ್ಟಾದರೂ ಹೆಚ್ಚಿಸಬೇಕೆಂದು ಬಾಧಿತರು ಹೋರಾಡುತ್ತಲೇ ಇದ್ದಾರೆ. ಆದರೆ ಸರ್ಕಾರವಾಗಲೀ, ಕೋರ್ಟುಗಳಾಗಲೀ ಅದಕ್ಕೆ ಮನ್ನಣೆ ಕೊಡುತ್ತಿಲ್ಲ. ಹೀಗಾಗಿ ಬಾಧಿತರಿಗೆ ಹೆಚ್ಚೆಂದರೆ 80,000 ರೂ. ಮಾತ್ರ ಈವರೆಗೆ ದೊರೆತಿದೆ. ಇದು ಕಳೆದ 25 ವರ್ಷಗಳಲ್ಲಿ ಅವರು ಔಷಧಿಗಳ ಮೇಲೆ ಮಾಡಿರುವ ವೆಚ್ಚವನ್ನೂ ತುಂಬಿಕೊಡುವುದಿಲ್ಲ!

ಭೂಪಾಲ್ ದುರಂತ ಸಂಭವಿಸಿ 25 ವರ್ಷಗಳಾಗಿರುವ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮತ್ತು ಮಧ್ಯಪ್ರದೇಶ ಸರ್ಕಾರ ಭೂಪಾಲ್ ಜನರ ಬವಣೆಯನ್ನು ಮತ್ತು ಬಾಧೆಗಳನ್ನು ಅಪಹಾಸ್ಯ ಮಾಡುವ ಮತ್ತೊಂದು ಕುತಂತ್ರವನ್ನು ನಡೆಸುತ್ತಿದೆ. ಭೂಪಾಲ್ ದುರಂತ ಸಂಭವಿಸಿದಾಗ ಇಡೀ ಕಾರ್ಖಾನೆ ಆವರಣವೇ ವಿಷಾನಿಲದಿಂದ ಕಲುಷಿತವಾಯಿತು. ಮಾತ್ರವಲ್ಲ, ಕಾರ್ಖಾನೆಯಲ್ಲಿ ನೂರಾರು ಟನ್ ವಿಷಕಾರಕ ವಸ್ತುಗಳ ದಾಸ್ತಾನಿತ್ತು. ಅವುಗಳಿಂದಾಗಿ ಈಗಲೂ ಫ್ಯಾಕ್ಟರಿಯ ಸುತ್ತಮುತ್ತಲಿನ ಕುಡಿಯುವ ನೀರು ಮತ್ತು ಗಾಳಿಯೆಲ್ಲಾ ಕಲುಷಿತವಾಗುತ್ತಿದೆ. ಹೀಗಾಗಿ ಫ್ಯಾಕ್ಟರಿ ಪರಿಸರವನ್ನು ಸ್ವಚ್ಛಗೊಳಿಸಬೇಕೆಂದು ಭೂಪಾಲಿನ ಜನತೆಯ ಜೊತೆಗೆ ಇಡಿ ಭಾರತದ ಜನ ಆಗ್ರಹಪಡಿಸುತ್ತಿದ್ದಾರೆ. ಫ್ಯಾಕ್ಟರಿ ಪರಿಸರವನ್ನು

▶▶▶13

...ಲುಬಿಲ್ಲದ ನಾಲಿಗೆಗಳ ನಡುವೆ...




ಕಂಡಹಾಗೆ

■ ಗೌರಿ ಲಂಕೇಶ್

ಮೊನ್ನೆ ಜೀ ಟಿವಿಗೆ ಮಾಳವಿಕಾ ನಡೆಸಿಕೊಡುವ ...ಮಕು ಜಟಕಾ ಬಂಡಿ' ಕಾರ್ಯಕ್ರಮದಲ್ಲಿ 'ಲವ್ ...ಹಾದ್' ಎಂಬ ಕಪೋಲಕಲ್ಪಿತ ಕಾರ್ಯಾಚರಣೆ ಕುರಿತ ...ಯಲ್ಲಿ ಭಾಗವಹಿಸಲು ನನ್ನನ್ನು ಆಹ್ವಾನಿಸಿದ್ದರು. ...ಮ ನನ್ನೊಂದಿಗೆ ಆ ಚರ್ಚೆಯಲ್ಲಿ ಭಾಗವಹಿಸಿದ್ದವರು ...ರಾಮ ಸೇನೆಯ ನಾಯಕ ಪ್ರಮೋದ್ ಮುತಾಲಿಕ್, ...ಳಾ ವಿರೋಧಿ ಭಾರತೀಯ ಜನತಾ ಪಕ್ಷದ ಸದಸ್ಯೆ ...ಮೀಳಾ ನೇಸರ್ಗಿ ಮತ್ತು ಸಿಲ್ವರಾಜ್ ಎಂಬ ಯುವತಿಗೆ ...ನೂನು ಸಲಹೆ ನೀಡಿದ್ದ ವಕೀಲ ಇರ್ಷಾದ್ ಅಹಮದ್ ...ರು.

ಎರಡು ಕಂತುಗಳಲ್ಲಿ ಎರಡು ದಿನ ...ಾರಗೊಂಡ ಈ ...ಯನ್ನು ಹಲವಾರು ನೋಡಿರಬಹುದು. ...ರೂ ಸಮಯದ ...ಾವದಿಂದ ಅಂದಿನ ...ಯ ಹಲವು ...ಗಗಳಿಗೆ ಕತ್ತರಿ ...ದ್ದರಿಂದ ಮತ್ತು ಆ ...ಯಲ್ಲಿ ಮುತಾಲಿಕ್ ...ತ್ತು ನೇಸರ್ಗಿ ಹಲವಾರು ...ಡವಾದಗಳನ್ನು ...ಡಿಸಿದ್ದರಿಂದ ಅವುಗಳಲ್ಲಿ ...ವನ್ನು ಇಲ್ಲಿ ...ಸುತ್ತಿದ್ದೇನೆ.



ಈಗಾಗಲೇ ಎಲ್ಲರಿಗೂ ...ತ್ತಿರುವಂತೆ ...ರಕ್ಷಣೆಯ ನೆಪದಲ್ಲಿ, ದೇಶದ ಭದ್ರತೆಯ ...ರಲ್ಲಿ, ಅಭಿವೃದ್ಧಿಯ ಸೋಗಿನಲ್ಲಿ, ಭಾರತೀಯ ...ಸ್ಕೃತಿ ರಕ್ಷಕರ ಗತ್ತಿನಲ್ಲಿ ಸಂಘ ಪರಿವಾರದ ...ದೂತ್ವವಾದಿಗಳು ಈ ದೇಶದ ಅಲ್ಪಸಂಖ್ಯಾತರ ...ದ್ಧ ಸತತವಾಗಿ ತಂತ್ರಗಳನ್ನು ಹೆಣೆಯುತ್ತಲೇ ...ದ್ದಾರೆ. ಲವ್ ಜಿಹಾದ್ ಕೂಡ ಅಂತಹ ...ತ್ರಗಳಲ್ಲಿ ಒಂದು.

ಅದು ಬದಿಗಿರಲಿ. ಅಂದು ಚರ್ಚೆಯಲ್ಲಿ ನಡೆದ ...ವು ಸಂಗತಿಗಳಿಗೆ ಬರೋಣ.....

ಜೋರಾಗಿ ಮಾತನಾಡುವುದನ್ನೇ ತನ್ನ ಬಂಡವಾಳ ...ಡಿಕೊಂಡಿರುವ, ವಾಸ್ತವದ ಬಗ್ಗೆ ಕಿಂಚಿತ್ತೂ ತಲೆ ...ಕೊಳ್ಳದ ಪ್ರಮೋದ್ ಮುತಾಲಿಕ್ 60 ಹಿಂದೂ ...ವತಿಯರು ಮುಸಲ್ಮಾನರನ್ನು ಮದುವೆ ಆಗಿ ತಾವು ...ಹ ತಪ್ಪು ಮಾಡಿದ್ದೇವೆಂದು ಪರಿತಪಿಸಿರುವ ಸೀಡಿ ...ಬಳಿ ಇದೆ ಎಂದು ಹೇಳಿದರು. ಆ ಸೀಡಿಯ ...ಯೊಂದನ್ನು ನನಗೆ ಕೊಡಿ, ಅದನ್ನು ನೋಡಲು ...ೂ ಕುತೂಹಲವಿದೆ ಎಂದು ನಾನು ಹೇಳಿದೆ. ಆದರೆ ...ಗೆ ಅದನ್ನು ತಂದಿಲ್ಲ" ಎಂದರು. ಹಾಗಾದರೆ ಪೋಸ್ಟ್ ...ಡಿ ಎಂದು ನನ್ನ ಆಫೀಸ್ ವಿಳಾಸವನ್ನು ಕೊಟ್ಟೆ. ...ಗಿ ಹತ್ತು ದಿನಗಳು ಕಳೆದಿದ್ದರೂ ಇಲ್ಲಿಯವರೆಗೂ ...ಸೀಡಿಯ ಪತ್ತೆಯೇ ಇಲ್ಲ. ಹೀಗಿರುವಾಗ ಅಂತಹ ...ಒಂದು ಮುತಾಲಿಕ್ ಬಳಿ ಇದೆಯೆಂದಾಗಲಿ, ...ದರಲ್ಲಿ ಹಿಂದೂ ಮಹಿಳೆಯರು ಪಶ್ಚಾತ್ತಾಪ ...ಪಡಿಸಿದ್ದಾರೆಂದಾಗಲಿ ನಂಬುವುದು ಹೇಗೆ?

* * * * *

...ಲವ್ ಜಿಹಾದ್ ಎಂಬುದು ಎಷ್ಟು ಕಲ್ಪಿತ ಕತೆಯೋ ...ವಾಸ್ತವವಾದದ್ದು ಅಮಾಯಕ ಬಡ ಹಿಂದೂ ...ಹಿಳೆಯರನ್ನು ಕೊಂದ ಸರಣಿ ಹಂತಕ ಮೋಹನ್ ...ಮಾರನ ಪ್ರಕರಣ ಎಂದು ನಾನು ವಾದಿಸಿದೆ. ಅದನ್ನು ...ಮುತಾಲಿಕ್ ತನ್ನ ವಾದವನ್ನು ಸಮರ್ಥಿಸಿಕೊಳ್ಳುವ ...ದಲ್ಲಿ "ಆದರೆ ಆತ ಯಾರನ್ನು ಹಿಂದೂ ಮಾಡಲಿಲ್ಲ, ...ಲೋ ಮಾಡಲಿಲ್ಲ" ಎಂದು ಏರಿದ ದನಿಯಲ್ಲಿ ...ಿದರು. ಅವರ ಮಾತಿನ ಅರ್ಥ ನನಗೆ ಆಗ ...ತ್ತಾಗಲೇ ಇಲ್ಲ, ನನ್ನ ಪಕ್ಕದಲ್ಲಿ ಕೂತಿದ್ದ ...ರ್ಷಾದ್‌ರವರನ್ನು "What does he mean ...that?" ಎಂದು ಕೇಳಿದೆ. ಆದರೆ ಅದೇ ಹೊತ್ತಿಗೆ ...ಮೀಳಾ ನೇಸರ್ಗಿ ಮಧ್ಯೆ ಬಾಯಿ ಹಾಕಿದ್ದರಿಂದ ಚರ್ಚೆ ...ತಾಲಿಕರ "ಯಾರನ್ನು ಹಿಂದೂ ಮಾಡಲಿಲ್ಲ" ಎಂಬ ...ನಿಂದ ಬೇರೆ ದಿಕ್ಕಿನತ್ತ ಸಾಗಿತು.

...ಮೊನ್ನೆ ಈ ಕಾರ್ಯಕ್ರಮ ಪ್ರಸಾರಗೊಂಡು ...ತಾಲಿಕರ ಆ ಮಾತನ್ನು ಮತ್ತೆ ಕೇಳಿದಾಗ ಹೊಳೆಯಿತು: ...ರಣಿ ಸರಣಿ ಹಂತಕ ಮೋಹನ್ ಕುಮಾರ್ ಇಪ್ಪತ್ತೂ... ಅಮಾಯಕ ಮಹಿಳೆಯರ ಪ್ರಾಣವನ್ನೇ ಬಲಿ ತೆಗೆದುಕೊಂಡಿದ್ದರೂ ಆತ ಅವರ್ಯಾರನ್ನೂ ಮತಾಂತರಗೊಳಿಸಲಿಲ್ಲ ಎಂಬುದು ಮುತಾಲಿಕ್ ಮಾತಿನ ಅರ್ಥವಾಗಿತ್ತು, ಅವರ ಮಾತಿನ ಧಾಟಿ ಹೇಗಿತ್ತೆಂದರೆ ಮೋಹನ್‌ಕುಮಾರ್ ಕೊಂದ ಯಾರನ್ನು ಹಿಂದೂ ಧರ್ಮಕ್ಕೆ ಮತಾಂತರ ಮಾಡದಿದ್ದರಿಂದ ಅವನು ಮಾಡಿದ ಭೀಕರ ಕೊಲೆಗಳೂ ಕ್ಷಮಾರ್ಹ ಎಂಬಂತಿತ್ತು.

ಈ ನನ್ನ ತರ್ಕ ಸರಿಯಾಗಿದ್ದರೆ ಹಿಂದೂ ಮಹಿಳೆಯರ ಪ್ರಾಣಗಳ ಬಗ್ಗೆ ಮುತಾಲಿಕ್ ಮತ್ತಾತನ ಹಿಂದೂತ್ವವಾದಿ ಗೆಳೆಯರ ಧೋರಣೆ ಎಷ್ಟು ಆಘಾತಕಾರಿಯಾಗಿದೆ ಎಂಬುದನ್ನು ಗಮನಿಸಬೇಕು. ಮುಸಲ್ಮಾನ ಹುಡುಗನೊಬ್ಬ ಓರ್ವ ಹಿಂದೂ ಹುಡುಗಿಯನ್ನು ಪ್ರೀತಿಸಿ ಆಕೆಯನ್ನು ಮದುವೆಯಾಗಿ ಆಕೆ ತನ್ನ ಧರ್ಮವನ್ನು ಸ್ವೀಕರಿಸುವಂತೆ ಮಾಡಿದರೆ ಅದು ಇವರ ಕಣ್ಣಲ್ಲಿ ಘೋರ ಅಪರಾಧ. ಆದರೆ ಮೋಹನ್ ಕುಮಾರ್ ನಂತಹ ವಿಕೃತ ಕಾಮಿಗಳು ಬಡ ಹಿಂದೂ ಮಹಿಳೆಯರನ್ನು ಮದುವೆಯಾಗುವುದಾಗಿ ವಂಚಿಸಿ, ಅವರನ್ನು ಅಮಾನುಷವಾಗಿ ಕೊಂದು ಹಾಕಿದ್ದರೂ ಅವರನ್ನು ಆತ ಬೇರೆ ಧರ್ಮಕ್ಕೆ ಮತಾಂತರಿಸಲಿಲ್ಲವಾದ್ದರಿಂದ ಆತನ ಕೃತ್ಯ ಇವರಿಗೆ ಸಹ್ಯ. ಇದರ ಅರ್ಥ ಇಷ್ಟೇ: ಈ ಧೋರಣೆಯ ಹಿಂದೂತ್ವವಾದಿಗಳು ಮೋಹನ್ ಕುಮಾರನಿಗಿಂತಲೂ ಹೆಚ್ಚು ವಿಕೃತರು, ಆತನಿಗಿಂತಲೂ ದೊಡ್ಡ ಕೊಲೆಗಡುಕರು ಎಂದಲ್ಲವೇ?

* * * * *

ಪ್ರಮೀಳಾ ನೇಸರ್ಗಿ ಅವರನ್ನು 'ಹಿರಿಯ ವಕೀಲೆ' ಎಂದೇ ಮಾಧ್ಯಮಗಳು ಬಿಂಬಿಸುತ್ತವೆ ಮತ್ತು ಹಾಗೆಂದೇ ಜನ ಕೂಡ ನಂಬಿದ್ದಾರೆ. ಅದಕ್ಕೆ ಕಾರಣವೂ ಇರಬಹುದು. ನೇಸರ್ಗಿ ಕನಿಷ್ಠ ಮೂರು ದಶಕಗಳ ಕಾಲ ವಕೀಲಿ ವೃತ್ತಿಯಲ್ಲಿ ತೊಡಗಿರುವವರು, ಆ ಆಧಾರದ ಮೇಲೆಯೇ ಮಹಿಳಾ ಆಯೋಗದ ಅಧ್ಯಕ್ಷೆ ಸ್ಥಾನವನ್ನು (ಅವರ ನೇತೃತ್ವದಲ್ಲಿ 'ನರ್ಸ್' ರೇಣುಕಾಚಾರಿ ಕುರಿತ ಫೈಲ್‌ಗಳು ನಾಪತ್ತೆಯಾಗಿದ್ದು ಅವರ ಮಹಿಳಾ ಕಾಳಜಿಗೆ ಕನ್ನಡಿ, ಇರಲಿ) ಅನುಭವಿಸಿದವರು, ಕರ್ನಾಟಕ ಹೈಕೋರ್ಟಿನಲ್ಲಿ ನ್ಯಾಯಮೂರ್ತಿಯಾಗಿದ್ದ ದಿವಂಗತ ನೇಸರ್ಗಿಯವರ ಪತ್ನಿಯಾಗಿದ್ದವರು ಪ್ರಮೀಳಾ.



ಇಂತಹ ಪ್ರಮೀಳಾ ಅಂದಿನ ಕಾರ್ಯಕ್ರಮದಲ್ಲಿ ಸಿಲ್ವಾ ಪ್ರಕರಣ ನಡೆದಾಗ ತಾನು ನ್ಯಾಯಾಲಯದಲ್ಲಿ ಉಪಸ್ಥಿತಳಿದ್ದೆ ಎಂದರಲ್ಲದೆ, ವಕೀಲ ಇರ್ಷಾದ್ ಅಹಮದ್ ಅವರು ಸಿಲ್ವಾಳಿಗೆ ನೆರವು ಮತ್ತು ಸಲಹೆಗಳನ್ನು ನೀಡುತ್ತಿರುವುದನ್ನು ಕಣ್ಣಾರೆ ಕಂಡೆ ಅಂದರು. ಆದರೆ ಅದೇ ಉಸಿರಿನಲ್ಲಿ "ಸಿಲ್ವಾಳ ಪ್ರಿಯಕರ ಅಸ್ಗರ್‌ನಿಗೆ ನ್ಯಾಯಾಲಯದ ಮುಂದೆ ಹೇಬಿಯಸ್ ಕಾರ್ಪಸ್ ಸಲ್ಲಿಸಲು ನೀವು ನೀಡಿದ ನೆರವು ಎಂತಹದ್ದು? ಡ್ರೈವರ್ ಆದ ಆತನಿಗೆ ಅದನ್ನು ಸಲ್ಲಿಸಲು ಹಣ ಎಲ್ಲಿಂದ ಬಂತು? ಆತ ನಿಮಗೆ ನೀಡಿದ ಫೀ ಅನ್ನು ಭರಿಸಿದ್ದು ಯಾರು?" ಎಂದೆಲ್ಲ ಪ್ರಶ್ನಿಸಿದರು. ಸಹಜವಾಗಿಯೇ ನೇಸರ್ಗಿಯೊಂದಿಗೆ ಮುತಾಲಿಕ್ ಕೂಡ ದನಿಗೂಡಿಸಿದರು. ಅವರ ಈ ಪ್ರಶ್ನೆಗಳ ಹಿಂದೆ 'ಲವ್ ಜಿಹಾದ್'ಗೆ ವಿದೇಶಗಳಿಂದ ಹಣ ಬರುತ್ತಿದೆ ಎಂದು ಪ್ರಚಾರಪಡಿಸುವ ಉದ್ದೇಶವಿತ್ತು.

ಇಲ್ಲಿ ಒಂದೆರಡು ಮುಖ್ಯ ಅಂಶಗಳನ್ನು ಕಾಣಿಸಬೇಕು. ಪ್ರಮೀಳಾ ನೇಸರ್ಗಿ ನಿಜವಾಗಲೂ ಓರ್ವ ಹಿರಿಯ ಮತ್ತು ದಕ್ಷ ವಕೀಲರಾಗಿದ್ದರೆ ಅವರಿಗೆ ಹೇಬಿಯಸ್ ಕಾರ್ಪಸ್ ಅಂದರೇನೆಂದು ಮೊದಲು ಗೊತ್ತಿರಬೇಕಿತ್ತು. ನಾನು ಕಾನೂನು ವಿದ್ಯಾರ್ಥಿ ಆಗಿಲ್ಲದಿದ್ದರೂ ಹೇಬಿಯಸ್ ಕಾರ್ಪಸ್ ಅಂದರೆ ನಮ್ಮ ಸಂಬಂಧಿಕರೊಬ್ಬರು ನಾಪತ್ತೆಯಾಗಿದ್ದಾರೆಂದೂ, ಅವರನ್ನು ಪೊಲೀಸರು ಪತ್ತೆಹಚ್ಚಿ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕೆಂದೂ ಕೋರ್ಟಿನ ಮುಂದೆ ಸಲ್ಲಿಸುವ ಅರ್ಜಿ. ಸಿಲ್ವಾ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಹೇಬಿಯಸ್ ಕಾರ್ಪಸ್ ಸಲ್ಲಿಸಿದ್ದು ಅಸ್ಗರ್ ಅಲ್ಲ, ಹಾಗೆ ಅರ್ಜಿ ಸಲ್ಲಿಸುವ ಜರೂರತ್ತೂ ಆತನಿಗಿರಲಿಲ್ಲ, ಯಾಕೆಂದರೆ ಆತನೊಂದಿಗೆ ಆತನ ಮಡದಿ ಸಿಲ್ವಾ ಇದ್ದಳು. ವಾಸ್ತವವಾಗಿ ಸಿಲ್ವಾ ಕುರಿತಂತೆ ಹೇಬಿಯಸ್ ಕಾರ್ಪಸ್ ಸಲ್ಲಿಸಿದ್ದು ಆಕೆಯ ತಂದೆ ಸೆಲ್ವರಾಜ್. ಇದರ ಬಗ್ಗೆ ಗೊತ್ತಾಗುತ್ತಿದ್ದಂತೆ ಸಿಲ್ವಾ ನ್ಯಾಯಾಲಯದ ಮುಂದೆ ಹಾಜರಾಗಿ ತಾನು ಮೇಜರ್ ಎಂದೂ, ತಾನು ಸ್ವಇಚ್ಛೆಯಿಂದ ಅಸ್ಗರ್‌ನೊಂದಿಗೆ ಜೀವಿಸುತ್ತಿದ್ದೇನೆಂದೂ, ಮತಾಂತರಗೊಳ್ಳುವುದಕ್ಕೆ ತನ್ನ ಮೇಲೆ ಯಾವ ಒತ್ತಡವೂ ಇಲ್ಲವೆಂದೂ ಹೇಳಿದಳು.

ಆದರೆ ಹೇಬಿಯಸ್ ಕಾರ್ಪಸ್ ಎಂದರೇನೆಂದೂ ಗೊತ್ತಿರದ ಹಿರಿಯ ವಕೀಲೆ ನೇಸರ್ಗಿ "ಅದನ್ನು ಸಲ್ಲಿಸಲು ಅಸ್ಗರನಿಗೆ ಎಲ್ಲಿಂದ ಹಣ ಬಂತು?" ಎಂದು ಪ್ರಶ್ನಿಸಿದರು! ಮುಸಲ್ಮಾನರ ವಿರುದ್ಧ ಅವರಲ್ಲಿ ಅಡಗಿರುವ ದ್ವೇಷವೇ ಅವರನ್ನು ಇಂತಹ ಅಪಹಾಸ್ಯಕ್ಕೆ ದೂಡಿತ್ತು!

* * * * *

ಬಾಯಿಗೆ ಬಂದದ್ದನ್ನು ಒದರುವುದೇ ವಾದ, ಕಿರುಚುವುದೇ ಚರ್ಚೆ ಎಂದು ಭಾವಿಸಿರುವ ನೇಸರ್ಗಿ 'ಜಿಹಾದ್ ಎಂಬುದೇ ಮುಸ್ಲಿಮ್ ಪದ' ಎಂದು ಘೋಷಿಸಿದರು. ಮುಸ್ಲಿಮ್ ಎಂಬುದು ಭಾಷೆ ಅಲ್ಲ, ಜಿಹಾದ್ ಎಂಬುದು ಪರ್ಶಿಯನ್ ಪದ ಎಂದು ಗೊತ್ತಿಲ್ಲದ ಹಿರಿಯ ನಾಯಕಿ ಈಕೆ. ಅಂದು ನೇಸರ್ಗಿ ಹೇಳಿದ್ದೆಲ್ಲಾ ಭಂಡವಾದದ ಪರಮಾವಧಿ ಎಂಬಂತಿತ್ತು. ಚರ್ಚೆ ಆರಂಭವಾದಾಗ ನೇಸರ್ಗಿ ಹೇಳಿದ್ದು: "ಕನಿಷ್ಠ 50ಕ್ಕೂ ಹೆಚ್ಚು ಹಿಂದೂ ಯುವತಿಯರನ್ನು ಮುಸಲ್ಮಾನರು ಅಪಹರಿಸಿ, ಅವರನ್ನೆಲ್ಲ ಬೆಂಗಳೂರಿನ ಒಂದು ಮಸೀದಿಯಲ್ಲಿ ಕೂಡಿ ಹಾಕಿದ್ದಾರೆ. ಅವರಿಗೆಲ್ಲ ಅಲ್ಲಿ ಖುರಾನ್ ಅನ್ನು ಬೋಧಿಸಲಾಗುತ್ತಿದೆ. ಅಲ್ಲಿನ ಮೌಲ್ವಿಗಳು ಮುಸಲ್ಮಾನ ಹುಡುಗರೊಂದಿಗೆ ಅವರ ನಿಕ್ಕಾನಾಮ (ಮದುವೆ) ಮಾಡಿಸುತ್ತಿದ್ದಾರೆ. ಇದನ್ನು ಕುರಿತ ಎಲ್ಲ ಮಾಹಿತಯನ್ನು ನಾನು ಡಿಜಿಪಿಗೆ ಸಲ್ಲಿಸಲಿದ್ದೇನೆ....."

ಆನಂತರ ನಾನು ನೇಸರ್ಗಿಗೆ ಕೇಳಿದ ಪ್ರಶ್ನೆಗಳಿಗೆ ಎಡಿಟಿಂಗ್ ಟೇಬಲ್ ಮೇಲೆ ಕತ್ತರಿ ಬಿದ್ದಿದ್ದರಿಂದ ಅದು ಪ್ರಸಾರವಾಗಲಿಲ್ಲ. ನಾನು ಅವರನ್ನು ಕೇಳಿದ ಪ್ರಶ್ನೆ: "ಇಷ್ಟು ದೊಡ್ಡ ಮಾಹಿತಿ ನಿಮ್ಮಲ್ಲಿದ್ದರೂ ಯಾಕೆ ಸುಮ್ಮನಿದ್ದೀರಿ. ಮೊನ್ನೆ ಲವ್ ಜಿಹಾದ್ ಕುರಿತಂತೆ ಪೊಲೀಸರು ನ್ಯಾಯಾಲಯಕ್ಕೆ ಮಾಹಿತಿ ನೀಡಬೇಕೆಂದು ನ್ಯಾಯಮೂರ್ತಿಗಳು ಹೇಳಿದ್ದಾಗಲೇ ನೀವು ಇದನ್ನು ಡಿಜಿಪಿ ಅವರಿಗೆ ಕೊಡಬಹುದಿತ್ತಲ್ಲ? ಅವರು ಆ ಮಸೀದಿಯ ಮೇಲೆ ದಾಳಿ ನಡೆಸಿ ಆ ಹುಡುಗಿಯರನ್ನು ಬಿಡುಗಡೆಗೊಳಿಸಬಹುದಿತ್ತಲ್ಲ? ಲವ್ ಜಿಹಾದ್ ಹೆಸರಲ್ಲಿ ಆ ಹುಡುಗಿಯರು ಮತಾಂತರಗೊಳ್ಳುವುದನ್ನು ತಡೆಯಬಹುದಿತ್ತಲ್ಲಾ? ನಿಮ್ಮ ಬಳಿ ನಿಜವಾಗಲೂ ಅಂತಹ ಮಾಹಿತಿ ಇದ್ದರೆ ಕೂಡಲೇ ಪೊಲೀಸರಿಗೆ ಕೊಡಿ. ಹೋಗಲಿ, ನನಗಾದರೂ ಕೊಡಿ, ನಾನೇ ಅದನ್ನು ಪೊಲೀಸರಿಗೆ ಮುಟ್ಟಿಸಿ ಆ ಹುಡುಗಿಯರು ಬಿಡುಗಡೆಗೊಳ್ಳುವಂತೆ ಯತ್ನಿಸುತ್ತೇನೆ."

ಅದಕ್ಕೆ ನೇಸರ್ಗಿ ಕೊಟ್ಟ ಉತ್ತರ ಏನು ಗೊತ್ತಾ? "ಇಲ್ಲ, ಆ ಮಾಹಿತಿಯನ್ನು ನಾನೀಗಾಗಲೇ ಡಿಜಿಪಿ ಅವರಿಗೆ ಕೊಟ್ಟಿದ್ದೇನೆ. ಆದರೆ ಮುಸಲ್ಮಾನರಿಗೆ ಹೆದರಿ ಅವರು ಯಾವುದೇ ಕ್ರಮ ಕೈಗೊಂಡಿಲ್ಲ" ಎಂದರು. ಅಂದರೆ "ಪೊಲೀಸರಿಗೆ ಮಾಹಿತಿ ನೀಡಲಿದ್ದೇನೆ" ಎಂದಿದ್ದ ನೇಸರ್ಗಿ ಎರಡು ನಿಮಿಷಗಳ ನಂತರ "ನಾನು ಈಗಾಗಲೇ ಡಿಜಿಪಿಗೆ ಮಾಹಿತಿ ನೀಡಿದ್ದೇನೆ. ಆದರೆ ಅವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ" ಎಂದು ಪ್ಲೇಟ್ ಬದಲಾಯಿಸಿದ್ದರು.

ಚರ್ಚೆ ಮುಗಿದ ನಂತರ ಸ್ಟುಡಿಯೋದ ಹೊರಗೆ ನಿಂತು ಚರ್ಚಿಸುತ್ತಿದ್ದಾಗಲೂ ನೇಸರ್ಗಿ ಅದೇ ವಾದವನ್ನು ಮುಂದುವರೆಸಿದರು. ಆಗ ನಾನು "ಬನ್ನಿ, ನಾನು ನಿಮ್ಮೊಂದಿಗೆ ಬರುತ್ತೇನೆ. ಕಮಿಷನರ್ ಶಂಕರ್ ಬಿದರಿ ಅವರಿಗೂ ಈ ಬಗ್ಗೆ ತಿಳಿಸಿ ಪೊಲೀಸ್ ಬಂದೋಬಸ್ತ್‌ನೊಂದಿಗೆ, ಇತರೆ ಮಹಿಳಾ ಸಂಘಟನೆಗಳೊಂದಿಗೆ ಹೋಗಿ ಆ ಹುಡುಗಿಯರನ್ನು ಕರೆದುಕೊಂಡು ಬರೋಣ" ಅಂದೆ. ಆಗ ನೇಸರ್ಗಿ "ಅದು ಸಾಮಾನ್ಯ ಕಟ್ಟಡವಲ್ಲ, ಸ್ಟೀಲ್‌ನಿಂದ ನಿರ್ಮಿಸಿರುವ ಕಟ್ಟಡ. ಅಲ್ಲಿಗೆ ಯಾರೂ ಹೋಗೋದಕ್ಕೆ ಆಗಲ್ಲ, ನಾನು ಅವರ ಬಗ್ಗೆ ಆಗಲೇ ಕಮಿಷನರ್ ಅವರಿಗೆ ತಿಳಿಸಿದ್ದೇನೆ. ಅವರು ಏನೂ ಮಾಡಲಿಲ್ಲ..." ಎಂದೆಲ್ಲ ರೀಲ್ ಬಿಡುತ್ತಲೇ ಸಾಗಿದರು. ಅವರ ಈ ಲಂಗುಲಗಾಮಿಲ್ಲದ ಕಪೋಲಕಲ್ಪಿತ ಕತೆಗೆ ಕಡಿವಾಣ ಹಾಕಲು ನಾನು "ಚುಪ್, ಚುಪ್, ಶೂ, ಶೂ, ಶೂ" ಎಂದು ಚಿಕ್ಕಮಕ್ಕಳಿಗೆ ಹೇಳುವಂತೆ ಅವರಿಗೆ ಹೇಳುತ್ತಿದ್ದೆ. ಅದನ್ನೆಲ್ಲ ಟೀವಿಯಲ್ಲಿ ಕಂಡು ನನಗೇ ನಗುಬಂತು. ಆಮೇಲೆ ನೇಸರ್ಗಿ ಅವರಿಗೆ ಹೇಳಿದೆ "ಸುಳ್ಳು ಹೇಳುವುದಕ್ಕೂ ಒಂದು ಮಿತಿ ಇರಬೇಕು" ಎಂದು. ಆಕೆ ಕಾರ್ಯಕ್ರಮದಲ್ಲಿ ಹೇಳಿದ್ದು ಆನಂತರ ಭಂಡತನದಿಂದ ವಾದಿಸಿದ್ದೆಲ್ಲ ಸುಳ್ಳು ಎಂಬುದು ಜಗಜ್ಜಾಹೀರಾಯಿತು ಎಂಬ ಸಂತಸವಂತೂ ನನಗಿದೆ.

ಇನ್ನು ಬುದ್ಧಿ ಮೇಲಾಗಲಿ, ನಾಲಿಗೆ ಮೇಲಾಗಲಿ ಹಿಡಿತವಿಲ್ಲದೆ ಚೀರಾಡುತ್ತಿದ್ದ ನೇಸರ್ಗಿ ಅವತ್ತಿನ ಕಾರ್ಯಕ್ರಮದಲ್ಲಿ ಹೇಳಿದ ಇನ್ನೊಂದು ಮಾತನ್ನು ಎಷ್ಟು ಜನ ಗಮನಿಸಿದರೋ ಗೊತ್ತಿಲ್ಲ. ಮುಸಲ್ಮಾನರಿಂದ "ಅಪಹರಣ"ಗೊಂಡ ಹಿಂದೂ ಯುವತಿಯರ ಬಗ್ಗೆ ಮಾತನಾಡುತ್ತಾ "ಅವರೆಲ್ಲ ಈಗ ಎಲ್ಲಿದ್ದಾರೆ, ಹೇಗಿದ್ದಾರೆ, ದೇಶದಲ್ಲಿದ್ದಾರೋ ಅಥವಾ ಬೇರೆ ದೇಶಗಳಿಗೆ ಸಾಗಿಸಲ್ಪಟ್ಟಿದ್ದಾರೋ, ಮಹಿಳೆಯರಾಗಿ ಉಳಿದಿದ್ದಾರೋ ಎಂದೆಲ್ಲಾ ತನಿಖೆ ಮಾಡಬೇಕು" ಎಂದರು ನೇಸರ್ಗಿ. ಅದು ಪ್ರಸಾರ ಕೂಡ ಆಯಿತು. ಅವರ ಈ ಮಾತು ಕೇಳಿ ನನಗೆ ಎಷ್ಟು ನಗು ಬಂತೆಂದರೆ "ಅಲ್ರೀ ಅವರು ಮಹಿಳೆಯರಾಗಿ ಉಳಿಯದೆ ಪುರುಷರಾಗಿರುತ್ತಾರೆಯೇ?" ಎಂದು ಕೇಳಿದೆ. ದುರಾದೃಷ್ಟವಶಾತ್ ಆ ಪ್ರಶ್ನೆಗೆ ಕತ್ತರಿಬಿದ್ದಿತ್ತು! ಅದನ್ನು ಇಲ್ಲಿ ಯಾಕೆ ಹೇಳುತ್ತಿದ್ದೇನೆಂದರೆ ಬಾಯಿಗೆ ಬಂದದ್ದನ್ನು ಹೇಳುವ ನೇಸರ್ಗಿ ಮತ್ತು ಮುತಾಲಿಕ್ ತರಹದವರು ವಾಸ್ತವ, ಸತ್ಯ, ನಿಜಾಂಶಗಳ ಗೊಡವೆಗೇ ಹೋಗದೆ ಇರುವುದರಿಂದ ಅವರೇ ಎಂತಹ ಅಪಹಾಸ್ಯಕ್ಕೆ ಈಡಾಗುತ್ತಾರೆಂದು ತೋರಿಸಲು.

* * * * *

ಕೊನೆಯದಾಗಿ ಒಂದು ಜೋಕ್: ಅಸ್ಗರ್ ಎಂಬ ಮುಸಲ್ಮಾನ ಹುಡುಗನನ್ನು ಪ್ರೀತಿಸಿ, ಮದುವೆಯಾಗಿ ಸ್ವಇಚ್ಛೆಯಿಂದಲೇ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಸಿಲ್ವಾ ರಾಣಿ ಪ್ರಕರಣವನ್ನೇ ಗುರಾಣಿ ಆಗಿಸಿಕೊಂಡು ಮುತಾಲಿಕ್, ನೇಸರ್ಗಿ ತರಹದ ಹಿಂದೂತ್ವವಾದಿಗಳು ಹಿಂದೂ ಧರ್ಮವನ್ನು ರಕ್ಷಿಸಲು ಸಜ್ಜಾಗಿ ನಿಂತಿದ್ದಾರಲ್ಲವೇ? ಆದರೆ ವಾಸ್ತವವಾಗಿ ಸಿಲ್ವಾರಾಣಿಯಾಗಲಿ, ಆಕೆಯ ತಂದೆ ತಾಯಿಯಾಗಲಿ ಹಿಂದೂ ಧರ್ಮದವರೇ ಅಲ್ಲ,


ಅವರೆಲ್ಲರೂ ಕ್ರಿಶ್ಚಿಯನ್ ಧರ್ಮದ ಅನುಯಾಯಿಗಳು!!



Shave India Movement!

ಎಷ್ಟು ಜನರ ಗಮನಕ್ಕೆ ಬಂದಿದೆಯೋ ಗೊತ್ತಿಲ್ಲ, ಭಾರತದಲ್ಲಿ ಹೊಸದೊಂದು ಚಳವಳಿ ಸದ್ದಿಲ್ಲದೇ ಆರಂಭವಾಗಿದೆ. ಅದು ಭಾರತವನ್ನು ರಕ್ಷಿಸುವ ಚಳವಳಿಯಲ್ಲ (Save India Movement), ಭಾರತವನ್ನು ಬೋಳಿಸುವ ಚಳವಳಿ (Shave India Movement)!

ಈ ಚಳವಳಿಯ ನಿಜವಾದ ಹೆಸರು Women Against Lazy Stubble (WALS). ಅಂದರೆ ಸೋಂಭೇರಿ ಕೊಳಕ ಪುರುಷರ ವಿರುದ್ಧ ಮಹಿಳೆಯರು ಅಂತ. ಕೆಲವು ಹುಡುಗಿಯರು ಗುಂಪು ಕಟ್ಟಿಕೊಂಡು ಈ ಚಳವಳಿ ಪ್ರಾರಂಭಿಸಿದ್ದಾರೆ. ಇವರ ಪ್ರಕಾರ ಭಾರತ ಹುಡುಗಿಯರು ನೀಟಾಗಿ ದಾಡಿ ಶೇವ್ ಮಾಡಿಕೊಂಡಿರುವ ಹುಡುಗರನ್ನೇ ಇಷ್ಟ ಪಡುತ್ತಾರಂತೆ. ಆದರೂ ಗಡ್ಡ ಕೆರೆದುಕೊಳ್ಳುವುದಕ್ಕೆ ಪುರುಸೊತ್ತಿಲ್ಲದ ಅಥವಾ ಸೋಂಭೇರಿತನದ ಕಾರಣದಿಂದಾಗಿ ಶೇವ್ ಮಾಡಿಕೊಳ್ಳದೇ ಇರುವ ಪುರುಷರು ಮಹಿಳೆಯರನ್ನು ಗೋಳು ಹೊಯ್ದುಕೊಳ್ಳುತ್ತಾರಂತೆ. ಮಹಿಳೆಯರು ತಮ್ಮ ಬಾಯ್ ಫ್ರೆಂಡ್‌ಗೆ, ಗಂಡನಿಗೆ ಸುಂದರವಾಗಿ ಕಾಣುವುದಕ್ಕಾಗಿ ಗಂಟೆಗಟ್ಟಲೇ ಟೈಮು, ಅಪಾರ ದುಡ್ಡು ಖರ್ಚು ಮಾಡುತ್ತಾರೆ; ಆದರೆ ತಮ್ಮ ಗರ್ಲ್‌ಫ್ರೆಂಡ್‌ಗೆ, ಹೆಂಡತಿಗೆ ಸುಂದರವಾಗಿ ಕಾಣುವುದಕ್ಕೆ ಬಾಯ್‌ಫ್ರೆಂಡ್‌ಗಳು, ಗಂಡಂದಿರು ಒಂಚೂರು ಗಮನ ಹರಿಸುವುದಿಲ್ಲವಂತೆ. ಕನಿಷ್ಠ ದಿನಕ್ಕೆ ಐದು ನಿಮಿಷ ಖರ್ಚು ಮಾಡಿ ಶೇವ್ ಕೂಡ ಮಾಡಿಕೊಳ್ಳುವುದಿಲ್ಲವಂತೆ. ಶತಶತಮಾನಗಳಿಂದ ತಮ್ಮ ಮೇಲೆ ಆಗುತ್ತಿರುವ ಈ 'ಅನ್ಯಾಯ'ವನ್ನು ಮಹಿಳೆಯರು ಅದ್ಹೇಗೋ ಸಹಿಸಿಕೊಂಡು ಬಂದಿದ್ದಾರಂತೆ. ಇನ್ನು ಮುಂದೆ ಈ ಅನ್ಯಾಯ ಮುಂದುವರೆಯದಂತೆ ತಡೆಯುವುದಕ್ಕಾಗಿ ಪುರುಷ ಮತ್ತು ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಈ ಆಂದೋಲನವನ್ನು ಪ್ರಾರಂಭಿಸಿದ್ದಾರಂತೆ.




ಇದರ ಪ್ರಧಾನ ಆಶಯ ಭಾರತದ ಮಹಿಳೆಯರು ಕ್ಲೀನಾಗಿ ಶೇವ್ ಮಾಡಿಕೊಂಡ ಹುಡುಗರನ್ನು ಬಯಸುತ್ತಾರಾದ್ದರಿಂದ ಅವರ ಮನದಾಳದ ಬಯಕೆಯನ್ನು ಅರಿತು ಪುರುಷರು ಸೋಂಭೇರಿತನ ಬಿಟ್ಟು ಪ್ರತಿದಿನ ಕ್ಲೀನಾಗಿ ಶೇವ್ ಮಾಡಿಕೊಳ್ಳಬೇಕು ಎಂಬ ಅರಿವನ್ನು ಮೂಡಿಸುವುದು! ಆ ಮೂಲಕ ಗಂಡು-ಮತ್ತು ಹೆಣ್ಣಿನ ನಡುವೆ ಸಮಾನತೆ ಸಾಧಿಸುವುದು! ಇದೇನಿದು ವಿಚಿತ್ರ ಚಳವಳಿ ಅಂತ ಹುಬ್ಬೇರಿಸಬೇಡಿ. ಈಗಾಗಲೇ ಬಾಲಿವುಡ್ ಸುಂದರಿಯರಾದ ಮುಗ್ಧಾ ಗೋಡ್ಸೆ, ಮಿನಿಷಾ ಲಂಬಾ ಮತ್ತು ನೇಹ ಧುಪಿಯ ಅವರು NO MORE EXCUSES FOR MEN'S LAZY STUBBLE, FOR ALL THOSE MEN WHO ARE TOO LAZY TO SHAVE, YOU BETTER WATCH OUT, BECAUSE INDIAN WOMEN ARE ON A MISSION TO WIN ಎಂಬ ಘೋಷಣೆಗಳಡಿಯಲ್ಲಿ ಮುಂಬೈನಲ್ಲಿ ಈ ಚಳವಳಿಗೆ ಚಾಲನೆ ಕೊಟ್ಟು ನೇತೃತ್ವ ವಹಿಸಿಕೊಂಡಿದ್ದಾರೆ. ಫೇಸ್‌ಬುಕ್‌ನಂಥ ಇಂಟರ್‌ನೆಟ್ ಸೋಶಿಯಲ್ ನೆಟ್‌ವರ್ಕಿಂಗ್ ವೆಬ್‌ಸೈಟ್‌ಗಳಲ್ಲೂ ಈ ಅಭಿಯಾನ ಪ್ರಾರಂಭವಾಗಿದ್ದು ಶೇವ್ ಮಾಡಿರದ ಬಾಯ್‌ಫ್ರೆಂಡ್‌ಗಳಿಂದ, ಗಂಡಂದಿರಿಂದ ಬೇಸತ್ತಿರುವ ಹುಡುಗಿಯರು, ಹೆಂಡತಿಯರು ತಮ್ಮ ಕೋಪವನ್ನು, ಕಷ್ಟಕಾರ್ಪಣ್ಯಗಳನ್ನು ತೋಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ!

ಮಾಡೋಕೆ ಕೆಲಸ ಇಲ್ಲದಿರೋ ಜನ ಈ ವಿಚಿತ್ರ ಆಂದೋಲನ ಪ್ರಾರಂಭಿಸಿದ್ದಾರೆ ಎಂದು ಕೆಲವರು ಸುಮ್ಮನಾಗಬಹುದು. ಆದರೆ ವಾಸ್ತವ ಏನೆಂದರೆ ಇದು ಕೆಲಸ ಇಲ್ಲದಿರೋ ಯಾರೋ ಕೆಲವು ಘಟಿಂಗರು ಮಾಡುತ್ತಿರುವ ಕೆಲಸವಲ್ಲ, ಈ ಹುಚ್ಚು ಚಳವಳಿಯ ಹಿಂದಿನ ಜಾಡನ್ನು ಒಂದಿಷ್ಟು ಕೆದಕಿದರೆ ಅದರ ನಿಜವಾದ ಬಿಸಿನೆಸ್ ಪಾಲಿಟಿಕ್ಸ್ ಕಣ್ಣಿಗೆ ರಾಚುತ್ತದೆ.

ಅಸಲೀಯತ್ತೇನೆಂದರೆ ವಿಶ್ವದಲ್ಲಿ ಶೇವಿಂಗ್ ರೇಜರ್ ಉತ್ಪಾದಿಸುವ ಪ್ರಮುಖ ಕಂಪೆನಿಗಳಲ್ಲೊಂದಾದ ಜಿಲೆಟ್ ಭಾರತದಲ್ಲಿ Gillette Mach3 ಹೆಸರಿನಲ್ಲಿ ಹೊಸ ಮಾದರಿಯ ಒಂದು ಬ್ಲೇಡ್‌ಅನ್ನು



ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಕಂಪೆನಿಯೇ ಹೇಳಿರುವಂತೆ ಸಾಮಾನ್ಯ ಕಡುಬಡವನಿಗೂ ಕಡಿಮೆ ಬೆಲೆಯಲ್ಲಿ ಕ್ಲೀನ್ ಶೇವ್ ಮಾಡಿಕೊಳ್ಳುವ ಅವಕಾಶ ಒದಗಿಸುವುದಕ್ಕಾಗಿ ಈ ಬ್ಲೇಡ್‌ಅನ್ನು ಕಂಪೆನಿ ಬಿಡುಗಡೆ ಮಾಡಿದೆಯಂತೆ. ಕೇವಲ 125 ರೂಪಾಯಿ ಬೆಲೆಯ ಈ ರೇಸರ್ ಬ್ಲೇಡ್‌ನಿಂದ ಇಡೀ ಒಂದು ತಿಂಗಳು ಕ್ಲೀನಾಗಿ ಶೇವ್ ಮಾಡಿಕೊಳ್ಳಬಹುದಂತೆ. ಈಗ 'ಶೇವ್ ಇಂಡಿಯಾ ಚಳವಳಿ'ಗೂ, ಜಿಲೆಟ್ ಕಂಪೆನಿ ಬಿಡುಗಡೆ ಮಾಡಿರುವ ಈ ಬ್ಲೇಡ್‌ಗೂ ಇರುವ ಸಂಬಂಧ ಏನೆಂದು ನಿಮಗೆ ಅರ್ಥವಾಗಿರಬಹುದು. ಹೌದು, ಜಿಲೆಟ್ ಕಂಪೆನಿಯೇ ಸಾಕಷ್ಟು ದುಡ್ಡು ಸುರಿದು ಬಾಲಿವುಡ್ ತಾರೆಯರನ್ನು ಕೊಂಡುಕೊಂಡು 'ಶೇವ್ ಇಂಡಿಯ ಚಳವಳಿ'ಯನ್ನು ಪ್ರಾರಂಭಿಸುವುದಕ್ಕೆ ಉತ್ತೇಜನ ಕೊಟ್ಟಿದೆ! ತಮ್ಮ ಸರಕನ್ನು ಮಾರಿಕೊಂಡು ಜೇಬು ತುಂಬಿಸಿಕೊಳ್ಳುವುದಕ್ಕೆ ಕಾರ್ಪೊರೇಟ್ ಕಂಪೆನಿಗಳು ಎಂತೆಂಥ ಸರ್ಕಸ್ ಮಾಡುತ್ತವೆ ಎಂಬುದಕ್ಕೆ ಇದೊಂದು ಚಿಕ್ಕ ಉದಾಹರಣೆಯಷ್ಟೆ. ಇದಕ್ಕೆ ಹುಡುಗರು, ಗಂಡಂದಿರು ಮಾರು ಹೋದರೆ ಅವರ ಗಡ್ಡ ಶೇವ್ ಆಗುವುದರ ಜೊತೆಗೆ ಜೇಬ್ ಕೂಡ ಶೇವ್ ಆಗುತ್ತದೆಯಷ್ಟೆ!



ಶ್ರೀಲಂಕಾದಲ್ಲಿ ಮತ್ತೊಂದು ಯುದ್ಧ!

ಹೌದು, ಆರು ತಿಂಗಳ ಹಿಂದಷ್ಟೇ ಮೂವತ್ತೈದು ವರ್ಷಗಳಿಂದ ಪ್ರತ್ಯೇಕ ತಮಿಳು ರಾಷ್ಟ್ರೀಯತಾ ಹೋರಾಟವನ್ನು ಮುನ್ನಡೆಸುತ್ತಿದ್ದ ಎಲ್‌ಟಿಟಿಈ ವಿರುದ್ಧ ಶ್ರೀಲಂಕಾ ಸೇನೆಯ ಮುಖ್ಯಸ್ಥ ಸರತ್ ಫೊನ್ಸೆಕಾ ಹಾಗೂ ಅಧ್ಯಕ್ಷ ಮಹಿಂದ ರಾಜಪಕ್ಸೆ ಸೇರಿಕೊಂಡು ಭೀಕರ ಯುದ್ಧ ಮಾಡಿ ಅವರನ್ನು ಸಂಪೂರ್ಣವಾಗಿ ದಮನ ಮಾಡಿದ್ದರು. ಈಗ ಅದೇ ಫೊನ್ಸೆಕಾ ಮತ್ತು ರಾಜಪಕ್ಸೆ ಪರಸ್ಪರ ಯುದ್ಧಕ್ಕಿಳಿದಿದ್ದಾರೆ! ಈ ಬಾರಿಯ ಯುದ್ಧ ಬಾಂಬು-ಬಂದೂಕುಗಳ ಯುದ್ಧವಲ್ಲ, ಚುನಾವಣಾ ಯುದ್ಧ! ಬರುವ ಜನವರಿ ಮೊದಲ ವಾರದಲ್ಲಿ ನಡೆಯಲಿರುವ ಶ್ರೀಲಂಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ಇವರಿಬ್ಬರೂ ಎದುರಾಳಿಗಳಿಗಳಾಗಿ ಸ್ಪರ್ಧಿಸುತ್ತಿದ್ದಾರೆ.


ಕಳೆದ ಮೂವತ್ತೈದು ವರ್ಷಗಳಿಂದ ಶ್ರೀಲಂಕಾದಲ್ಲಿ ಸ್ವಾತಂತ್ರ, ಸ್ವಾಭಿಮಾನಿ ಹಾಗೂ ಸಾರ್ವಭೌಮ ತಮಿಳು ಈಳಂಗಾಗಿ (ತಮಿಳು ರಾಷ್ಟ್ರಕ್ಕಾಗಿ) ಎಲ್‌ಟಿಟಿಈ ನಡೆಸಿದ ರಕ್ತಸಿಕ್ತ ಅಂತರ್ಯುದ್ಧ ನಮಗೆಲ್ಲಾ ಗೊತ್ತೇ ಇದೆ. ಈ ಸ್ವಾಭಿಮಾನಿ ಹೋರಾಟವನ್ನು ದಮನಿಸುವುದಕ್ಕಾಗಿ ಶ್ರೀಲಂಕಾ ಸೇನೆ ಮೂರು ದಶಕಗಳಿಂದ ತಿಣುಕಾಡಿದರೂ ಸಾಧ್ಯವಾಗಿರಲಿಲ್ಲ. ವಿಶ್ವದ ಎರಡನೇ ಅತಿದೊಡ್ಡ ಸ್ಟಾಂಡಿಂಗ್ ಆರ್ಮಿ ಎನಿಸಿಕೊಂಡಿರುವ ಭಾರತದ ಬಲಿಷ್ಠ ಸೇನೆಯೂ ಎಲ್‌ಟಿಟಿಈ ಹೋರಾಟಗಾರರೆದುರು ಮಂಡಿಯೂರಿ ಮನೆ ಸೇರಿದ್ದೂ ನಮಗೆ ಗೊತ್ತಿದೆ. ಆದರೆ, 2006ರಿಂದೀಚೆಗೆ ಎಲ್‌ಟಿಟಿಈ ಅಂತರರಾಷ್ಟ್ರೀಯ ಮಟ್ಟದಲ್ಲಿ ಏಕಾಂಗಿಯಾಗಿದ್ದು, ಆಂತರಿಕವಾಗಿ ಒಡಕುಗಳಿಂದ ನಿಸ್ತೇಜಗೊಂಡಿದ್ದು, ಅಮೆರಿಕ ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರ ಸಾರಿದ್ದು – ಎಲ್ಲವನ್ನೂ ಚೆನ್ನಾಗಿ ಬಳಸಿಕೊಂಡ ಅಧ್ಯಕ್ಷ ರಾಜಪಕ್ಸೆ ಮತ್ತು ಸೇನಾ ಮುಖ್ಯಸ್ಥ ಸರತ್ ಫೊನ್ಸೆಕಾ ಎಲ್‌ಟಿಟಿಈಯನ್ನು ಆಮೂಲಾಗ್ರವಾಗಿ ಸದೆಬಡಿಯುವುದಕ್ಕೆ ಅಂತಿಮ ಯುದ್ಧ ಸಾರಿದರು. ತಮಿಳು ಹಳ್ಳಿಗಳ ಮೇಲೆ ಬಾಂಬ್ ಮಳೆಗರೆದು ಸಾವಿರಾರು ಸಂಖ್ಯೆಯಲ್ಲಿ ಅಮಾಯಕ ತಮಿಳರನ್ನು ನಿರ್ದಯವಾಗಿ ಕೊಂದು, ಲಕ್ಷಾಂತರ ಜನರನ್ನು ನಿರ್ವಸಿತರನ್ನಾಗಿ ಮಾಡಿ, ಎಲ್‌ಟಿಟಿಈಯ ಅಧಿನೇತ ವೇಲುಪಿಳ್ಳೈ ಪ್ರಭಾಕರನ್ ಸಮೇತವಾಗಿ ಸಾವಿರಾರು ತಮಿಳು ಹುಲಿಗಳನ್ನು ಬೇಟೆ ಯಾಡಿ ಕೊನೆಗೂ ಅಂತಿಮ ಯುದ್ಧವನ್ನು ಗೆದ್ದೇ ಬಿಟ್ಟರು. ಯುದ್ಧದ ಭೀಕರತೆ, ಸಾವುನೋವುಗಳು, ಮಾನವ ಹಕ್ಕುಗಳ ಉಲ್ಲಂಘನೆಗಳು ಎಷ್ಟರಮಟ್ಟಿಗಿದ್ದವೆಂದರೆ ಈ ಯುದ್ಧವನ್ನು ಇತ್ತೀಚಿನ ವರ್ಷಗಳಲ್ಲಿ ವಿಶ್ವ ಕಂಡ ಅತ್ಯಂತ ಭೀಕರ, ಅನ್ಯಾಯಯುತ ಹಾಗೂ ಅಮಾನವೀಯ ಯುದ್ಧ ಎಂದೇ ಪರಿಗಣಿಸಲಾಗುತ್ತಿದೆ. ಈ ಯುದ್ಧವನ್ನು ಮುನ್ನಡೆಸಿದ ಸರತ್ ಫೊನ್ಸೆಕಾ ಹಾಗೂ ಮಹಿಂದ ರಾಜಪಕ್ಸೆ ಖಳನಾಯಕರಾಗಿಯೇ ಕಾಣುತ್ತಿದ್ದಾರೆ. ಆದರೆ, ಅದು ಹೊರ ಜಗತ್ತಿಗೆ ಮಾತ್ರ. ಅದೇ ಶ್ರೀಲಂಕಾದಲ್ಲಿ ಬಹು ಸಂಖ್ಯಾತರಾಗಿರುವ ಸಿಂಹಳೀಯ ದುರಭಿಮಾನಿಗಳ ದೃಷ್ಟಿಯಲ್ಲಿ ಇದೇ ರಾಜಪಕ್ಸೆ ಮತ್ತು ಫೊನ್ಸೆಕಾ ಹೀರೋಗಳಾಗಿದ್ದಾರೆ. ಮೂರುವರೆ ದಶಕಗಳಲ್ಲಿ ಯಾವ ಅಧ್ಯಕ್ಷನಿಂದಲೂ, ಯಾವ ಸೇನಾಧಿಪತಿಯಿಂದಲೂ ಸಾಧ್ಯವಾಗದ ಕೆಲಸವನ್ನು ಇವರಿಬ್ಬರೂ ಮಾಡಿದ್ದಾರೆಂದು ಸಿಂಹಳೀಯರು ಅವರನ್ನು ಕೊಂಡಾಡುತ್ತಿದ್ದಾರೆ.

ಹೀಗೆ ತನ್ನ ಜನಪ್ರಿಯತೆ ಉತ್ತುಂಗದಲ್ಲಿರುವಾಗಲೇ ಅಧ್ಯಕ್ಷೀಯ ಚುನಾವಣೆಗಳು ನಡೆದರೆ ತಾನೇ ಮತ್ತೆ ಅಧ್ಯಕ್ಷನಾಗಿ ಆಯ್ಕೆಯಾಗುವುದು ಖಚಿತ ಎಂದು ತರ್ಕಿಸಿದ ರಾಜಪಕ್ಸೆ ತನ್ನ ಅವಧಿಗಿಂತ ಸಂಪೂರ್ಣಗೊಳ್ಳುವ ಮುಂಚೆಯೇ ಚುನಾವಣೆಗಳನ್ನು ನಡೆಸಲು ತೀರ್ಮಾನಿಸಿದರೆ ಈಗ ಖುದ್ದು ಫೊನ್ಸೆಕಾ ಎಂಬ ಸಿಂಹ ಘರ್ಜಿಸತೊಡಗಿದೆ. ರಣರಂಗದಲ್ಲಿ ಸೈನ್ಯವನ್ನು ಕಟ್ಟಿಕೊಂಡು ಎಲ್‌ಟಿಟಿಈಯನ್ನು ಸೋಲಿಸಿದ್ದು ತಾನು, ಆದರೆ ಅದರ ಕ್ರೆಡಿಟ್ ಎಲ್ಲಾ ಅರ ಮನೆಯಲ್ಲಿ ಕುಳಿತ ರಾಜಪಕ್ಸೆಗೆ ಹೋಗುತ್ತಿದೆ ಎಂದೆಣಿಸಿದ ಫೊನ್ಸೆಕಾ ತನ್ನ ಸೇನಾ ಮುಖ್ಯಸ್ಥ ಹುದ್ದೆಗೆ ರಾಜೀನಾಮೆ ಕೊಟ್ಟು ಅಧ್ಯಕ್ಷೀಯ ಚುನಾವಣೆಗಿಳಿಯಲು ನಿರ್ಧರಿಸಿದ್ದಾರೆ. ಎಲ್‌ಟಿಟಿಈಯನ್ನು ಸೋಲಿಸಿದ ಸಿಂಹಳೀಯ ಹೀರೋ ತಾನೇ ಎಂದು ಬಿಂಬಿಸುತ್ತಾ ಚುನಾವಣೆಗಿಳಿದರೆ ತನಗೆ ಗೆಲುವು ಗ್ಯಾರಂಟಿ ಎಂಬುದು ಆತನ ಲೆಕ್ಕಾಚಾರ. ಗೆದ್ದು ಅಧ್ಯಕ್ಷನಾದರೆ ಇಡೀ ಶ್ರೀಲಂಕಾವನ್ನು ಆಳಬಹುದೆಂಬ ಆಶೆ.

ಫೊನ್ಸೆಕಾ ಶ್ರೀಲಂಕಾಧ್ಯಕ್ಷನಾಗುವ ಮಹದಾಸೆ ಇಟ್ಟುಕೊಂಡಿರುವುದರ ವಾಸನೆ ರಾಜಪಕ್ಸೆಗೆ ಬಡಿಯು ತ್ತಿದ್ದಂತೆಯೇ ಚಳಿಜ್ವರ ಪ್ರಾರಂಭವಾಗಿಬಿಟ್ಟಿತು. ಎಷ್ಟರ ಮಟ್ಟಿಗೆ ಎಂದರೆ ಫೊನ್ಸೆಕಾ ಎಲ್ಲಿ ಅಧ್ಯಕ್ಷೀಯ ಚುನಾ ವಣೆಗೂ ನಿಲ್ಲದೇ ಮಿಲಿಟರಿ ಶಕ್ತಿಯನ್ನು ಬಳಸಿಕೊಂಡು ಬಲಾತ್ಕಾರವಾಗಿ ತನ್ನನ್ನು ಓಡಿಸಿ ಅಧ್ಯಕ್ಷಗಾದಿಯಲ್ಲಿ ಕುಳಿತುಬಿಡುತ್ತಾನೋ ಎಂಬ ಭಯ ಕೂಡ ರಾಜಪಕ್ಸೆಗಿತ್ತು. ಈ ಭೀತಿಯ ಕಾರಣದಿಂದಲೇ ಆತ ಭಾರತದ ಸಹಾಯ

ಜೈರಾಮ್ ರಮೇಶ್ ಎಂಬ ವಿ(ಅ)ಜ್ಞಾನಿ!

ಗೋ ಮಾಂಸ ಭಕ್ಷಣೆಯಿಂದ ಪರಿಸರಕ್ಕೆ ಹಾನಿಯಾಗುತ್ತದೆ, ಹಾಗಾಗಿ ಜನ ಅದನ್ನು ತ್ಯಜಿಸಬೇಕು ಎಂದು ಇತ್ತೀಚೆಗೆ ಕೇಂದ್ರ ಪರಿಸರ ಮತ್ತು ಅರಣ್ಯ ಖಾತೆ ಸಚಿವ ಜೈರಾಮ್ ರಮೇಶ್ ಆಜ್ಞಾಪನೆ ಮಾಡಿದ್ದಾರೆ. ದನದ ಮಾಂಸವನ್ನು ತೆಗೆದುಕೊಂಡು ಉಳಿಯುವ ತ್ಯಾಜ್ಯವನ್ನು ಹಾಗೇ ಬಿಸಾಡುವುದರಿಂದ ಅದೆಲ್ಲಾ ಕೊಳೆತುಹೋಗಿ ಅದರಿಂದ ಮಿಥೇನ್ ಅನಿಲ ಸೃಷ್ಟಿಯಾಗುತ್ತದೆಂಬುದು ಹಾಗೂ ಅದರಿಂದ ಪರಿಸರಕ್ಕೆ ಹಾನಿಯಾಗುತ್ತದೆಂಬುದು ಅವರ ವಾದ. ಈ ಥಿಯರಿಯನ್ನು ಮಂಡಿಸಿದ ಜೈರಾಮ್ ರಮೇಶ್ ಪ್ರಾಯಶಃ ತಾನು ಹೊಸದೊಂದು ಅನ್ವೇಷಣೆ ಮಾಡಿ ವಿಜ್ಞಾನಕ್ಕೆ ಕೊಡುಗೆ ಕೊಟ್ಟಿರುವುದಾಗಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿರಬಹುದು. ಆದರೆ ಅವರ ಈ ಸಂಶೋಧನೆಯನ್ನು ನೋಡಿ ಅವರನ್ನು ವಿಜ್ಞಾನಿ ಎನ್ನಬೇಕೋ ಅಥವ ಅಜ್ಞಾನಿ ಎನ್ನಬೇಕೋ ಅರ್ಥವಾಗುತ್ತಿಲ್ಲ.



ದನದ ಮಾಂಸವನ್ನು ತೆಗೆದುಕೊಂಡು ಬಿಸಾಡುವ ಉಳಿದ ತ್ಯಾಜ್ಯ ಕೊಳೆತರೆ ಮಿಥೇನ್ ಸೃಷ್ಟಿಯಾಗುವುದು ನಿಜ. ಆದರೆ ಅದು ದನದ ಮಾಂಸಕ್ಕಷ್ಟೇ ಸೀಮಿತವಾಗಿರುವಂಥದ್ದೇನಲ್ಲ, ಕುರಿ, ಕೋಳಿ, ಹಂದಿ, ಕೋಣ, ಉಡ – ಹೀಗೆ ಯಾವುದೇ ಜೀವಿಗಳ ಮಾಂಸ ತೆಗೆದು ಕೊಂಡು ಉಳಿಯುವ ತ್ಯಾಜ್ಯ ಕೊಳೆತರೆ ಅದರಿಂದಲೂ ಮಿಥೇನ್ ಸೃಷ್ಟಿಯಾಗುತ್ತದೆ. ಅಷ್ಟೇ ಏಕೆ, ಭತ್ತ ರಾಗಿ ಗೋಧಿಯಂಥ ಯಾವುದೇ ಸಸ್ಯದ ತ್ಯಾಜ್ಯಗಳು ಕೊಳೆತರೂ ಅದರಿಂದಲೂ ಮಿಥೇನ್ ಸೃಷ್ಟಿಯಾಗುತ್ತದೆ. ನಮ್ಮ ನಗರಗಳಲ್ಲಿ ಹರಿಯುವ ಟಾಯ್ಲೆಟ್ ಕೊಳ ನೀರು ಒಂದೆಡೆ ಸೇರಿದರೂ, ನಮ್ಮ ಮನೆಗ ಹಿಂದಿನ ತಿಪ್ಪೆಗಳಿಂದಲೂ ಮಿಥೇನ್ ಸೃಷ್ಟಿ ಯಾಗುತ್ತದೆ. ಒಂದೇ ಮಾತಿನಲ್ಲಿ ಹೇ ಬೇಕೆಂದರೆ ಯಾವುದೇ ಜೈವಿಕ ವಸ್ತು ಕೊಳೆತರೆ ಅದರಿಂದ ಮಿಥೇನ್ ಸೃಷ್ಟಿ ಯಾಗುತ್ತದೆ. ಇದು ಜೈರಾಮ್ ರಮೇಶ್ ಕಂಡುಹಿಡಿದಿರುವ ಸತ್ಯವೇನಲ್ಲ. ಇದನ್ನು ನಮ್ಮ ವಿಜ್ಞಾನಿಗಳು ಕಂಡು ಹಿಡಿದು ಅದೆಷ್ಟು ಶತಮಾನಗಳು ಕಳೆದಿವೆಯೋ?

ಉಳಿದೆಲ್ಲಾ ಜೈವಿಕ ತ್ಯಾಜ್ಯದ ಕೊಳೆತದಿಂದ ಸೃಷ್ಟಿ ಯಾಗುವ ಮಿಥೇನ್ ಬಿಟ್ಟು, ಜೈರಾಮ್ ರಮೇಶ್ ಅವರ ಚಿತ್ತ ಕೇವಲ ಗೋಮಾಂಸ ತ್ಯಾಜ್ಯದಿಂದ ಉಂಟಾ ಗುವ ಮಿಥೇನ್ ಕಡೆಗೇ ಯಾಕೆ ಹರಿಯುತ್ತಿದೆ? ಅನೇಕ ದೊಡ್ಡ ದೊಡ್ಡ ಫ್ಯಾಕ್ಟರಿಗಳು ತ್ಯಾಜ್ಯವನ್ನು ಸಂಸ್ಕರಿಸದೆ ಹಾಗೆಯೇ ಹೊರಬಿಡುವ ಮೂಲಕ ಮಿಥೇನ್ ಅನಿಲವ



...ೇರಿದ್ದ. ಹೆಚ್ಚೂಕಡಿಮೆ ಭಾರತದ ಬಾಲಂಗೋಚಿ ...ಂತಿರುವ ರಾಜಪಕ್ಸೆಯನ್ನು ಅಧ್ಯಕ್ಷ ಗಾದಿಯಲ್ಲಿ ...ಮುಂದುವರೆಸುವುದು ಭಾರತಕ್ಕೂ ಬೇಕಿತ್ತು. ಆದ್ದರಿಂದಲೇ ...ರತ ಸರ್ಕಾರವು ಫೋನ್ಸೆಕಾ ರಾಜೀನಾಮೆ ಕೊಟ್ಟು ...ನಾ ಮುಖ್ಯಸ್ಥ ಸ್ಥಾನದಿಂದ ನಿರ್ಗಮಿಸುವ ತನಕ ...ಯುದ್ಧಕ್ಕೆ ಸಿದ್ಧವಾಗಿರುವಂತೆ ತನ್ನ ಮಿಲಿಟರಿಗೆ ಕಟ್ಟಾಜ್ಞೆ ...ಧಿಸಿತ್ತು. ಒಂದು ವೇಳೆ ಫೋನ್ಸೆಕಾ ಏನಾದರೂ ರಾಜಪಕ್ಸೆ...ನ್ನು ಬಲಾತ್ಕಾರವಾಗಿ ಕೆಳಗಿಳಿಸಿ ಮಿಲಿಟರಿ ಆಡಳಿತ...ನ್ನು ಹೇರುವ ದುಸ್ಸಾಹಸ ಮಾಡಿದ್ದರೆ ಭಾರತದ ...ನ್ಯ ಫೋನ್ಸೆಕಾ ನೇತೃತ್ವದ ಶ್ರೀಲಂಕಾ ಸೈನ್ಯದೊಂದಿಗೆ ...ಮಾಡುವುದಕ್ಕೂ ಸಿದ್ಧವಾಗಿತ್ತು. ಫೋನ್ಸೆಕಾಗೂ ಇದರ ...ರಿವಿತ್ತು. ವಿಶ್ವದ ಬಲಿಷ್ಠ ಸೇನೆಗಳಲ್ಲೊಂದಾದ ಭಾರತ ...ನ್ಯದೆದುರು ಕಾದಾಡಿ ಗೆಲ್ಲುವುದು ಸಾಧ್ಯವಿಲ್ಲ ...ಬುದೂ ಆತನಿಗೆ ಗೊತ್ತಿತ್ತು. ಹಾಗಾಗಿ ಅಂಥ ದುಸ್ಸಾಹ... ಆತ ಕೈಹಾಕದೇ ಶಾಂತಿಯುತವಾಗಿ ರಾಜೀನಾಮೆ ...ಡಿ ಅಧ್ಯಕ್ಷ ಚುನಾವಣೆಯಲ್ಲಿ ರಾಜಪಕ್ಸೆ ವಿರುದ್ಧ ...ರ್ಸುವುದಾಗಿ ಘೋಷಿಸಿದ.

ಫೋನ್ಸೆಕಾನಿಂದ ಈ ಪ್ರಕಟಣೆ ಹೊರಬೀಳುತ್ತಿದ್ದಂತೆಯೇ ...ಎನ್‌ಪಿಯನ್ನೂ ಒಳಗೊಂಡಂತೆ ಎಲ್ಲಾ ವಿರೋಧ ...ಗಳೂ ಆತನ ಬೆಂಬಲಕ್ಕೆ ನಿಂತವು. ಅಸಲಿಗೆ ...ಲ್‌ಟಿಟಿಈಯನ್ನು ಯಶಸ್ವಿಯಾಗಿ ಸದೆಬಡಿದು ...ಪ್ರಿಯತೆಯ ಉತ್ತುಂಗದಲ್ಲಿ ತೇಲಾಡುತ್ತಿದ್ದ ...ಜಪಕ್ಸೆಯನ್ನು ಚುನಾವಣೆಯಲ್ಲಿ ಸೋಲಿಸುವುದು ತೀರಾ ...ಕರ ಎಂಬುದು ವಿರೋಧ ಪಕ್ಷಗಳಿಗೆ ಚೆನ್ನಾಗಿ ...ತ್ತಿತ್ತು. ಅದೇ ಹೊತ್ತಿನಲ್ಲಿ ಎಲ್‌ಟಿಟಿಈಯನ್ನು ನಿಜವಾಗಿ ...ರಂಗದಲ್ಲಿ ಸೋಲಿಸುವುದಕ್ಕೆ ಲಂಕಾ ಸೈನ್ಯವನ್ನು ...ನ್ನಡೆಸಿ ಯಶಸ್ವಿಯಾದ ಫೋನ್ಸೆಕಾನೇ ರಾಜಪಕ್ಸೆಯ ...ರುದ್ಧ ಚುನಾವಣೆಗೆ ನಿಲ್ಲುವ ನಿರ್ಧಾರ ಮಾಡಿದ್ದರಿಂದ ...ಎಲ್ಲಾ ವಿರೋಧ ಪಕ್ಷಗಳಿಗೂ ರಾಜಪಕ್ಸೆಯ ವಿರುದ್ಧ ... ಪ್ರಬಲ ಅಭ್ಯರ್ಥಿ ಸಿಕ್ಕಂತಾಯಿತು. ಆದ್ದರಿಂದ ...ಲ್ಲಾ ವಿರೋಧ ಪಕ್ಷಗಳೂ ಒಮ್ಮತದಿಂದ ಫೋನ್ಸೆಕಾನನ್ನು ...ಕ್ಕಿಳಿಸುವ ನಿರ್ಧಾರ ಮಾಡಿವೆ.

...ಈ ಹಿನ್ನೆಲೆಯಲ್ಲಿ ಬರಲಿರುವ ಶ್ರೀಲಂಕಾ ...ಕ್ಷೀಯ ಚುನಾವಣೆ ಅಕ್ಷರಶಃ ಮತ್ತೊಂದು ಜಿದ್ದಾ...ಯ ರಾಜಕೀಯ ಯುದ್ಧವಾಗುವುದರಲ್ಲಿ ಸಂದೇಹ ... ಇದರಲ್ಲಿ ಯಾರು ಗೆದ್ದರೂ ಶ್ರೀಲಂಕಾಕ್ಕೇನೂ ...ಯುದಾಗುವುದಿಲ್ಲ. ಏಕೆಂದರೆ, ರಾಜಪಕ್ಸೆ ಮತ್ತು ...ನ್ಸೆಕಾ ಇಬ್ಬರೂ ಪ್ರಜಾತಂತ್ರ ವ್ಯವಸ್ಥೆಗೆ ಕಿಂಚಿತ್ತೂ ... ಕೊಡದ ಸರ್ವಾಧಿಕಾರಿಗಳು. ಹಾಗಾಗಿ ಯಾರು ...ರೂ ಶ್ರೀಲಂಕಾ ಸರ್ವಾಧಿಕಾರಿ ಅಧ್ಯಕ್ಷನನ್ನೇ ನೋಡ ...ಬೇಕಾಗುತ್ತದೆ. ●

ಹೈನಾಗಳ ಜೊತೆಯಿದ್ದ ನರಿ ತಪ್ಪಿಸಿಕೊಂಡಿದ್ದೇಗೆ

ಥೂತ್ತೇರಿ
► ಯಾಹೂ

ಇದ್ದಕ್ಕಿದ್ದಂತೆ ದನಗಾಹಿಗಳಾಗಿ ಪರಿವರ್ತಿತರಾಗಿರುವ ನಮ್ಮ ಚೆಡ್ಡಿಗಳು "ದನಗಳನ್ನು ಉಳಿಸಿ, ಸಗಣಿ ಸಂಗ್ರಹಿಸಿ, ಗಂಜಲ ಕುಡಿದಿ" ಎಂಬ ಘೋಷಣೆಯೊಂದಿಗೆ ಬರೀ ಜನಗಳಿರುವ ಜಾಗದಲ್ಲಿ ಜಾಥಾ ತೆಗೆದವಂತಲ್ಲಾ, ಇವರ ಜಾಥಾ ನೋಡಿದ ಮಾಜಿ ರೈತರು "ಅಲ್ಲಾ, ಈ ನನಮಕ್ಕಳು ಜೀವನದಲ್ಲಿ ಎಂದಾದರೂ ದನ ಮೇಯಿಸಿದ್ದನ್ನು ನೋಡಲಿಲ್ಲ, ಅವುಗಳಿಗೆ ಹುಲ್ಲು ಕಿತ್ತು ತಂದಾಕಿ, ನೀರು ಕುಡಿಸಿ, ಸಗಣಿ ತೆಗೆದು, ಗಂಜಲ ಬಳಿದದ್ದನ್ನು ನಾವೆಂದೂ ನೋಡಿಲ್ಲ, ಆದರೂ ದನ ಉಳಿಸಿ ಎಂದು ಊಳಿಡುತ್ತಿದ್ದಾರಲ್ಲಾ" ಎಂದು ಆಡಿಕೊಂಡರಂತಲ್ಲಾ, ಅದಕ್ಕೆ ಚೆಡ್ಡಿಗಳನ್ನು ಕಂಡರಾಗದ ಕಿಡಿಗೇಡಿಗಳು "ಥೂ, ಥೂ, ದನಕ್ಕೂ ಅವಕ್ಕೂ ಯಾವ ಸಂಬಂಧವೂ ಇಲ್ಲ, ಮುಸ್ಲಿಮರು ದನ ತಿನ್ನುವುದರಿಂದ ಆ ಮುಸ್ಲಿಮರ ವಿರುದ್ಧ ಹಿಂದೂಗಳನ್ನು ಎತ್ತಿ ಕಟ್ಟಲೋಸ್ಕರವಾಗಿ ಸಗಣಿ ಗುಂಡಿಗೆ ಬಿದ್ದು ಕೂಗುತ್ತಿವೆ ಅಷ್ಟೆ. ಪರೀಕ್ಷೆ ಮಾಡಬೇಕಾದರೆ ಒಬ್ಬ ಚೆಡ್ಡಿ ಮನೆ ಬಾಗಿಲಿಗೆ ಬಡಕಲು ದನ ಕಟ್ಟಿ ಬನ್ನಿ, ಬೆಳಗಾಗುವುದರೊಳಗೆ ಅದನ್ನು ಬಷೀರ್ ಸಾಬರಿಗೆ ಮಾರಿಬರದಿದ್ದರೆ ಕೇಳಿ" ಎಂದು ನಕ್ಕವಂತಲ್ಲಾ, ಥೂತ್ತೇರಿ!


* * * *

ವಿಶ್ವ ಗೋಮಂಗಲ ಯಾತ್ರೆ ಆರಂಭಿಸಿರುವ ಪುರೋಹಿತಶಾಹಿಗಳಿಗೂ, ಗೋವುಗಳಿಗೂ ಇರುವ ಅವಿನಾಭಾವ ಸಂಬಂಧವು ಕೇವಲ ಹಾಲು, ಮೊಸರು, ಬೆಣ್ಣೆ, ತುಪ್ಪಕ್ಕೆ ಸಂಬಂಧಪಟ್ಟಿದೆಯೇ ಹೊರತು ಅವುಗಳಿಗೂ ದನಜೀವನಕ್ಕೂ ಸಂಬಂಧವಿಲ್ಲವೆಂದು ಮೇಲುನೋಟಕ್ಕೆ ಢಾಳಾಗಿ ಕಾಣುತ್ತಿದೆಯಂತಲ್ಲಾ. ಗೋವಿನ ಕೆಚ್ಚಲು ರುಚಿ ಹತ್ತಿಸಿಕೊಂಡ ಪುರೋಹಿತರ ಮನೆಬಾಗಿಲಿಗೆ ರೈತರು ಬಂದು ಹುಟ್ಟಿದ ಮಕ್ಕಳ ನಕ್ಷತ್ರ ಕೇಳಿದರೆ, "ಮಗು ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದೆ. ಆದ್ದರಿಂದ ಪುರೋಹಿತರಿಗೆ ಗೋದಾನ ಮಾಡು" ಎಂದು ಸಲಹೆ ಕೊಡುತ್ತಿದ್ದರಂತಲ್ಲಾ, "ಆಯ್ತು ಸ್ವಾಮಿ, ನನ್ನ ಹತ್ತಿರ ಒಂದು ಎತ್ತಿದೆ. ಅದನ್ನೆ ಹಿಡಿದುಕೊಳ್ಳಿ" ಎಂದು ಹೇಳಿದರೆ ಸದರಿ ಪುರೋಹಿತ ಪಿಂಡಗಳು "ಅಯ್ಯೋ ಎತ್ತಿನಂತವನೆ, ಎತ್ತಾಗಲಿ, ಕಡಸಾಗಲಿ, ಕರುವಾಗಲಿ, ಮುದಿಹಸುವಾಗಲಿ ದಾನಕ್ಕೆ ಯೋಗ್ಯವಲ್ಲ ಕರಾವಿನ ಹಸುವೇ ಆಗಬೇಕು" ಎಂಬ ಕರಾರನ್ನು ವಿಧಿಸಿ ಅದರಂತೆ ಚೊಂಬಿನ ತುಂಬ ಹಾಲು ಕರೆಯುವ ಹಸುಗಳನ್ನೆ ಮುಫತ್ತಾಗಿ ಹಿಡಿದುಕೊಂಡು ತುಪ್ಪ ತಿಂದು ತಲೆ ಬೆಳಿಸಿಕೊಂಡರಂತಲ್ಲಾ, ಥೂತ್ತೇರಿ!!

* * * *

ತುಪ್ಪ ತಿಂದು ತಲೆ ಬೆಳಿಸಿಕೊಂಡ ಶಾನುಭೋಗರ ಸಂತತಿಯೆಲ್ಲಾ ಹಳ್ಳಿಬಿಟ್ಟು ಪಟ್ಟಣ ಸೇರಿದ ನಂತರವೂ ಗೋದಾನವನ್ನು ವಸೂಲು ಮಾಡುತ್ತಿರುವ ವೈಖರಿಯು ಗೋವಿನಂತಹ ಜನರಿಗೂ ಗೊತ್ತಾಗಿ ಹೋಗಿದೆಯಂತಲ್ಲಾ. ಸಿಟಿಯಲ್ಲಿ ಸೆಟ್ಲಾಗಿರುವ ಶಾನುಭೋಗರ ಸಂತತಿಗೆ ಹಸು ಕಟ್ಟಲು ಜಾಗವಿಲ್ಲ, ಆದ್ದರಿಂದ ಹೆಬ್ಬೆರಳು ಗಾತ್ರದ ಚಿನ್ನದ ಹಸು ಇಲ್ಲ ಮುಂಗೈಗಾತ್ರದ ಬೆಳ್ಳಿ ಹಸು ಕೇಳುತ್ತ ಎಂದಿನಂತೆ ಬೊಜ್ಜಿನ ಮೇಲೆ ಬೆರಳಾಡಿಸುತ್ತಿದ್ದಾರಂತಲ್ಲಾ, ಇತ್ತ ಇವರ ಪರಮ ವಿರೋಧಿಗಳಾದ ಸಾಬರು "ದನದ ಮಾಂಸ ಬಿಟ್ಟರೆ ಬೇರೆ ಮಾಂಸ ತಿನ್ನಲು ಸಾಧ್ಯವೇ ಇಲ್ಲ, ಆಡು ಕುರಿ ಮಾಂಸ ಕೆಜಿಗೆ ಇನ್ನೂರಾಗಿದೆ. ಅದೇ ದುಡ್ಡಿಗೆ ನಾಲ್ಕು ಕೆ.ಜಿ. ದನದ ಮಾಂಸ ಬರುತ್ತದೆ" ಎಂದು ಕೆಲಸಕ್ಕೆ ಬಾರದ ದನ ಹುಡುಕುತ್ತಿರಬೇಕಾದರೆ, ಪುರೋಹಿತರ ಪಿಂಡಗಳು ವಿಶ್ವಮಂಗಲ ಗೋಯಾತ್ರೆ ಮಾಡುತ್ತ ಭಾಷಣ ಮಾಡುತ್ತಿವೆಯಂತಲ್ಲಾ, ಇನ್ನು ದನಾ ಕಾಯಲೂ ಯೋಗ್ಯನಲ್ಲದ ಈಶ್ವರಪ್ಪ ಎಂಬ ಇಂಧನ ಮಂತ್ರಿ, ಎಲ್ಲೆಲ್ಲಿ ಗೋಯಾತ್ರೆ ಸಭೆಗಳು ಜರುಗುತ್ತವೊ ಅಲ್ಲೆಲ್ಲಾ ಕರಂಟು ಸಪ್ಲೈ ಮಾಡುತ್ತ ರಾಜ್ಯದ ಕರಂಟಿರುವುದೇ ಚೆಡ್ಡಿಗಳ ಸಮಾವೇಶಕ್ಕೆ ಎಂಬ ಸಂದೇಶ ಕೊಡುತ್ತಿದ್ದಾನಂತಲ್ಲಾ, ಥೂತ್ತೇರಿ!!

* * * *



ಬಾಬರಿ ಮಸೀದಿಯ ಜಾಗ ಮತ್ತೊಮ್ಮೆ ಮಾರ್ದನಿ ಕೊಟ್ಟಿದೆಯಲ್ಲಾ, ನ್ಯಾಯಮೂರ್ತಿ ಲಿಬರ್ಹಾನ್ ಆಯೋಗದ ವರದಿಯ ವಿಷಯ ಕೇಳಿದರೆ, ಹೈನಾಗಳೆಲ್ಲಾ ಸೇರಿ ಆನೆ ಕೆಡಗಿದ ಘಟನೆಯಂತೆ ಕಾಣುತ್ತಿರುವ ಬಾಬರಿ ಮಸೀದಿ ಘಟನೆ ವಾಜಪೇಯಿಯಂತಹ ಗೋಮುಖ ವ್ಯಾಘ್ರನ ಬಣ್ಣವನ್ನು ಬಯಲು ಮಾಡಿದೆಯಂತಲ್ಲಾ, ಸಾಯುವುದರಲ್ಲೊಮ್ಮೆ ಭವ್ಯ ಭಾರತದ ಪ್ರಧಾನಿಯಾಗಬೇಕೆಂಬ ಲೋಭಿತನದಿಂದ ಎಲ್ಲ ಅನಾಹುತಕ್ಕೂ ಮುಗುಳುನಗೆಯ ಮೆಚ್ಚುಗೆ ಸೂಚಿಸಿದ ವಾಜಪೇಯಿ ಒತ್ತಟ್ಟಿಗಿರಲಿ ಅವರ ಜೊತೆಯಿದ್ದ ಮಾಧ್ವಗುರುವೊಬ್ಬ "ಮುಖ್ಯ ಅಪರಾಧಿಯಾದ ನನ್ನನ್ನೇ ಆಯೋಗ ಕೈಬಿಟ್ಟಿದೆ"ಯೆಂದು ಊಳಿಡುತ್ತಿದ್ದಾರಂತಲ್ಲಾ, ಸಾಮಾನ್ಯವಾಗಿ ಹೈನಾಗಳ ಜೊತೆ ಇರುವ ನರಿ ಯಾರಿಗೂ ಕಾಣುವುದಿಲ್ಲ, ಬಿದ್ದ ಮಿಕದ ಬಹುಮುಖ್ಯ ಭಾಗವೊಂದನ್ನು ಆರಿಸಿಕೊಂಡು ಹೋಗಿಬಿಡುತ್ತದೆ. ಅದೇ ರೀತಿ ಈ ಮಾಧ್ವ ಲೋಕದ ಗುರು ಬಾಬರಿ ಮಸೀದಿಯಿದ್ದ ಜಾಗದಲ್ಲಿ ಬೆಲೆಬಾಳುವ ರಾಮನ ಒಡವೆ ಸಿಕ್ಕವು ಎಂದು ಓಡುತ್ತ ಬಂದು "ನೋಡಿ, ನನಗೆ ರಾಮನ ಕೌಪೀನವೇ ಸಿಕ್ಕಿದೆ. ಆದರೂ ಲಿಬರ್ಹಾನ್ ಆಯೋಗ ನನ್ನನ್ನು ಕರೆಯಲಿಲ್ಲ, ಕೇಳಲಿಲ್ಲ, ಪ್ರಮುಖ ಸಾಕ್ಷೀದಾರನಾಗಿ ಪರಿಗಣಿಸಲಿಲ್ಲ, ಇದರಿಂದ ನನಗೆ ದುಃಖವಾಗಿದೆ. ಮುಖ್ಯ ಅಪರಾಧಿಯನ್ನೇ ಬಿಡುವುದು ಅಕ್ಷಮ್ಯ ಅಪರಾಧ" ಎಂದು ಊಳಿಟ್ಟುಕೊಂಡು ತಿರುಗುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * *

ಬಾಬರಿ ಮಸೀದಿ ಕೆಡವಿದ ಧೂಳು, ಬಳ್ಳಾರಿ ಗಣಿ ಧೂಳೆಲ್ಲ ಆಕಾಶದಲ್ಲಿ ಹರಡಿಕೊಂಡು ಒಂದು ರೀತಿಯ ಕೋಲಾಹಲವೇ ಸೃಷ್ಟಿಯಾಗಿರುವ ಈ ಸಮಯದಲ್ಲಿ ಮಾಜಿ ಪ್ರಧಾನಿಗಳಾದ ದೇವೇಗೌಡರು "ಜನತಾ ದಳದವರೆಲ್ಲಾ ಮತ್ತೆ ಬನ್ನಿ, ಒಂದಾಗಿ ಜಗಳವಾಡೋಣ" ಎಂದು ಕರೆ ಕೊಟ್ಟಿದ್ದಾರಂತಲ್ಲಾ, ಈ ಸುದ್ದಿ ಕೇಳಿದ ಇಬ್ರಾಹಿಂ ಅಷ್ಟೂ ಹಲ್ಲು ಬಿಟ್ಟುಕೊಂಡು ನಗುತ್ತಾ "ಗೌಡ್ರು ತಿಥಿ ಊಟ ಉಂಡಿದ್ದು ಕಂಪ್ಲೀಟಾಯ್ತು ಅನ್ಸುತ್ತೆ, ಇನ್ನಾರ ತಂಟೆನೂ ಇಲ್ಲ, ಅದ್ಕೆ 'ಕನ್ನಡದಾ ದಳದೋರ್ಕಲ್ಲ ಒಂದಾಗಿ ಬನ್ನಿ, ಕುಮಾರಣ್ಣ ರೇವಣ್ಣನಿಂದೇನೆ ಬನ್ನಿ' ಅಂತ ಕನ್ನಡದ ಭಕ್ತಿಗೀತೆ ಶುರು ಹಚ್ಚಗಂಡವ್ರೆ. ಕರ್ನಾಟಕದಲ್ಲಿ ಮೊತ್ತ ಮೊದಲು ಜನತಾ ಪಾರ್ಟಿ ಅಧಿಕಾರಕ್ಕೆ ಬಂದಾಗ ಅದನ್ನ ಮುಲಾಜಿಲ್ಲದೆ ಹೊಡದಾಕಿದೋರು ಗೌಡ್ರು. ಅನಂತ್ರ ತೊಂಬತ್ತರ ದಶಕದಲ್ಲಿ ಅಧಿಕಾರಕ್ಕೆ ಬಂದಾಗ್ಲು ಹೋಳು ಮಾಡಿದ್ರು. ತೀರ ಈಚೆಗೆ ಎರಡು ಸಾವಿರದೈದರಲ್ಲಿ ಬಂದಾಗ್ಲು ಅಂಗೇ ಮಾಡಿದ್ರು. ಅದರ ಫಲವೇ ಇವತ್ತು ಜನತಾದಳ ಈ ಸ್ಥಿತಿಗೆ ಬಂದು ಸಾಯ್ತಾಯಿರದು. ಪಾಪ ಗೌಡ್ರಿಗೆ ಮತ್ತೆ ಪಾರ್ಟಿ ಹೊಡಿಬೇಕು ಅನ್ನಿಸಿರಬೇಕು. ಅದ್ಕೆ ಗೌಡ್ರು 'ಕಾಗೆಯೊಂದಗಳ ಕಂಡು ಕರೆಯದೇ ಬಳಗವ, ಕೋಳಿಯೊಂದು ಗುಟುಕ ಕಂಡು ಕರೆಯದೇ ಕುಟುಂಬವ' ಅಂತ ಹೇಳಿ ಹಾಳಾಗಿ ಮೂಳಾಗಿರೊ ದಳದೋರನ್ನಲ್ಲ ಕರೀತಾ ಅವ್ರೆ ಉಷಾರು!" ಎಂದರಂತಲ್ಲಾ, ಥೂತ್ತೇರಿ!! ●


...ತ್ತಿವೆ. ದೆಹಲಿ, ಮುಂಬೈ, ಚೆನ್ನೈ, ಕೊಲ್ಕತ್ತಾ ...ಳೂರು, ಹೈದರಾಬಾದ್ ಮುಂತಾದ ಬೃಹತ್ ನಗರ... ಹರಿಯುವ ಕೊಚ್ಚೆ ನೀರಿಗೆ ಸರಿಯಾದ ವ್ಯವಸ್ಥೆ ...ದೇ ಮಿಥೇನ್ ಅನಿಲ ಸೃಷ್ಟಿಗೆ ಇವೇ ಸರ್ಕಾರಗಳು ...ವಾಗುತ್ತಿವೆ. ಇಂಥ ಮಹಾನಗರಗಳಲ್ಲಿ ಕಸವನ್ನು ...ಳ್ಳುವುದಕ್ಕೆ ಗುತ್ತಿಗೆ ಹಿಡಿದುಕೊಂಡಿರುವ ಬೃಹತ್ ...ಗಳು ಸಂಗ್ರಹಿಸಿದ ಕಸವನ್ನು ಸರಿಯಾಗಿ ಸಂಸ್ಕರಿಸದೇ ...ದಲ್ಲಿ ಬಿಸಾಡುವ ಮೂಲಕ ಮಿಥೇನ್ ಅನಿಲ ... ಕಾರಣವಾಗುತ್ತಿವೆ. ಈ ಮೂಲಗಳಿಂದ ಸೃಷ್ಟಿ...ವ ಮಿಥೇನ್ ಗೋಮಾಂಸ ಭಕ್ಷಣೆಯಿಂದ ಸೃಷ್ಟಿ...ವ ಮಿಥೇನ್‌ಗಿಂತ ಎಷ್ಟೋ ಪಟ್ಟು ಹೆಚ್ಚಾಗಿದೆ. ...ಮ್ ರಮೇಶ್‌ಗೆ ಪರಿಸರ ರಕ್ಷಣೆ ಬಗ್ಗೆ ಅಷ್ಟೊಂದು ...ಯಿದ್ದರೆ ಮೊದಲು ಅದನ್ನೆಲ್ಲಾ ಸರಿಪಡಿಸಿ ಆಮೇಲೆ ...ಮಾಂಸ ಭಕ್ಷಣೆಯ ಬಗ್ಗೆ ಮಾತನಾಡಲಿ.

...ಸ್ಥೆಯಲ್ಲಿ ಅದು ಜೈರಾಮ್ ರಮೇಶ್ ಅವರ ...ಯಲ್ಲಿ, ಸಂಘಪರಿವಾರದ ಹಿಂದುತ್ವ ಎಂಬ ನಂಜು ...ವನ್ನು ತಲೆಗೇರಿಸಿಕೊಂಡ ವ್ಯಕ್ತಿಯೊಬ್ಬರ ಸಮಸ್ಯೆ ...ಸಂಘಪರಿವಾರಿಗಳು ಗೋಮಾಂಸ ಭಕ್ಷಣೆ ...ದೇಶದ್ರೋಹ, ಧರ್ಮ, ಶ್ರದ್ಧೆ ಮುಂತಾದ ಬ್ಯಾನರ್‌ನಡಿ ...ವಿರೋಧಿಸುತ್ತಾ ಬಂದಿದ್ದಾರೆ. ಅದಕ್ಕೆ ಜೈರಾಮ್ ... ವೈಜ್ಞಾನಿಕ ಲೇಪನ ಮಾಡುವುದಕ್ಕೆ ಪ್ರಯತ್ನಿಸು... ವಿಶೇಷ ಎಂದರೆ ಅವರು ಬಿಜೆಪಿ ಅಥವಾ ...ಪರಿವಾರಕ್ಕೆ ಸೇರಿದ ಮನುಷ್ಯ ಅಲ್ಲ, ಶುದ್ಧ ಕಾಂಗ್ರೆಸ್ಸಿಗ. ...ತಾನೇ ಚೆಡ್ಡಿ ಮೇಲೆ ಸೂದು ಪ್ಯಾಂಟ್ ಹಾಕಿಕೊಂಡ...

ಕಾರ್ಟೂನ್ ಕಾರ್ನರ್



ಕಾಂಗ್ರೆ-ಜೆಡಿಎಸ್ ಮೈತ್ರಿ; ದೊಡ್ಡ ಗೌಡರ ದೊಡ್ಡ ತಂತ್ರ



'ಸ್ನೇಹಕ್ಕೂ ಬದ್ಧ ಸಮರಕ್ಕೂ ಸಿದ್ಧ' ಎಂಬ ಆಟೋ ಸಾಹಿತ್ಯವನ್ನು ಬೆಂಗಳೂರಿನ ಅನೇಕ ಆಟೋಗಳ ಹಿಂಬದಿಯಲ್ಲಿ ನೀವು ನೋಡಿರಬಹುದು. ಅದರಂತೆ ರಾಜ್ಯ ರಾಜಕೀಯದಲ್ಲಿ ಸ್ನೇಹ ಮತ್ತು ಸಮರ ಎಂಬ ಎರಡು ಮುಖ್ಯ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಸೂತ್ರಧಾರ ಮಾಜಿ ಪ್ರಧಾನಿ ದೇವೇಗೌಡರು.


ವಿಧಾನಪರಿಷತ್ ಚುನಾವಣೆ ನಡೆಯಲಿರುವ ಈ ಸಂದರ್ಭದಲ್ಲಿ ಕಾಂಗ್ರೆ ಮತ್ತು ಜೆಡಿಎಸ್ ತಮ್ಮಲ್ಲ ಹಳೆಯ ದ್ವೇಷ ಮತ್ತು ಅಸೂಯೆಗಳನ್ನು ಬದಿಗಿಟ್ಟು ಮೈತ್ರಿ ಮಾಡಿಕೊಂಡಿರುವುದು ರಾಜ್ಯ ರಾಜಕೀಯದಲ್ಲಿ ಒಂದು ಹೊಸ ಬೆಳವಣಿಗೆ. ಈ ಹಿಂದೆ ದೇವೇಗೌಡರ ಜ್ಯಾತ್ಯತೀತ ಜನತಾ ದಳವು ಕಾಂಗ್ರೆ ಜೊತೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿದಾಗ ರಾಜ್ಯ ರಾಜಕೀಯದಲ್ಲಿ ಸಮ್ಮಿಶ್ರ ಸರ್ಕಾರದ ಹೊಸ ಅಧ್ಯಾಯ ಆರಂಭವಾಗಿತ್ತು, ಆಗ ಕಾಂಗ್ರೆ ಜೊತೆ ಮೈತ್ರಿ ಮಾಡಿಕೊಂಡಿದ್ದರ ಹಿಂದಿದ್ದ ಏಕೈಕ ಉದ್ದೇಶ ಕೋಮುವಾದಿ ಬಜೆಪಿ ಅಧಿಕಾರಕ್ಕೆ ಬಾರದಂತೆ ತಡೆಯುವುದಾಗಿತ್ತು. ಆದರೆ ಆನಂತರ ಅತ್ಯಂತ ಆಚ್ಚರಿಯ ಬೆಳವಣಿಗೆಗಳು ನಡೆದು ಕಾಂಗ್ರೆ ಸ್ನೇಹಕ್ಕೆ ಗುಡ್‌ಬೈ ಹೇಳಿದ ದೇವೇಗೌಡರ ಪುತ್ರ ಕುಮಾರಸ್ವಾಮಿ ಬಿಜೆಪಿ ಜೊತೆ ಸೇರಿ ಅಧಿಕಾರ ಹಂಚಿಕೊಂಡು ಸರ್ಕಾರ ಸ್ಥಾಪಿಸಿದ್ದರು. ಆಗ ಜೆಡಿಎಸ್ ಪಾಲಿಗೆ ಕಾಂಗ್ರೆಸ್ ಪಕ್ಷ 'ದೊಡ್ಡಣ್ಣ'ನ ರೀತಿಯಲ್ಲಿ ವರ್ತಿಸುವ ಧಿಮಾಕಿನ ಪಕ್ಷದಂತೆ ಕಾಣಿಸಿತ್ತು. ಹೀಗೆ ಇನ್‌ಸ್ಟಾಲ್‌ಮೆಂಟ್‌ನಲ್ಲಿ ದೇವೇಗೌಡರಿಗೆ ಕಾಂಗ್ರೆಸ್ ಒಮ್ಮೆ ಶತ್ರುಪಕ್ಷವಾಗಿಯೂ, ಮತ್ತೊಮ್ಮೆ ಬಿಜೆಪಿ ಕೋಮುವಾದಿ ಪಕ್ಷವಾಗಿಯೂ ಕಾಣಿಸುವುದುಂಟು.

ಇದಾದ ನಂತರ ಮೊನ್ನೆಯ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ದೇವೇಗೌಡರ ದಂಡು ಏಕಾಂಗಿಯಾಗಿ ಹೋರಾಟ ನಡೆಸುವ ಮುಖಾಂತರ ಇನ್ನು ಮುಂದೆ ಕಾಂಗ್ರೆಸ್ ಜೊತೆ ಮೈತ್ರಿಯ ಪ್ರಶ್ನೆಯೇ ಇಲ್ಲ ಎಂಬ ಸಂದೇಶವನ್ನು ನೀಡಿತ್ತು. ಅದಕ್ಕೆ ತಕ್ಕಂತೆ ಉಪ ಚುನಾವಣೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಜೆಡಿಎಸ್ ತನ್ನ ಪ್ರಾಬಲ್ಯವನ್ನು ಮೆರೆಯುತ್ತಾ ದಿನದಿಂದ ದಿನಕ್ಕೆ ಗಟ್ಟಿಯಾಗುತ್ತಾ ಹೋಯಿತು.

ಬಿಜೆಪಿಯ ನಾಶಕ್ಕೆ ಮುನ್ನುಡಿ

ಇನ್ನೇನು ಕಾಂಗ್ರೆನೊಂದಿಗೆ ಜೆಡಿಎಸ್ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆಯೇ ಇಲ್ಲವೆಂದು ಚೆಡ್ಡಿಗಳು ಭಾವಿಸಲಾರಂಭಿಸಿದ್ದಾಗಲೇ ದೇವೇಗೌಡರು ಮತ್ತೆ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಜೊತೆ ಫ್ರೆಂಡ್‌ಶಿಪ್ ಮಾಡಿಕೊಂಡು ರಾಜ್ಯದ ಚೆಡ್ಡಿ ನಾಯಕರಲ್ಲಿ ಗಾಬರಿ ಹುಟ್ಟಿಸಿದ್ದಾರೆ.

ವಿಧಾನ ಪರಿಷತ್ತಿಗೆ ನಡೆಯಲಿರುವ ಚುನಾವಣೆಯಲ್ಲಿ ಸೋನಿಯಾ-ದೇವೇಗೌಡರ 'ಸ್ನೇಹ ಮಿಲನ'ದಿಂದ ರಾಜ್ಯ ಬಿಜೆಪಿ ಸರ್ಕಾರಕ್ಕೆ ಕುತ್ತು ಬರಲಿದೆಯೇ? ಎಂಬುದರ ಬಗ್ಗೆ ಈಗಲೇ ಭವಿಷ್ಯ ನುಡಿಯಲು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಚುನಾವಣೆಯ ಫಲಿತಾಂಶ ಯಾರ ಪರ ವಾಲಿದರೂ ಅಧಿಕಾರದಲ್ಲಿರುವ ಬಜೆಪಿಗೆ ಸದ್ಯದಲ್ಲೇ ಯಾವ ಅಪಾಯವೂ ಇಲ್ಲ. ಆದರೂ ಜೆಡಿಎಸ್-ಕಾಂಗ್ರೆ ಮೈತ್ರಿ ಮುಂಬರುವ ದಿನಗಳಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲು ಬರೆದಿರುವ ಮುನ್ನುಡಿ ಎಂದು ಧೈರ್ಯವಾಗಿ ಹೇಳಬಹುದು.




ಉದಾಹರಣೆಗೆ ದೇವೇಗೌಡರು ಎಂತಹ ಸಂದರ್ಭದಲ್ಲಿ ಕಾಂಗ್ರೆ ಜೊತೆ ಹಸ್ತಲಾಘವ ಮಾಡಿದ್ದಾರೆ ನೋಡಿ! ಈಗ ಭಾರತೀಯ ಜನತಾಪಕ್ಷ ಆಂತರಿಕ ಜಗಳದಿಂದ ದಿನದಿಂದ ದಿನಕ್ಕೆ ಜನಪ್ರಿಯತೆ ಕಳೆದುಕೊಳ್ಳುತ್ತಾ ಜರ್ಜರಿತವಾಗುತ್ತಿದೆ. ಈಗಂತೂ ಬಿಜೆಪಿಯು ಕೇಂದ್ರದಲ್ಲೂ ರಾಜ್ಯದಲ್ಲೂ ಬಿರುಕುಬಿಟ್ಟ ಮನೆಯಾಗಿದೆ. ಅಂದಮೇಲೆ, ಚತುರ ರಾಜಕಾರಣಿ ದೇವೇಗೌಡರು ಇಂತಹ ಸಂದರ್ಭವನ್ನು ಸದುಪಯೋಗ ಪಡಿಸಿಕೊಳ್ಳದಿರುತ್ತಾರೆಯೇ?


ಇತ್ತೀಚೆಗೆ ಮುಖ್ಯಮಂತ್ರಿ ಯಡಿಯೂರಪ್ಪನನ್ನು ಬಗ್ಗುಬಡಿಯಲು ಅವರ ವೈರಿಗಳಾದ ಬಳ್ಳಾರಿ ಗಣಿಧಣಿಗಳು ಕಾಂಗ್ರೆ ಬಾಗಿಲನ್ನು ಬಡಿಯುತ್ತಿದ್ದಾರೆ ಎಂಬ ಸುದ್ದಿ ದೇವೇಗೌಡರನ್ನು ಗಾಬರಿಗೊಳಿಸಿತ್ತು. ಒಂದು ವೇಳೆ ಈ ಗಣಿ ಕಳ್ಳರು ಆಂಧ್ರದ ತಮ್ಮ ಕಾಂಗ್ರೆ ಗಾಡ್‌ಫಾದರ್‌ಗಳ ಮುಖಾಂತರ ಕಾಂಗ್ರೆಸ್ ಅನ್ನು ಪ್ರವೇಶಿಸಿದ್ದೇ ಆದಲ್ಲಿ ತಮಗಿನ್ನು ರಾಜಕೀಯ ಭವಿಷ್ಯವೇ ಇಲ್ಲ ಎಂದು ದೇವೇಗೌಡರು ಅರಿತರು. ಈ ಕಾರಣಕ್ಕಾಗಿಯೇ ಅವರು ತಮ್ಮ ಅಹಂಅನ್ನು ಬದಿಗೊತ್ತಿ ಕಾಂಗ್ರೆ ಜೊತೆ ಸ್ನೇಹವನ್ನು ಬಯಸುವ ಮುಖಾಂತರ ಬಳ್ಳಾರಿ ದಣಿಗಳ ದೆಹಲಿ ಯಾತ್ರೆಗೆ ಅಡ್ಡಬಂದರು.


MLC ಚುನಾವಣೆ

ದೇವೇಗೌಡರು ಕಾಂಗ್ರೆ ಹೈಕಮಾಂಡ್ ಜೊತೆ ಸ್ನೇಹ ಬೆಳೆಸಿದ್ದರಿಂದ ರೆಡ್ಡಿಗಳಿಗೆ ಈಗ ಬೇರೆ ದಾರಿಇಲ್ಲದೆ ತಮ್ಮ ಆರ್ಭಟವನ್ನು ಕಡಿಮೆ ಮಾಡಿದ್ದಾರೆ. ಅಷ್ಟೇ ಅಲ್ಲ, ಬಳ್ಳಾರಿ ಗಣಿಧಣಿಗಳ ವಿರುದ್ಧ ಲೋಕ ಸಭೆಯಲ್ಲಿ ಮಾತನಾಡಲು ಸುಮಾರು ನೂರಕ್ಕೂ ಹೆಚ್ಚು ಲೋಕಸಭಾ ಸದಸ್ಯರನ್ನು ಆಂಧ್ರದ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ನೇತೃತ್ವದಲ್ಲಿ ಗೌಡರು ತಯಾರು ಮಾಡಿದ್ದಾರೆ. ಅಂದರೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಗಣಿಧಣಿಗಳನ್ನು ರಾಜಕೀಯವಾಗಿ ಮುಗಿಸಲೇಬೇಕು ಎಂದು ಗೌಡರು ಪಣ ತೊಟ್ಟಂತಿದೆ. ಈ ನಿಟ್ಟಿನಲ್ಲಿ ಕಾಂಗ್ರೆನೊಂದಿಗಿನ ಈ ಮೈತ್ರಿ ಗೌಡರಿಗೆ ಅನಿವಾರ್ಯವಾಗಿತ್ತು.

ಆದರೀಗ ದೇಶದ ಹಲವಾರು ಕಡೆ ತನ್ನ ಅಧಿಪತ್ಯವನ್ನು ಯಾವುದೇ ಪ್ರಾದೇಶಿಕ ಪಕ್ಷಗಳ ಸಹಾಯವಿಲ್ಲದೇ ಮರುಸ್ಥಾಪಿಸುತ್ತಿರುವ ಕಾಂಗ್ರೆಸ್‌ಗೆ ಜೆಡಿಎಸ್‌ನೊಂದಿಗಿನ ಈ ಮೈತ್ರಿಯ ಅವಶ್ಯಕತೆ ಇತ್ತೆ? ಮುಖ್ಯವಾಗಿ ದೇವೇಗೌಡ ಮತ್ತು ಅವರ ಮಕ್ಕಳ ಉಪಟಳ ತಾಳಲಾರದೆ ಕಾಂಗ್ರೆಗೆ ವಲಸೆ ಬಂದ ಸಿದ್ದರಾಮಯ್ಯ, ದೇಶಪಾಂಡೆ, ಉಗ್ರಪ್ಪ ಮೊದಲಾದ ನಾಯಕರಿಗೆ ಮೈತ್ರಿ ಇರಿಸುಮುರಿಸು ಉಂಟುಮಾಡಿದೆ. ಹಾಗೆಯೇ ಕ್ಷೇತ್ರಮಟ್ಟದಲ್ಲಿ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಪರಸ್ಪರ ಸಮರ ಸಾರಿ ಹೋರಾಟ ನಡೆಸುತ್ತಿದ್ದ ಕಾಂಗ್ರೆ ಮತ್ತು ಜೆಡಿಎಸ್ ಕಾರ್ಯ ಕರ್ತರಿಗೂ ಈ ಮೈತ್ರಿ ಸಂಕಟವನ್ನು ತಂದಿಟ್ಟಿದೆ. ಕಳೆದ ಕೆಲವು ವರ್ಷಗಳಿಂದ ಕಾಂಗ್ರೆ ಟಿಕೆಟನ್ನು ನಿರೀಕ್ಷಿಸುತ್ತಾ ಕೆಲಸ ಮಾಡಿದ್ದ ನಾಯಕರು ಈಗ ಮೈತ್ರಿಯ ಫಲವಾಗಿ ತಮ್ಮ ಆಕಾಂಕ್ಷೆಯನ್ನು ದಳದ ಪಾದಕ್ಕೆ ಅರ್ಪಿಸಬೇಕಾಗಿ ಬಂದಿರುವುದು ಅವರಿಗೆ ನೋವಿನ ವಿಷಯವಾಗಿದೆ. ಈ ಕಾರಣಕ್ಕಾಗಿಯೇ ರಾಷ್ಟ್ರಮಟ್ಟದಲ್ಲಿ ನಾಯಕರು ಸ್ನೇಹಹಸ್ತ ಚಾಚಿದರೂ ಲೋಕಲ್ ಲೆವೆಲ್‌ನಲ್ಲಿ ಕಾರ್ಯಕರ್ತರ ನಡುವೆ ಇನ್ನೂ ತೆರೆಮರೆಯಲ್ಲಿ ಸಮರ ನಡೆಯುತ್ತಲೇ ಇದೆ. ಇದರ ಫಲವಾಗಿಯೇ ಅನೇಕ ಕಡೆ ಎರಡೂ ಪಕ್ಷಗಳಿಂದ ಬಂಡಾಯ ರೂಪದಲ್ಲಿ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ.







ಕಾಂಗ್ರೆಸ್‌ನ ದುರುದ್ದೇಶ

ರಾಜ್ಯದಲ್ಲಿ ಕಾಂಗ್ರೆಸ್ ಒಂದೆರಡು ಶಾಸಕ ಸ್ಥಾನಗಳನ್ನು ಕಳೆದುಕೊಂಡರೂ ಅದಕ್ಕಾಗಿ ಪಶ್ಚಾತ್ತಾಪ ಪಡುವುದಿಲ್ಲ. ಅದು ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿರುವ ಉದ್ದೇಶ ಸದ್ಯದಲ್ಲೇ ನಡೆಯಲಿರುವ ರಾಜ್ಯಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು. ಆ ಚುನಾವಣೆಯಲ್ಲಿ ಕಾಂಗ್ರೆಸ್ ಹೈಕಮಾಂಡಿಗೆ ಅತ್ಯಂತ ಆಪ್ತರಾದ ಆಸ್ಕರ್ ಫರ್ನಾಂಡಿಸ್ ಮತ್ತು ಬಿ.ಕೆ. ಹರಿಪ್ರಸಾದ್‌ರನ್ನು ಗೆಲ್ಲಿಸುವುದು ಗುರಿಯಾಗಿದೆ. ಇವರಿಬ್ಬರು ರಾಜ್ಯಸಭೆಗೆ ಮತ್ತೆ ಆಯ್ಕೆಯಾಗಲೇಬೇಕಾದರೆ ರಾಜ್ಯದಲ್ಲಿ ಜೆಡಿಎಸ್ ಶಾಸಕರು ಹೋಲ್‌ಸೇಲಾಗಿ ಅವರ ಪರವಾಗಿ ಮತ ಹಾಕಿದರೆ ಮಾತ್ರ ಸಾಧ್ಯ! ಇದಕ್ಕಾಗಿಯೇ ಆ ಎರಡು ಸ್ಥಾನಕ್ಕಾಗಿ ಹೈಕಮಾಂಡ್ ಕೂಡಾ ದೇವೇ ಗೌಡರ ಜೊತೆ ಸ್ನೇಹ ಮಾಡಿಕೊಳ್ಳಲು ಮುಂದಾದದ್ದು.

ಈ ಹಿಂದೆ ಜೆಡಿಎಸ್‌ನೊಂದಿಗೆ ಕಾಂಗ್ರೆ ಮೈತ್ರಿ ಸ್ಥಾಪಿಸುವ ವಿಷಯ ಪ್ರಸ್ತಾಪವಾದಾಗಲೆಲ್ಲಾ ರಾಜ್ಯ ಕಾಂಗ್ರೆ ನಾಯಕರು ಒಂದೇ ಧ್ವನಿಯಲ್ಲಿ ಅದನ್ನು ವಿರೋಧಿಸುತ್ತಿದ್ದರು. ಆದರೆ ಈ ಬಾರಿ ಹೈಕಮಾಂಡ್ ಮಟ್ಟದಲ್ಲಿ ಈ ಮೈತ್ರಿಯ ತೀರ್ಮಾನವಾದ್ದರಿಂದ ಲೋಕಲ್ ನಾಯಕರು ಅದನ್ನು ವಿಧಿ ಇಲ್ಲದೆ ಸ್ವೀಕರಿಸಬೇಕಾಗಿದೆ.

ಖರ್ಗೆ ಮುಖ್ಯಮಂತ್ರಿ?


ದೆಹಲಿ ಮೂಲಗಳ ಪ್ರಕಾರ ಈ ಮೈತ್ರಿಯ ಹಿಂದೆ ದೇವೇಗೌಡರ ದೊಡ್ಡ ತಂತ್ರವೇ ಅಡಗಿದೆ. ಅವರ ಪ್ರಕಾರ ಅದು ಹೀಗಿದೆ: 'ಒಂದು ವೇಳೆ ಬಳ್ಳಾರಿ ಧಣಿಗಳು ಯಡಿಯೂರಪ್ಪನನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವಲ್ಲಿ ಯಶಸ್ವಿಯಾದರೆ, ಆಗ ನಿಮ್ಮನ್ನ ಮುಖ್ಯಮಂತ್ರಿಯನ್ನಾಗಿ ಮಾಡಲು ನಾನು ಎಲ್ಲ ರೀತಿಯ ಸಹಕಾರ ಮತ್ತು ಬೆಂಬಲ ನೀಡುತ್ತೇನೆ' ಎಂದು ದೇವೇಗೌಡರು ದೆಹಲಿಯಲ್ಲಿರುವ ಮಲ್ಲಿಕಾರ್ಜುನ ಖರ್ಗೆಯ ಮೂಗಿಗೆ ತುಪ್ಪ ಸವರಿದ್ದಾರಂತೆ! 'ರಾಜ್ಯದ ಮುಖ್ಯಮಂತ್ರಿ ಕುರ್ಚಿಯಲ್ಲಿ ಒಬ್ಬ ದಲಿತನನ್ನು ಕುಳ್ಳಿರಿಸು ವುದೇ ನನ್ನ ಜೀವನದ ಆಸೆ' ಎಂದೂ ಗೌಡರು ಖರ್ಗೆ ಸಾಹೇಬರಿಗೆ ಆಶ್ವಾಸನೆ ಕೊಟ್ಟಿದ್ದಾರಂತೆ! ಗೌಡರ ಈ ಮಾತಿನಿಂದ ಪುಳಕಿತರಾದ ಖರ್ಗೆ ಸಾಹೇಬರು ಮುಖ್ಯ ಮಂತ್ರಿಯಾಗುವ ಕನಸನ್ನು ಮತ್ತೆ ಕಾಣಲು ಆರಂಭಿಸಿ ದ್ದಾರಂತೆ. ರಾಜ್ಯ ರಾಜಕೀಯದ ಇಂದಿನ ಅನಿಶ್ಚಿತ ಪರಿಸ್ಥಿತಿಯಲ್ಲಿ ಅಂತಹ ರಾಜಕೀಯ ಬೆಳವಣಿಗೆಯಾ[ದರೆ] ಒಂದು ವೇಳೆ ಕರ್ನಾಟಕ ರಾಜ್ಯ ಮೊದಲ ಬಾರಿ ದಲಿತ ಮುಖ್ಯಮಂತ್ರಿಯೊಬ್ಬನನ್ನು ಕಂಡರೂ ಆಶ್ಚರ್ಯವಿ[ಲ್ಲ].

ಆದರೆ ಈ ಎಲ್ಲಾ ರಾಜಕೀಯ ಬೆಳವಣಿಗೆಗಳ[ು] ದೇವೇಗೌಡರ ಪರವಾಗಿ ದಿನದಿಂದ ದಿನಕ್ಕೆ ಪರಿವರ್ತ[ನೆ]ಯಾಗುತ್ತಿರುವುದು ರಾಜ್ಯ ಕಾಂಗ್ರೆ ನಾಯಕರಿಗೆ ನುಂ[ಗ]ಲಾರದ ತುತ್ತಾಗಿದೆ. ದೇವೇಗೌಡರ ಪಕ್ಷದಿಂದ ಕಾಂಗ್ರೆ[ಗೆ] ವಲಸೆ ಬಂದ ಸಿದ್ದರಾಮಯ್ಯನವರಿಗೆ ಇದೊಂದ[ು] ತಲೆನೋವಿನ ಬೆಳವಣಿಗೆಯಾಗಿದೆ. ಕಾಂಗ್ರೆ ಪಕ್ಷದಲ್ಲಿದ್ದ[ು] ಮುಖ್ಯಮಂತ್ರಿಯಾಗುವ ಅವಕಾಶ ಹೆಚ್ಚು ಎಂದ[ು] ಭಾವಿಸಿದ್ದ ಸಿದ್ದರಾಮಯ್ಯನವರಿಗೆ ಈ ಎ[ಲ್ಲಾ] ಬೆಳವಣಿಗೆಯಿಂದ ಕಸಿವಿಸಿಯಾಗಿದೆ. ಅದರಲ[್ಲೂ] ಮುಖ್ಯವಾಗಿ ಸಿಎಂ ಸ್ಥಾನಕ್ಕೆ ಖರ್ಗೆಯವರ ಹೆಸರನ[್ನು] ಗಾಳಿಯಲ್ಲಿ ತೇಲಿಬಿಟ್ಟ ನಂತರ ಸಿದ್ದರಾಮಯ್ಯ ಯಾಕೋ ಏನೋ ಮೌನವಾಗಿದ್ದಾರೆ.

ಹೀಗೆ ಕಾಂಗ್ರೆ ಜೊತೆ ಸ್ನೇಹಹಸ್ತ ಚಾಚಿ[ದ] ದೇವೇಗೌಡರು ಒಂದೆಡೆ ಬಳ್ಳಾರಿ ಧಣಿಗಳು ಕಾಂ[ಗ್ರೆ] ಸೇರುವ ಹಾದಿಗೆ ಮುಳ್ಳಾಗಿದ್ದಾರೆ. ಇನ್ನೊಂದೆಡೆ ದಳದಿಂ[ದ] ವಲಸೆ ಬಂದ ಸಿದ್ದರಾಮಯ್ಯ ಮತ್ತು ದೇಶಪಾಂಡೆ ಗ್ಯಾಂಗ್ ಆರ್ಭಟವನ್ನು ಮಟ್ಟ ಹಾಕಿದಂತಾಗಿದೆ. ಮತ್ತೊಂದೆ[ಡೆ] ಕಾಂಗ್ರೆ ಜೊತೆ ಮೈತ್ರಿ ಮಾಡಿಕೊಂಡು ತನ್ನ ಮುದ್ದಿ[ನ] ಮಗ ರೇವಣ್ಣನನ್ನು ಉಪಮುಖ್ಯಮಂತ್ರಿ ಮಾಡುವ ತಮ[್ಮ] ಜೀವನದ ಮಹತ್ವಾಕಾಂಕ್ಷೆಯನ್ನು ಈಡೇರಿಸುವತ್ತ ಇನ್ನೊಂದ[ು] ಹೆಜ್ಜೆ ಮುಂದಿಟ್ಟಿದ್ದಾರೆ. ಇದೆಲ್ಲಕ್ಕಿಂತ ಮುಖ್ಯವಾಗಿ ಬಿಜೆ[ಪಿ] ಸಖ್ಯದಿಂದಾಗಿ ಕಳೆದುಹೋದ ಅಲ್ಪಸಂಖ್ಯಾತ ಮತ[ು] ಹಿಂದುಳಿದವರ ಮತಗಳನ್ನು ಮತ್ತೆ ತಮ[್ಮ] ಬಗಲಿಗೆ ಹಾಕಿಕೊಳ್ಳಲು ದೇವೇಗೌಡರ[ು] ಸರಿಯಾದ ಮಾರ್ಗ ಹಿಡಿದಿದ್ದಾರೆ.

ಆದರೆ ಈ ಮೈತ್ರಿಯು ರಾಜ್ಯ ರಾ[ಜ]ಕಾರಣದಲ್ಲಿ ಯಾವ ತರಹದ ಸಂಚಲ[ನ] ಉಂಟುಮಾಡಬಹುದು? ಈ ಹಿಂ[ದೆ] ಲೋಕಸಭೆ, ಅಸೆಂಬ್ಲಿ ಮತ್ತು ಉಪಚುನಾವ[ಣೆ]ಗಳಲ್ಲಿ ಹಾಗೂ ಆಪರೇಷನ್ ಕಮಲ[ದ] ಸಂದರ್ಭದಲ್ಲಿ ಗಣಿಧಣಿಗಳ ದುಡ್ಡಿ[ನ] ಪ್ರಭಾವದಿಂದ ಜಯಭೇರಿ ಬಾರಿಸಿದ್ದ ಯ[ಡಿಯೂರಪ್ಪ] ಪಾಲಿಗೆ ಇದು 'ಮಾಡು ಇಲ್ಲವೆ ಮ[ಡಿ]' ಎಂಬಂತಹ ಪರಿಸ್ಥಿತಿಯಾಗಿದೆ. ಯಾಕೆಂದ[ರೆ] ಈ ಬಾರಿ ಬಳ್ಳಾರಿ ಧಣಿಗಳು ಗೋ[ಣಿ] ಚೀಲಗಳಲ್ಲಿ ಹಣ ಕಳುಹಿಸುವ ಸಾಧ[್ಯತೆ]ಯಂತೂ ಇಲ್ಲವೇ ಇಲ್ಲ. ಅಷ್ಟೇ ಅ[ಲ್ಲ] ಅವರು ಪಕ್ಷದ ಅಭ್ಯರ್ಥಿಗಳ ಪರ ಪ್ರಚಾ[ರ] ಮಾಡುವ ಬದಲು ಯಡ್ಡಿಗೆ ಮುಖಭಂ[ಗ] ಮಾಡುವ ಸಾಧ್ಯತೆಯೇ ಹೆಚ್ಚು, [ಈ] ಕಾರಣದಿಂದಾಗಿ ಯಡ್ಡಿಯ ತವರೂರಾ[ದ] ಶಿವಮೊಗ್ಗದಲ್ಲೇ ಬಿಜೆಪಿಯ ಅಭ್ಯರ್ಥಿಯ[ನ್ನು] ಬಳ್ಳಾರಿ ಗಣಿದಣಿಗಳು ಸೋಲಿಸು[ವ] ಸಾಧ್ಯತೆಯೂ ಇದೆ. ಹಾಗೆಯೇ ಗ[ಣಿ] ಧಣಿಗಳ ಪ್ರಭಾವವಿರುವ ಜಿಲ್ಲೆಗಳಾ[ದ] ರಾಯಚೂರು, ಬಳ್ಳಾರಿ, ಬಿಜಾಪುರ ಮ[ತ್ತು] ಕೊಪ್ಪಳಗಳಲ್ಲಿ ರೆಡ್ಡಿ ಸಹೋದರರ ಅಭ್ಯರ್ಥಿ[ಗ]ಳನ್ನು ಸೋಲಿಸಲು ಯಡ್ಡಿ ಗ್ಯಾಂ[ಗ್] ತೆರೆಮರೆಯಲ್ಲಿ ತಂತ್ರ ಮಾಡುತ್ತಿದೆ. ಹೀಗ[ೆ] ಯಡ್ಡಿ ಮತ್ತು ರೆಡ್ಡಿಗಳ ಕೋಳಿ ಜಗಳದಿಂದ ಬಿಜೆಪಿ ನಿರೀಕ್ಷಿಸಿದಷ್ಟು ಸ್ಥಾನಗಳನ[್ನು] ಪಡೆಯದೇ ನಿರಾಶಾದಾಯಕ ಪ್ರದರ್ಶ[ನ] ನೀಡುವುದಂತೂ ಗ್ಯಾರಂಟಿ. ಹೀಗೆ ಈ ಬಾರಿ[ಯ] ವಿಧಾನಪರಿಷತ್ ಚುನಾವಣೆಯ ಚಿತ್ರಣ ಜಿಲ್ಲೆಯಿಂ[ದ] ಜಿಲ್ಲೆಗೆ, ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಾ ಹೋಗಿ[ದೆ]. ಎಂದಿನಂತೆ ಹಳೇ ಮೈಸೂರು ಪ್ರಾಂತ್ಯದಲ್ಲಿ ದೇವೇಗೌ[ಡರ] ಜನತಾದಳ ಪ್ರಾಬಲ್ಯ ತೋರಿಸಿದರೆ, ಬಳ್ಳಾರಿ ಗಣಿಧಣಿಗ[ಳು] ಮತ್ತು ಮುಖ್ಯಮಂತ್ರಿ ಯಡಿಯೂರಪ್ಪ ತಮ್ಮ ತ[ಮ್ಮ] ಪ್ರಾಬಲ್ಯವಿರುವ ಜಿಲ್ಲೆಗಳಲ್ಲಿ ಮೆರೆಯಲು ಪ್ರಯತ್ನಿಸುತ್ತಿದ್[ದಾರೆ]. ಒಟ್ಟಾರೆಯಾಗಿ ನೋಡು ವುದಾದರೆ ಕಾಂಗ್ರೆಸ್ ಪ[ಕ್ಷಕ್ಕೆ] ಹೆಚ್ಚು ಅನುಕೂಲಕರವಾದ ಪರಿಸ್ಥಿತಿ ಕಾಣಿಸುತ್ತಿದೆ. ಹೀಗ[ೆ] ಅಧಿಕಾರರೂಢ ಬಿಜೆಪಿ ತನ್ನ ಒಳಜಗಳದಿಂದಾಗಿ ಮೊದ[ಲ] ಬಾರಿಗೆ ಅತ್ಯಂತ ನಿರಾಶಾದಾಯಕ ಫಲಿತಾಂಶದಿಂದ ಇನ್ನಷ್ಟು ದುರ್ಬಲಗೊಳ್ಳುವ ಸಾಧ್ಯತೆಯೇ ಹೆಚ್ಚು.

• ಸದಾಶಿವ ಶೆ[ಣೈ]



ಅವರನ್ನ ಬಿಟ್ಟು ಇವರನ್ನ ಬಿಟ್ಟು ಗೆಲ್ಲೋರ್ಯಾರು?

25 ಸ್ಥಾನಗಳ ಸಮೀಕ್ಷೆ

MLC ಚುನಾವಣೆ

ಇನ್ನೆರಡು ವಾರಗಳಲ್ಲಿ ನಡೆಯಲಿರುವ ವಿಧಾನ ಪರಿಷತ್ ಚುನಾವಣೆಗೆ ರಾಜಕೀಯ ಪಕ್ಷಗಳು ಸಿದ್ಧತೆ ನಡೆಸುತ್ತಿರುವಾಗಲೇ ಆಯಾ ಪಕ್ಷಗಳಲ್ಲಿ ಮತ ಮತ್ತು ಬಂಡಾಯ ಅಭ್ಯರ್ಥಿಗಳ ರಂಪಾಟ ಜಾಸ್ತಿಯಾಗಿದೆ. ಸ್ಥಳೀಯ ಸಂಸ್ಥೆಗಳ ಸದಸ್ಯರೇ ಈ ಚುನಾವಣೆಯಲ್ಲಿ ಮತ ಚಲಾಯಿಸುತ್ತಿದ್ದರೂ ಜಾತಿ, ಹಣ ಮತ್ತು ತೋಳ್ಬಲಗಳು ಈ ಬಾರಿಯೂ ...ಷ್ಟ ಪಾತ್ರ ವಹಿಸಲಿದೆ.


ಆದರೂ ಯಾವ ಕ್ಷೇತ್ರದಲ್ಲಿ ಯಾರಿಗೆ ಪಕ್ಷಗಳು ಟಿಕೆಟ್ ...ವೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಅವರು ಗೆಲ್ಲುವ ...ವಾ ಸೋಲುವ ಅಂದಾಜನ್ನು ಮಾಡಬಹುದಾಗಿದೆ.

ಬೀದರ್: ಇಲ್ಲಿ ಬಸವರಾಜ್ ಪಾಟೀಲ್ ಹುಮ್ನಾಬಾದ್ ...ಯುವವನಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನಿರಾಕರಿಸಿದ್ದರಿಂದ ರಾತ್ರೋರಾತ್ರಿ ಬಿಜೆಪಿಗೆ ಹಾರಿದ್ದಾನೆ. ಈಗ ಈ ...ಂತರಿಗೇ ಬಿಜೆಪಿ ಟಿಕೆಟ್ ನೀಡಿದೆ.

...ತೇಳಿಕೇಳಿ ಹುಮ್ನಾಬಾದ್ ಮಾಜಿ ಮಂತ್ರಿ ಮತ್ತು ಆತನಂತೆಯೇ ...ಂತರಿ ಗುರುಪಾದಪ್ಪ ನಾಗಮಾರಪಳ್ಳಿಯ ಬೀಗ. ಹುಮ್ನಾಬಾದ್‌ನ ನಾಗಮಾರಪಳ್ಳಿಯ ಮಗಳನ್ನು ಮದುವೆಯಾಗಿದ್ದಾನೆ. ಈ ನಾಗಮಾರಪಳ್ಳಿ ...ನಸಭೆ ಚುನಾವಣೆಯಲ್ಲಿ ಸೋತಿದ್ದರೂ ಅಪಾರ ಹಣಬಲಯುಳ್ಳ ಆಸಾಮಿ. ...ಂದ ಆತ ತನ್ನ ಬೀಗನನ್ನು ಗೆಲ್ಲಿಸಲು ಸರ್ವಪ್ರಯತ್ನ ಮಾಡುವುದು ...ಟ.

ಕಾಂಗ್ರೆಸ್‌ನಿಂದ ಚಂದ್ರಶೇಖರ್ ಪಾಟೀಲ್ ಸ್ಪರ್ಧಿಸಿದ್ದಾರೆ. ಜೆಡಿಎಸ್ ...ದಿಗಿನ ಮೈತ್ರಿಯಿಂದಾಗಿ ಚಂದ್ರಶೇಖರ್ ಪಾಟೀಲರಿಗೆ ಅಲ್ಪಸಂಖ್ಯಾತರು, ...ಳಿದವರು ಮತ್ತು ಕುರುಬರ ಮತಗಳು ಸಾಲಿಡ್ ಆಗಿ ಬಿದ್ದರೆ ಮಾತ್ರ ...ು ಗೆಲ್ಲುವ ಸಾಧ್ಯತೆಗಳಿವೆ.


ಶಿವಮೊಗ್ಗ: ಇತ್ತೀಚಿನ ತನಕ ಸುವರ್ಣ ...ಿ, ತಪಸ್ಸು, ಉಪವಾಸ, ಮೌನವ್ರತ ಎಂದೆಲ್ಲ ...ಹರಣ ಮಾಡಿದ್ದ ಮಹಿಮಾ ಪಟೇಲ್ ... ತಾನೆ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಅವರಿಗೆ ಕಾಂಗ್ರೆಸ್ ಟಿಕೆಟ್ ಲಭಿಸಿದೆ.


ಮಹಿಮಾ ಪಟೇಲ್

ಮಹಿಮಾ ವಿರುದ್ಧ ಬಿಜೆಪಿ ಆರ್.ಕೆ. ಸಿದ್ಧ...ಣ್ಣ ಎಂಬ ಮಾಜಿ ನಗರಸಭಾ ಅಧ್ಯಕ್ಷನಿಗೆ ... ನೀಡಿದೆ. ಇದರಿಂದ ಕೋಪೋದ್ರಿಕ್ತರಾದ ...ಡ್ಡಿ ನಾಯಕ ಶಾಂತವೀರಪ್ಪ ಗೌಡ ...ಯುವೆದ್ದು ನಾಮಪತ್ರ ಸಲ್ಲಿಸಿದ್ದಾರೆ. ...ಖ್ಯಾತ ಮರಾಠಾ ಸಮುದಾಯದವರಾದ ...ಮಣ್ಣ ಮೊದಲೇ ಗೆಲ್ಲುವ ಸಾಧ್ಯತೆಗಳು ಕಡಿಮೆ ಇದ್ದು ಈಗ ಶಾಂತವೀರಪ್ಪ ... ಪೈಪೋಟಿಯಿಂದಾಗಿ ಇನ್ನೂ ಹೆಚ್ಚು ಕಷ್ಟ ಅನುಭವಿಸಬೇಕಾಗಿದೆ. ... ಅಭ್ಯರ್ಥಿಯನ್ನು ಶತಾಯಗತಾಯ ಗೆಲ್ಲಿಸಲೇಬೇಕೆಂದು ಮುಖ್ಯಮಂತ್ರಿ ... ಮತ್ತಾತನ ಪುತ್ರ ಸಂಸದ ರಾಘು ಎಷ್ಟೇ ಶ್ರಮಿಸಿದರೂ ಗೆಲುವು ...ಚಿಕೆ ಆಗಬಹುದು.

...ಡಿಎಸ್‌ನೊಂದಿಗಿನ ಮೈತ್ರಿಯಿಂದಾಗಿ ಮಹಿಮಾ ಪರವಾಗಿ ಶಿವಮೊಗ್ಗ ... ಒಕ್ಕಲಿಗರಲ್ಲದೆ, ಈಡಿಗರು, ಮುಸಲ್ಮಾನರು, ಪರಿಶಿಷ್ಟ ಜಾತಿ ಮತ್ತು ...ವರು ನಿಲ್ಲುವ ಸಾಧ್ಯತೆಗಳೂ ಹೆಚ್ಚಾಗಿವೆ. ಇನ್ನು ಮಹಿಮಾ ತಂದೆ ... ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರಿಗೆ ಉಪಕೃತರಾದವರು ... ಲಿಂಗಾಯತ ಸಮುದಾಯವರೂ ಮಹಿಮಾ ಬೆನ್ನಿಗೆ ನಿಂತರೆ ಅವರಿಗೆ ... ಕಟ್ಟಿಟ್ಟ ಬುತ್ತಿ.

ಬೆಂಗಳೂರು ಗ್ರಾಮಾಂತರ: ಕಾಂಗ್ರೆಸ್ ಮತ್ತು ಜೆಡಿಎಸ್ ನಡುವಿನ ...ು ಹೊರತಾಗಿಯೂ ಈ ಕ್ಷೇತ್ರದಲ್ಲಿ ...ನ ಸ್ಪರ್ಧೆ ಏರ್ಪಟ್ಟಿದೆ. ಇಲ್ಲಿ ಕಾಂಗ್ರೆಸ್‌ನ ...ಕಾರ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ...ರ ಮಾವ ಎಸ್. ರವಿ ಅವರಿಗೆ ಟಿಕೆಟ್ ...ಾಗಿದೆ. ಹಾಗೆಯೇ ಜೆಡಿಎಸ್‌ನಿಂದ ...ಾರು ಮಳೆ' ಚಿತ್ರದ ನಿರ್ಮಾಪಕ ಈ. ... ಸ್ಪರ್ಧಿಸಿದ್ದಾರೆ. ಈ ಗಜಗಳ ನಡುವಿನ ...ುಲ್ಲಿ ಯಾರು ಗೆದ್ದರೂ ಬಿಜೆಪಿಯ ...ಲಿಗೌಡ ಮಾತ್ರ ಸೋಲುವುದು ಗ್ಯಾರಂಟಿ ...ಾಗಿದೆ.



ಈ.ಕೃಷ್ಣಪ್ಪ

ಕೊಡಗು: ಕಾವೇರಿಯ ತವರೂರಾದ ...ಲ್ಲಿ ಬಿಜೆಪಿಯ ಟಿಕೆಟ್ ಎಸ್.ಜಿ. ಮೇದಪ್ಪ ಎಂಬುವವರ ಪಾಲಾಗಿದೆ. ...ದ ಟಿಕೆಟ್ ಆಕಾಂಕ್ಷಿಯಾಗಿದ್ದ ಅಪ್ಪಚ್ಚು ರಂಜನ್ ಅವರ ಸಹೋದರ ...ಕಾಂಕ್ಷೆ ಉದ್ದೀಪ್ತಗೊಂಡು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ... ಕೊಡಗಿನಲ್ಲಿ ಹಿಂದುತ್ವವಾದಿಗಳ ಅಬ್ಬರ ಮತ್ತು ರಂಪಾಟ ಹೆಚ್ಚಾಗಿದ್ದರೂ


ಟಿ.ಜಾ...


ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್‌ನದ್ದೇ ಮೇಲುಗೈ. ಇನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಟಿ. ಜಾನ್ ಸಾಮಾನ್ಯ ಕುಳವೇನಲ್ಲ, ಅಪಾರ ಹಣಬಲವಿರುವ ವ್ಯಕ್ತಿ. ಕಾಂಗ್ರೆಸ್ಸಿನ ಸಂಖ್ಯಾಬಲ ಮತ್ತು ಜಾನ್ ಅವರ ವೈಯಕ್ತಿಕ ಶಕ್ತಿಯಿಂದಾಗಿ ಅವರು ಚೆಡ್ಡಿಗಳನ್ನು ಸೋಲಿಸುವ ಸಾಧ್ಯತೆಗಳು ಹೆಚ್ಚಾಗಿದೆ.

ಧಾರವಾಡ: ಅಖಂಡ ಧಾರವಾಡದಲ್ಲಿ ಎರಡು ಸ್ಥಾನಗಳಿದ್ದು ಅವುಗಳಿಗೆ ಕಾಂಗ್ರೆಸ್‌ನಿಂದ ಶ್ರೀನಿವಾಸ ಮಾನೆ, ಜೆಡಿಎಸ್‌ನಿಂದ ಎಸ್.ಎಂ. ಸಾಲಿ ಮತ್ತು ಬಿಜೆಪಿಯಿಂದ ಶಿವರಾಜ ಸಜ್ಜನ ಹಾಗೂ ಎಂ.ಆರ್. ಪಾಟೀಲ ಸ್ಪರ್ಧಿಸಿದ್ದಾರೆ. ಇಲ್ಲಿ ಮೂರೂ ಪಕ್ಷಗಳ ನಡುವೆ ತೀವ್ರ ಸ್ಪರ್ಧೆ ಇದ್ದು ಯಾರೇ ಗೆದ್ದರೂ ಅದು ಸಣ್ಣ ಅಂತರದಲ್ಲಿ ಇರುತ್ತದೆ ಎಂದಷ್ಟೇ ಹೇಳಬಹುದು. (ಬಾಕ್ಸ್ ನೋಡಿ)


ಸಂದೇ... ನಾಗರಾಜ್

ಮೈಸೂರು: ಈ ಕ್ಷೇತ್ರದಲ್ಲಿರುವ ಎರಡು ಸ್ಥಾನಗಳಿಗೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಈ ಜಿಲ್ಲೆಯಲ್ಲಿ ಬಿಜೆಪಿ ತನ್ನ ಕುತಂತ್ರ ರಾಜಕೀಯದ ಭಾಗವಾಗಿ ಆಪರೇಷನ್ ಕಮಲ ನಡೆಸಲು ಯತ್ನಿಸಿದರೂ ಅಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪ್ರಾಬಲ್ಯ ಹೊಂದಿವೆ. ಈ ಕಾರಣದಿಂದಾಗಿ ಬಿಜೆಪಿಯ ಮಲ್ಲಿಕಾರ್ಜುನಪ್ಪ ಮತ್ತು ಸಿ. ರಮೇಶ್‌ರನ್ನು ಕಾಂಗ್ರೆಸ್‌ನ ಎನ್. ಮಂಜುನಾಥ್ ಮತ್ತು ಜೆಡಿಎಸ್‌ನ ಸಂದೇಶ್ ನಾಗರಾಜ್ ಸೋಲಿಸುವ ಎಲ್ಲ ಸಾಧ್ಯತೆಗಳಿವೆ.

ಹಾಸನ, ತುಮಕೂರು, ಮಂಡ್ಯ : ಈ ಮೂರು ಕ್ಷೇತ್ರಗಳಲ್ಲಿ ಬಿಜೆಪಿ ವಿರುದ್ಧ ಜೆಡಿಎಸ್ ಮಾತ್ರ ಸ್ಪರ್ಧಿಸುತ್ತಿದೆ. ಈ ಮೂರು ಜಿಲ್ಲೆಗಳಲ್ಲಿ ದೇವೇಗೌಡರೇ ಪ್ರಶ್ನಾತೀತ ನಾಯಕ. ಆದ್ದರಿಂದ ಹಾಸನದಲ್ಲಿ ಬಿಜೆಪಿಯ ಎಸ್. ನಾರಾಯಣ ವಿರುದ್ಧ ಜೆಡಿಎಸ್‌ನ ಪಟೇಲ್ ಶಿವರಾಮ್, ತುಮಕೂರಿನಲ್ಲಿ ಬಿಜೆಪಿಯ ಗೋಪಾಲಕೃಷ್ಣ ವಿರುದ್ಧ ಜೆಡಿಎಸ್‌ನ ಡಾ. ಹುಲಿನಾಯ್ಕರ್ ಮತ್ತು ಮಂಡ್ಯದಿಂದ ಬಿಜೆಪಿಯ ಜಿ.ಬಿ. ಶಿವಕುಮಾರ್ ವಿರುದ್ಧ ಜೆಡಿಎಸ್‌ನ ರಾಮಕೃಷ್ಣ ಗೆಲುವು ಸಾಧಿಸುವುದು ಶತಸಿದ್ಧ ಎಂಬಂತಹ ವಾತಾವರಣ ಸೃಷ್ಟಿಯಾಗಿದೆ.


ತಿಪ್ಪಾರೆಡ್ಡಿ

ರಾಯಚೂರು, ಬಳ್ಳಾರಿ, ಚಿತ್ರದುರ್ಗ: ಈ ಮೂರು ಜಿಲ್ಲೆಗಳು ಈಗ ಗಣಿಕಳ್ಳ ರೆಡ್ಡಿ ಗ್ಯಾಂಗಿನ ಪಾಳೆಯಗಳಾಗಿ ಪರಿವರ್ತಿತಗೊಂಡಿದೆ. ಬಳ್ಳಾರಿಯಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕ ಎಂ.ವೈ. ಘೋರ್ಪಡೆ ಅವರ ಸಂಬಂಧಿ ಸಿ.ವಿ. ವೆಂಕಟರಾವ್ ಘೋರ್ಪಡೆ ಕಾಂಗ್ರೆಸ್ ಅಭ್ಯರ್ಥಿ. ಚಿತ್ರದುರ್ಗದಲ್ಲಿ ಮತ್ತೊರ್ವ ಕಾಂಗ್ರೆಸ್ ಧುರೀಣ ಸಿ.ಕೆ. ಜಾಫರ್ ಷರೀಫರ ಸಂಬಂಧಿ ಮೊಹಬೂಬ್ ಪಾಶ ಅವರಿಗೆ ಹಸ್ತ ನೀಡಲಾಗಿದೆ. ಇನ್ನು ರಾಯಚೂರಿನಲ್ಲಿ ಬಸವರಾಜ ಪಾಟೀಲ್ ಇಟಗಿಗೆ ಕಾಂಗ್ರೆಸ್ ಟಿಕೆಟ್ ಲಭಿಸಿದೆ. ಆದರೆ ರೆಡ್ಡಿಗಳು ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಲು ಎಲ್ಲಾ ತರಹದ ತಂತ್ರಗಳನ್ನು ಖಂಡಿತವಾಗಿ ಹೂಡಲಿದ್ದಾರೆ. ಆದ್ದರಿಂದ ಈ ಮೂರು ಕ್ಷೇತ್ರಗಳಿಂದ ಅವರ ಗ್ಯಾಂಗೇ ಗೆಲ್ಲುವ ಸೂಚನೆಗಳಿವೆ. ಈ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿಗಳಾಗಿರುವ ಹಾಲಪ್ಪ ಬಸಪ್ಪ ಆಚಾರ್ (ರಾಯಚೂರು), ಮೃತ್ಯುಂಜಯ ಜಿನಗಾ (ಬಳ್ಳಾರಿ) ಮತ್ತು ಮಾಜಿ ಕಾಂಗ್ರೆಸ್ ಸಚಿವ ಅಶೋಕ್ ರೆಡ್ಡಿಯ ಸಹೋದರ ಜಿ.ಎಚ್. ತಿಪ್ಪಾರೆಡ್ಡಿ (ಚಿತ್ರದುರ್ಗ) ನಾಮಕಾವಸ್ತೆ ಕ್ಯಾಂಡಿಡೇಟುಗಳು. ಯಾಕೆಂದರೆ ಅಲ್ಲಿ ನಿಜವಾಗಲೂ ಬಿಜೆಪಿ ಹೆಸರಲ್ಲಿ ಸ್ಪರ್ಧಿಸುತ್ತಿರುವುದು ರೆಡ್ಡಿಗಳ ಖದೀಮ ಗ್ಯಾಂಗ್.

ಕೋಲಾರ: ಇಲ್ಲಿಂದ ಬಿಜೆಪಿ ಪರವಾಗಿ ಸ್ಪರ್ಧಿಸಲು ಬಿಜೆಪಿಯ ಅಂಗ ಸಂಘಟನೆಯಾದ ಸ್ಲಂ ಮೋರ್ಚಾದ ಅಧ್ಯಕ್ಷ ಸುರೇಂದ್ರ ಹೆಗಡೆ ಕಷ್ಟಪಟ್ಟು ಟಿಕೆಟ್ ಪಡೆದರು. ಆದರೆ ವಾಸ್ತವ ನೆಲೆಯಲ್ಲಿ ಗೌಡರನ್ನು ನೋಡಿದರೆ ಪಾಪ ಅನ್ನಿಸುತ್ತದೆ. ಏಕೆಂದರೆ ಈ ಕ್ಷೇತ್ರದ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಪ್ರಾಬಲ್ಯ ಹೊಂದಿದ್ದು ಅದರ ಅಭ್ಯರ್ಥಿಯಾಗಿರುವ ಮಾಜಿ ಮಂತ್ರಿ ನಜೀರ್ ಅಹಮದ್ ಅವರೇ ಗೆಲ್ಲುವ ಸಾಧ್ಯತೆಗಳಿವೆ.

ಗುಲ್ಬರ್ಗಾ: ಈಗ ಕೇಂದ್ರದಲ್ಲಿ ಸಚಿವರಾಗಿರುವ ಮಲ್ಲಿಕಾರ್ಜುನ ಖರ್ಗೆ ರಾಜ್ಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾಗ ತಮ್ಮ ಜಿಲ್ಲೆ ಗುಲ್ಬರ್ಗಾದ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ಸಿಗೇ ಮೇಲುಗೈ ಸಾಧಿಸುವಂತೆ ನೋಡಿಕೊಂಡಿದ್ದರು. ಅದರ ಲಾಭ ಈಗ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಅಲ್ಲಮಪ್ರಭು ಪಾಟೀಲ್ ಪಡೆಯಲಿದ್ದಾರೆ. ಬಿಜೆಪಿಯ ಅಭ್ಯರ್ಥಿ ಸುಭಾಷ್‌ಚಂದ್ರ ಬಿರಾದಾರ್‌ಗೆ ತನ್ನ ಸೋಲು ಎಷ್ಟು ಅಂತರದಲ್ಲಿ ಸಂಭವಿಸಲಿದೆ ಎಂದು ಲೆಕ್ಕ ಹಾಕುವ ಜರೂರತ್ತು ಈಗ ಎದುರಾಗಿದೆ.

ಬಿಜಾಪುರ: ಈ ಕ್ಷೇತ್ರದಲ್ಲಿ ಎರಡು ಸ್ಥಾನಗಳಿದ್ದು ಕಾಂಗ್ರೆಸ್‌ನ ಎಸ್.ಆರ್. ಪಾಟೀಲ್ ಗೆಲ್ಲುವ ಸಾಧ್ಯತೆಗಳಿವೆ. ಬಿಜೆಪಿ ನ್ಯಾಮಗೌಡ ಮತ್ತು ಚಂದ್ರಶೇಖರ ಕವಟಗಿ ಎಂಬಿಬ್ಬರನ್ನು ಕಣಕ್ಕೆ ಇಳಿಸಿದ್ದರೂ ನ್ಯಾಮಗೌಡ ಗೆಲ್ಲುವ ಸಾಧ್ಯತೆಗಳು ಕಂಡುಬರುತ್ತಿವೆ.

ದಕ್ಷಿಣ ಕನ್ನಡ: ಈ ಕ್ಷೇತ್ರದಲ್ಲಿ ಚೆಡ್ಡಿಗಳ ಕೂಗಾಟ-ರಂಪಾಟ ದಿನನಿತ್ಯ ನಡೆಯುತ್ತಿದ್ದರೂ ಅದೆಲ್ಲ ಈ ಚುನಾವಣೆಯಲ್ಲಿ ಫಲ ನೀಡುವುದಿಲ್ಲ, ಯಾಕೆಂದರೆ ಇಲ್ಲಿ ಬಿಜೆಪಿಯ ಕೋಟಾ ಶ್ರೀನಿವಾಸ ಪೂಜಾರಿ ಎಂಬುವವರ ವಿರುದ್ಧ ಸಭ್ಯ ಸುಸಂಸ್ಕೃತ ಎಂದೇ ಹೆಸರು ಪಡೆದಿರುವ ಕೆ. ಪ್ರತಾಪ ಚಂದ್ರಶೆಟ್ಟಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಲಭ್ಯವಿರುವ ಸೂಚನೆಗಳನ್ನು ಆಧರಿಸಿ ಹೇಳುವುದಾದರೆ ಇಲ್ಲೂ ಕಾಂಗ್ರೆಸ್‌ನ ಶೆಟ್ಟಿ ಗೆಲ್ಲುವವರಾಗಿದ್ದಾರೆ.


ಬೆಳಗಾವಿ: ಈ ಕ್ಷೇತ್ರದಲ್ಲಿ ಎರಡು ಸ್ಥಾನಗಳಿದ್ದು ಕಾಂಗ್ರೆಸ್‌ನ ವೀರಕುಮಾರ್ ಎ. ಪಾಟೀಲ್ ಜೊತೆಗೆ ಬಿಜೆಪಿಯ ಇಬ್ಬರು ಸ್ಪರ್ಧಿಗಳಲ್ಲಿ ಮಹಾಂತೇಶ ಕವಟಗಿಮಠ ಅಥವಾ ವಸಂತ ದಳವಾಯಿ ಒಬ್ಬರು ಗೆಲ್ಲಬಹುದಾಗಿದೆ.

ಇನ್ನು ಚಿಕ್ಕಮಗಳೂರಿನಲ್ಲಿ ಬಿಜೆಪಿಯ ಎಂ.ಎಸ್. ಬೋಜೇಗೌಡರ ವಿರುದ್ಧ ಕಾಂಗ್ರೆಸ್‌ನ ಎ.ವಿ. ಗಾಯತ್ರಿ ಶಾಂತೇಗೌಡ ಗೆಲ್ಲುವ ಸೂಚನೆಗಳಿವೆ. ಹಾಗೆಯೇ ಬೆಂಗಳೂರು ನಗರ ಕ್ಷೇತ್ರದಿಂದ ಕಾಂಗ್ರೆಸ್‌ನ ದಯಾನಂದ ವಿರುದ್ಧ ಬಿಜೆಪಿಯ ಗೋಪಿನಾಥ್ ರೆಡ್ಡಿ ಜಯ ಸಾಧಿಸುವ ನಿರೀಕ್ಷೆ ಇದೆ. ಇನ್ನು ಉತ್ತರ ಕನ್ನಡದಲ್ಲೂ ಬಿಜೆಪಿಯ ವಿನೋದ್ ಪ್ರಭು ವಿರುದ್ಧ ಕಾಂಗ್ರೆಸ್‌ನ ಶ್ರೀಕಾಂತ ಘೋಟ್ನೇಕರ್ ಗೆಲ್ಲುವ ಸಾಧ್ಯತೆಗಳಿವೆ. ●

ಧಾರವಾಡ : ಸಜ್ಜನರ್ ಮನೆಗೆ ಮಾನೆ ಪರಿಷತ್ತಿಗೆ

ಅವಿಭಜಿತ ಧಾರವಾಡ ಜಿಲ್ಲೆ (ಗದಗ, ಹಾವೇರಿ, ಧಾರವಾಡ ಜಿಲ್ಲೆಯ ಎರಡು ಎಂ.ಎಲ್.ಸಿ ಸ್ಥಾನಗಳ ಪೈಕಿ ಒಂದರ ರಿಸಲ್ಟ್ ಬಹುತೇಕ ನಿಕ್ಕಿಯಾದಂತಿದೆ. ಕಳೆದ ಬಾರಿ ಬಿಜೆಪಿಯ ಶಿವರಾಜ ಸಜ್ಜನರ್ ವಿರುದ್ಧ ಕೇವಲ 300 ಮತಗಳಿಂದ ಸೋತಿದ್ದ ಕಾಂಗ್ರೆಸ್ಸಿನ ಶ್ರೀನಿವಾಸ ಮಾನೆ ಪರಿಷತ್ತು ಪ್ರವೇಶಿಸುವ ಹಾದಿಯನ್ನು ಅರ್ಧ ಕ್ರಮಿಸಿಯಾಗಿದೆ. ಇನ್ನೊಂದು ಸ್ಥಾನಕ್ಕಾಗಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಸ್ಪರ್ಧೆಯಿದೆ.

ಕಾಂಗ್ರೆಸ್, ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡು ತಲಾ ಒಂದು ಸ್ಥಾನಕ್ಕಾಗಿ ಸ್ಪರ್ಧಿಸಿದ್ದರೆ ತನ್ನದೇ ಸರ್ಕಾರವಿದೆ ಎಂಬ ದರ್ಪದಲ್ಲಿ ಬಿಜೆಪಿ ಎರಡೂ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಹಾಕಿದ್ದು, ಈಗ ವಿಲಿವಿಲಿ ಒದ್ದಾಡುವ ಹಂತ ತಲುಪಿದೆ...


ಶಿವರಾಜ್ ಸಜ್ಜನರ್

ಕಳೆದ ಬಾರಿ ಕಾಂಗ್ರೆಸ್‌ನಿಂದ ಎ.ಎಂ. ಹಿಂಡಸಗೇರಿ, ಜೆಡಿಯುನಿಂದ ಬಸವರಾಜ ಬೊಮ್ಮಾಯಿ ಆಯ್ಕೆಗೊಂಡಿದ್ದರು. ಬೊಮ್ಮಾಯಿ ತೆರವು ಮಾಡಿದ ಸ್ಥಾನಕ್ಕಾಗಿ ನಡೆದ ಉಪಚುನಾವಣೆಯಲ್ಲಿ ಬೊಮ್ಮಾಯಿ, ಉದಾಸಿಗಳ ನೆರವಿನಿಂದ ಶಿವರಾಜ ಸಜ್ಜನರ್ ಅಲ್ಪ ಅಂತರದಲ್ಲಿ ಆಯ್ಕೆಯಾಗಿದ್ದರು.

ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್, ಜೆಡಿಎಸ್ ಸದಸ್ಯರೇ ಹೆಚ್ಚಿದ್ದರೂ ಉಪಚುನಾವಣೆಯಲ್ಲಿ ಶ್ರೀನಿವಾಸ್ ಮಾನೆ ಸೋಲಲು ಬಿಜೆಪಿ ಸರ್ಕಾರದ ಹಣ ಮತ್ತು ಕಾಂಗ್ರೆಸ್‌ನ ಆಂತರಿಕ ಕಿತ್ತಾಟ ಕಾರಣವಾಗಿತ್ತು. ಈ ಸಲ ಪರಿಸ್ಥಿತಿ ಹಾಗಿಲ್ಲ. ಕಾಂಗ್ರೆಸ್-ಜೆಡಿಎಸ್ ಮಧ್ಯೆ ಹೊಂದಾಣಿಕೆಯಾಗಿದೆ. ಹಿಂಡಸಗೇರಿ ತ್ಯಾಗ ಮಾಡಿ ಯುವಕ ಶ್ರೀನಿವಾಸ ಮಾನೆಗೆ ಬೆಂಬಲಿಸಿದ್ದಾರೆ. ಎಚ್ಕೆ ಪಾಟೀಲ್, ಡಿ.ಆರ್. ಪಾಟೀಲ್, ಅನಿಲಕುಮಾರ್ ಪಾಟೀಲ್ ಮುಂತಾದ ನಾಯಕರೆಲ್ಲ ಭಿನ್ನಾಭಿಪ್ರಾಯ ಮರೆತು ಒಂದಾಗಿರುವುದು ಮಾನೆಯ ಬಲ ಹೆಚ್ಚಿಸಿದೆ.


ಶ್ರೀನಿವಾಸ ಮಾನೆ


ಬಿಜೆಪಿಯ ಶಿವರಾಜ ಸಜ್ಜನರ್ ಈ 14 ತಿಂಗಳುಗಳಲ್ಲಿ ಯಾವ ಕೆಲಸಗಳನ್ನೂ ಮಾಡದೇ ತಿರುಗಾಡಿದ್ದು ಅವರಿಗೆ ಮೈನಸ್ ಪಾಯಿಂಟ್. ಜೊತೆಗೆ ಬಿಜೆಪಿಯಲ್ಲಿನ ಆಂತರಿಕ ಜಗಳಗಳು ಈ ಸಲ ಜಾಸ್ತಿಯಾಗಿವೆ. 'ಆಪರೇಷನ್ ಕಮಲ' ಕೂಡಾ ಇಲ್ಲಿ ವರ್ಕ್‌ಔಟ್ ಆಗುವುದು ಕಷ್ಟಕರವೇ. ಪರಿಸ್ಥಿತಿ ಹೀಗಿರುವಾಗ ಮತ್ತು ಬಿಜೆಪಿಯ ಸ್ಥಳೀಯ ಸಂಸ್ಥೆಗಳ ಸದಸ್ಯರ ಸಂಖ್ಯೆಯೇ ಕಡಿಮೆಯಿರುವಾಗ ಬಿಜೆಪಿ ಎರಡೂ ಸ್ಥಾನಗಳಿಗೆ ಸ್ಪರ್ಧಿಸುವ ಹುಚ್ಚು ಸಾಹಸಕ್ಕೆ ಕೈಹಾಕಿ ಶೂನ್ಯ ಸಂಪಾದನೆ ಮಾಡುವತ್ತ ನಡೆದಿದೆ.

ಇಲ್ಲಿಯ ಬಿಜೆಪಿ ಶಾಸಕರು ಯಡ್ಡಿ ಬಣ, ರೆಡ್ಡಿ-ಶೆಟ್ಟರ್ ಬಣ ಎಂದು ಹಂಚಿಹೋಗಿದ್ದಾರೆ. ಯಡ್ಡಿ ಬೆಂಬಲಿಸುವ ಸಚಿವರಾದ ಉದಾಸಿ, ಬೊಮ್ಮಾಯಿಗಳು ಶಿವರಾಜ್ ಸಜ್ಜನರ್ ಒಬ್ಬನೇ ಅಭ್ಯರ್ಥಿ ಸಾಕು ಎಂದು ಎಷ್ಟು ಹಾರಾಡಿದರೂ ಕೊನೆಗಳಿಗೆಯಲ್ಲಿ ಜಗದೀಶ್ ಶೆಟ್ಟರ್ ಎರಡನೇ ಅಭ್ಯರ್ಥಿಯನ್ನಾಗಿ ಎಂ.ಆರ್.ಪಾಟೀಲರನ್ನು ಕಣಕ್ಕಿಳಿಸಿದ್ದಾರೆ. ಯಡ್ಡಿ ಗುಂಪಿನ ಸಜ್ಜನರ್, ಶೆಟ್ಟರ್ ಗುಂಪಿನ ಎಂ.ಆರ್.ಪಾಟೀಲರ ಒಳಕಿತ್ತಾಟವೇ ಕಾಂಗ್ರೆಸ್, ಜೆಡಿಎಸ್‌ಗೆ ಲಾಭ ತರಬಹುದು. ಇಲ್ಲಿ ಒಂದು ಒಳಒಪ್ಪಂದವೂ ಆಗಿದೆಯಂತೆ. ಬಿಜೆಪಿಯ ಸಜ್ಜನರ್‌ನನ್ನು ಸೋಲಿಸಲು ಶೆಟ್ಟರ್‌ಗೆ ಎಚ್ಕೆ ಸಹಾಯವಂತೆ, ಕಾಂಗ್ರೆಸ್ಸಿನ ಮಾನೆಯನ್ನು ಗೆಲ್ಲಿಸಲು ಎಚ್ಕೆಗೆ ಶೆಟ್ಟರ್ ಸಪೋರ್ಟಂತೆ. ಇದು ನಡೆದರಂತೂ ಮಾನೆ ಗೆಲುವು ಇನ್ನೂ ಸುಲಭ.

ಈ ಹಿಂದೆ ತನಗೆ ಶಿಗ್ಗಾಂವಿ ಎಂಎಲ್‌ಎ ಕ್ಷೇತ್ರವನ್ನು ಬಿಟ್ಟುಕೊಟ್ಟ ಸೋಮಣ್ಣ ಬೇವಿನಮರದನನ್ನು ಎಂಎಲ್‌ಸಿ ಮಾಡಬೇಕಿದ್ದ ಬೊಮ್ಮಾಯಿ ಉಪಚುನಾವಣೆಯಲ್ಲಿ ಕೈಕೊಟ್ಟು ಸಜ್ಜನರನ್ನು ಗೆಲ್ಲಿಸಿದರು. ಈಗ ಶೆಟ್ಟರ್ ಬಣಕ್ಕೆ ಜಿಗಿದಿರುವ ಬೇವಿನಮರದ ಸಜ್ಜನರನ್ನು ಸೋಲಿಸಲು ಸರ್ವಪ್ರಯತ್ನಗಳನ್ನೂ ಮಾಡಲಿದ್ದಾನೆ. ಈ ಎಲ್ಲ ಕಾರಣಗಳಿಂದಾಗಿ ಸದ್ಯಕ್ಕಿಲ್ಲಿ ಕಾಂಗ್ರೆಸ್ಸಿನ ಶ್ರೀನಿವಾಸ ಮಾನೆಯ ಆಯ್ಕೆ ಬಹುತೇಕ ಖಚಿತವಾಗಿದೆ. ಇನ್ನು ಎರಡನೇ ಎಂಎಲ್‌ಸಿ ಹುದ್ದೆಗಾಗಿ ಬಿಜೆಪಿಯ ಎಂ.ಆರ್. ಪಾಟೀಲ್ ಮತ್ತು ಜೆಡಿಎಸ್‌ನ ಮಾಜಿ ಎಂಎಲ್‌ಸಿ ಬಿ.ಎಂ. ಸಾಲಿ ನಡುವೆ ಸ್ಪರ್ಧೆ ನಡೆದಿದೆ.

● ಹುಬ್ಬಳ್ಳಿಯಾಂವ

ಕಟ್ಟಾ ಕುತಂತ್ರಕ್ಕೆ ದಲಿತ ನಾಯಕ ಬಲಿ



ವಾರ್ಡ್ ಮೀಸಲಾತಿಯ ಪಟ್ಟಿ ಹೊರಬಿದ್ದಿದ್ದೇ ತಡ ಹೆಬ್ಬಾಳದ ಮೂಲ ಬಿಜೆಪಿ ಕಾರ್ಯಕರ್ತರೆಲ್ಲ ಮಂತ್ರಿ ಕಟ್ಟಾ ಭೂತ ಸುಟ್ಟು ಧಿಕ್ಕಾರ ಹಾಕಿದ್ದಾರೆ.

ಅದು ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿಗೆ ಎಂಥಾ ಗತಿ ಕಾದಿದೆಯೆಂಬುದರ ಮುನ್ಸೂಚನೆ ಮಾತ್ರವಲ್ಲ, ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ವಿರುದ್ಧ ಆತನ ಸ್ವಕ್ಷೇತ್ರದಲ್ಲೇ ಎಂಥಾ ಅಸಹನೆ ಭುಗಿಲೆದ್ದಿದೆ ಎಂಬುದರ ಸಂಕೇತ ರೂಪ. ಕೇವಲ ಹೆಬ್ಬಾಳ ಮಾತ್ರವಲ್ಲದೇ ಬೆಂಗಳೂರು ನಗರದುದ್ದಕ್ಕೂ ಯಾರೆಲ್ಲ ತನ್ನ ಹಿತಾಸಕ್ತಿಗೆ ವಿರುದ್ಧವಾಗಿದ್ದರೋ, ಗೇಲಿ ಮಾಡಿದ್ದರೋ ಅಥವಾ ಕೇರ್ ಮಾಡುತ್ತಿರಲಿಲ್ಲವೋ ಅಂಥ ಎಲ್ಲರ ಭವಿಷ್ಯವನ್ನೂ ಒಂದೇ ಮೀಸಲಾತಿ ಆದೇಶದ ಮೂಲಕ ಗುಡಿಸಿಹಾಕಿದ್ದಾರೆ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು.

ಸದ್ಯ ಹೆಬ್ಬಾಳದ ಮಟ್ಟಿಗೆ ಕಟ್ಟಾ ಬಲಿಹಾಕಿದ್ದು ಬಿಜೆಪಿಯ ದಲಿತ ನಾಯಕ ಮುನಿಕೃಷ್ಣರನ್ನು. ಕಳೆದ ಬಾರಿ ಹೆಬ್ಬಾಳ ವಾರ್ಡಿನಿಂದ ಒಂಬತ್ತು ಸಾವಿರಕ್ಕೂ ಅಧಿಕ ಮತಗಳಿಂದ ಗೆದ್ದು ಕೌನ್ಸಿಲರ್ ಆಗಿದ್ದ ಮುನಿಕೃಷ್ಣ ಸದ್ಯ ಬಿಜೆಪಿಯ ದಲಿತ ಮೋರ್ಚಾದ ರಾಜ್ಯಾಧ್ಯಕ್ಷ. 2004ರ ವಿಧಾನಸಭಾ ಚುನಾವಣೆಯಲ್ಲಿ ಯಲಹಂಕಕ್ಕೆ ಬಿಜೆಪಿ ಅಭ್ಯರ್ಥಿಯಾಗಿದ್ದು ಸರಿಸುಮಾರು ಒಂದು ಲಕ್ಷದ ಮೂವತ್ತೈದು ಸಾವಿರದಷ್ಟು ಮತ ಪಡೆದವರು ಮುನಿಕೃಷ್ಣ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಟ್ಟಾ ಹೆಬ್ಬಾಳಕ್ಕೆ ವಲಸೆ ಬರದೇಹೋಗಿದ್ದರೆ ಮುನಿಕೃಷ್ಣ ಈ ಹೊತ್ತಿಗೆ ಎಮ್ಮೆಲ್ಲೆಯಾಗಿ ಮಂತ್ರಿಯಾಗಿರುತ್ತಿದ್ದರು.

ಆ ಕಾಲದಿಂದಲೂ ಹೆಬ್ಬಾಳ ಮತ್ತು ಯಲಹಂಕ ಭಾಗದಲ್ಲಿ ಪಕ್ಷ ಕಟ್ಟಿದ ತನ್ನನ್ನು ವಂಚಿಸಿ ಕಟ್ಟಾ ಬಿಜೆಪಿ ಟಿಕೆಟ್ ಗಿಟ್ಟಿಸಿದ್ದರ ವಿರುದ್ಧ ಮುನಿಕೃಷ್ಣ ರೊಚ್ಚಿಗೆದ್ದರು. ಅವರ ಬೆಂಬಲಿಗರು ಕಟ್ಟಾ ವಿರುದ್ಧ ಎಂಥಾ ಪ್ರತಿಭಟನೆಗಿಳಿದರೆಂದರೆ ಮಲ್ಲೇಶ್ವರದ ಬಿಜೆಪಿ ಕಚೇರಿಯನ್ನೇ ಚಿಂದಿಯೆಬ್ಬಿಸಿದ್ದರು. ಇಷ್ಟಾಗ್ಯೂ ಪಕ್ಷಕ್ಕೆ ದ್ರೋಹ ಬಗೆಯದೇ ಕಟ್ಟಾರನ್ನು ಗೆಲ್ಲಿಸಿ ತಂದದ್ದು ಮುನಿಕೃಷ್ಣರ ಪಕ್ಷ ನಿಷ್ಠೆಗೆ ಸಾಕ್ಷಿಯಾಗಿತ್ತು.

ಹಾಗಂತ ಕಟ್ಟಾ ಬಿಡಬೇಕಲ್ಲ, ಇವತ್ತಲ್ಲ ನಾಳೆ ಹೆಬ್ಬಾಳದಲ್ಲಿ ತನಗೆ ಮುನಿಕೃಷ್ಣರೇ ಸಮರ್ಥ ಎದುರಾಳಿಯೆಂದೂ, ಹಾಗೇ ಬೆಳೆಯಲು ಬಿಟ್ಟರೆ ಮುಂದೊಮ್ಮೆ ತನಗೇ ಮುಳುವಾಗುತ್ತಾರೆಂದೂ ಒಳಗೊಳಗೇ ಕತ್ತಿ ಮಸೆಯುತ್ತಲೇ ಬಂದರು. ಬಿಜೆಪಿಯ ಯುವ ಮೋರ್ಚಾ, ಮಹಿಳಾ ಮೋರ್ಚಾ, ರೈತ ಮೋರ್ಚಾ ಇತ್ಯಾದಿ ಅಂಗ ಸಂಸ್ಥೆಗಳ ರಾಜ್ಯಾಧ್ಯಕ್ಷರೆಲ್ಲ ಒಂದಲ್ಲ ಒಂದು ನಿಗಮಕ್ಕೊ ಮಂಡಳಿಗೋ ಅಧ್ಯಕ್ಷರಾದರೆ ದಲಿತ ಮೋರ್ಚಾದ ಅಧ್ಯಕ್ಷ ಮುನಿಕೃಷ್ಣ ಮಾತ್ರ ಯಾವ ಪ್ರಭಾವಿ ಹುದ್ದೆಗೂ ನೇಮಕಗೊಳ್ಳದ ಹಾಗೇ ಕಟ್ಟಾ ನೋಡಿಕೊಂಡರು.

ಹೀಗೆ ಹೆಬ್ಬಾಳದ ಬಿಜೆಪಿ ನಾಯಕ ಮುನಿಕೃಷ್ಣನನ್ನು ತುಳಿಯುತ್ತಾ ಬಂದ ಕಟ್ಟಾ ಮಾಡಿದ ಮತ್ತೊಂದು ಷಡ್ಯಂತ್ರವೆಂದರೆ ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಮುನಿಕೃಷ್ಣರಾಗಲಿ, ಅವರ ಅನುಯಾಯಿಗಳಾಗಲಿ ಚುನಾವಣೆಗೆ ನಿಲ್ಲದಂತೆ ವಾರ್ಡುಗಳನ್ನು ಬದಲಾಯಿಸಿದ್ದು ಮತ್ತು ತನ್ನ ಆನು ಕೂಲಕ್ಕೆ ತಕ್ಕಂತೆ ಮೀಸಲಾತಿ ರೂಪಿಸಿದ್ದು.

ಹಿಂದಾದರೆ 92 ಸಾವಿರದಷ್ಟು ಮತಗಳಿದ್ದ ಹೆಬ್ಬಾಳ ಮೀಸಲು ವಾರ್ಡನ್ನು ಕಟ್ಟಾ ವಿಶ್ವನಾಥ ನಾಗೇನಹಳ್ಳಿ, ಹೆಬ್ಬಾಳ ಮತ್ತು ಮನೋರಾಯನ ಪಾಳ್ಯ ಎಂಬ ಮೂರು ವಾರ್ಡುಗಳನ್ನಾಗಿ ಒಡೆದರು. ಹೆಬ್ಬಾಳಕ್ಕಿದ್ದ ಮೀಸಲಾತಿಯನ್ನೇ ರದ್ದು ಮಾಡಿ ಅದನ್ನು ಸಾಮಾನ್ಯ ವಾರ್ಡನ್ನಾಗಿ ಬದಲಿಸಿದರು. ವಿಶ್ವನಾಥ ನಾಗೇನಹಳ್ಳಿಯನ್ನು ಬಿಸಿಎಂ ಮಹಿಳೆ ಮಾಡಿ, ಸಂಜಯ್ ನಗರವನ್ನು ಬಿಸಿಎಂಬಿ ಮಾಡಿ, ಜೆಸಿನಗರ, ಗಂಗೇನಹಳ್ಳಿ ಮತ್ತು ಗಂಗಾನಗರಗಳನ್ನು


ವಾರ್ಡ್ ವಾರ್ 2 BBMP

ಜನರಲ್ ವಾರ್ಡುಗಳನ್ನಾಗಿ ಎಲ್ಲೂ ಮುನಿಕೃಷ್ಣರಿಗೆ ಅವಕಾಶವಾಗದಂತೆ ನೋಡಿಕೊಂಡರು.


ಇಡೀ ಹೆಬ್ಬಾಳದ ಎಂಟು ವಾರ್ಡುಗಳ ಪೈಕಿ ರಾಧಾಕೃಷ್ಣ ವಾರ್ಡೊಂದೇ ಪರಿಶಿಷ್ಟ ಮೀಸಲಾದರೂ ಅಲ್ಲಿಗೆ ಯಾವೊಬ್ಬ ಪುರುಷರೂ ನಿಲ್ಲುವಂತಿಲ್ಲ. ಅದರರ್ಥ ಪರಿಶಿಷ್ಟ ಮಹಿಳೆಯರಷ್ಟೇ ನಿಲ್ಲಬೇಕು. ಹೀಗೆ ಮುನಿಕೃಷ್ಣರ ಹೆಬ್ಬಾಳ ವಾರ್ಡನ್ನು ಪರಿಶಿಷ್ಟ ಮೀಸಲಿನಿಂದ ರದ್ದುಪಡಿಸಿ ಜನರಲ್ ವಾರ್ಡನ್ನಾಗಿ ಬದಲಾಯಿಸಿದ ಕಟ್ಟಾ ಹುನ್ನಾರದ



ಜಯಪ್ಪರೆಡ್ಡಿ



ಮುನಿಕೃಷ್ಣ



ಶಿವಕುಮಾರ್

ಹಿಂದಿರುವವನು ಈ ಭಾಗದ ನಟೋರಿಯಸ್ ಪಾತಕಿ ಜಯಪ್ಪ ರೆಡ್ಡಿ. ಒಂದಾನೊಂದು ಕಾಲಕ್ಕೆ ಒಂದಲ್ಲ ಎರಡು ಮರ್ಡರ್ ಕೇಸಿಗೆ ಒಟ್ಟಾಗಿ ಜೈಲು ಕಂಡು ಬಂದ ಜಯಪ್ಪ ರೆಡ್ಡಿ ಈ ಭಾಗದ ಖತರ್‌ನಾಕ್ ಲ್ಯಾಂಡ್ ಗ್ರಾಬರ್. ಕಟ್ಟಾ ಹೆಬ್ಬಾಳದಿಂದ ಗೆದ್ದು ಮಂತ್ರಿಯಾಗಿದ್ದೇ ಅವರ ಬಲಗೈ ಬಂಟನಾಗಿ ವಕ್ಕರಿಸಿದ ಜಯಪ್ಪ ರೆಡ್ಡಿ, ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದಲ್ಲಿ ಕಟ್ಟಾ ಕಬಳಿಕೆಗಿಳಿದಿದ್ದ ದಲಿತರ ಭೂಮಿಗೆ ಗಂಟುಬಿದ್ದ. ದಲಿತರ ವಿರುದ್ಧದ ಗೂಂಡಾಗಿರಿಯನ್ನೇ ನಿತ್ಯ ಕಾಯಕವಾಗಿಸಿಕೊಂಡ.

ಇಂಥ ಜಯಪ್ಪ ರೆಡ್ಡಿಗೆ ಬಿಜೆಪಿ ಟಿಕೆಟ್ ಕೊಡಿಸಿ ಹೆಬ್ಬಾಳದಿಂದ ಗೆಲ್ಲಿಸುವುದು ಕಟ್ಟಾ ಹುನ್ನಾರ. ಆದರೆ ಕಟ್ಟಾ ಕುಮ್ಮಕ್ಕಿನ ಹೊರತಾಗಿ ಜಯಪ್ಪ ರೆಡ್ಡಿ ಬೆನ್ನಿಗೆ ಹೆಬ್ಬಾಳದ ನರಪಿಳ್ಳೆ ಕೂಡ ಇಲ್ಲ. ಈ ಭಾಗದ ಬಿಜೆಪಿ ನಾಯಕರ ಪೈಕಿ ಅಷ್ಟಿಷ್ಟು ಜನಪ್ರಿಯತೆ ಇರುವುದು ಸ್ಥಳೀಯ ಬಿಜೆಪಿ ಕಾರ್ಯಕರ್ತ ಶಿವಕುಮಾರ್‌ಗೆ. ಈತ ಮುನಿಕೃಷ್ಣರ ಅನುಯಾಯಿ. ಲ್ಯಾಂಡ್ ಡೀಲುಗಳಲ್ಲೂ ಎತ್ತಿದ ಕೈ.

ಹಾಗೇನಾದರೂ ಜಯಪ್ಪರೆಡ್ಡಿಗೇ ಬಿಜೆಪಿ ಟಿಕೆಟ್ ಸಿಕ್ಕಿತೆಂದರೆ ಕಾಂಗ್ರೆಸ್ಸಿನಿಂದ ನಿಲ್ಲಲು ಘಟಾನುಘಟಿಗಳ ಹಿಂಡೇ ಇದೆ. ಈ ಪೈಕಿ ಮಾಜಿ ಕಾರ್ಪೊರೇಟರ್ ರಾಜಣ್ಣ ಅಥವಾ ಹೆಬ್ಬಾಳದ ಮಾಜಿ ಛೇರ್ಮನ್ ನಾಗರಾಜ್ ನೆಚ್ಚಿನ ಅಭ್ಯರ್ಥಿಗಳು. ಜೊತೆಗೆ ಹೆಬ್ಬಾಳ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ರುದ್ರಪ್ಪ ಯುವ ಕಾಂಗ್ರೆಸ್ ಮುಖಂಡ ಆನಂದ್ ಯಾರಾದರೂ ಜಯಪ್ಪ ರೆಡ್ಡಿಗೆ ನೀರು ಕುಡಿಸಬಹುದು. ಲೋಕಲ್ ಲೀಡರ್ ಕೃಷ್ಣಪ್ಪ ಕೂಡ ಕಾಂಗ್ರೆಸ್ ಟಿಕೆಟ್ಟಿಗೇ ಹೆಣಗಾಡುತ್ತಿದ್ದಾರಾದ್ದರಿಂದ ಕಟ್ಟಾ ಬಂಟ ಜಯಪ್ಪ ರೆಡ್ಡಿ ಇಲ್ಲಿ ಏನೇ ಲಗಾಟ ಹೊಡೆದರೂ ಮುನಿಕೃಷ್ಣರ ಬೆಂಬಲವಿಲ್ಲದೇ ಗೆಲ್ಲಲಾರ.

ಅತ್ತ ನಿಗಮ ಮಂಡಳಿಗೂ ನೇಮಿಸದೇ ಇತ್ತ ಪಾಲಿಕೆ ಚುನಾವಣೆಗೂ ನಿಲ್ಲದಂತೆ ಮುನಿಕೃಷ್ಣರನ್ನು ಹಣಿಯಲು ಹೊರಟ ಕಟ್ಟಾ ಕುತಂತ್ರದ ವಿರುದ್ಧ ಹೆಬ್ಬಾಳದ ಬಹುತೇಕ ಬಿಜೆಪಿ ಕಾರ್ಯಕರ್ತರು ರೊಚ್ಚಿಗೆದ್ದಿದ್ದಾರೆ. ಹೆಬ್ಬಾಳದ ಮಂಡಲ ಬಿಜೆಪಿ ಅಧ್ಯಕ್ಷ ರಾಮಣ್ಣ ಹಿರಿಯ ಬಿಜೆಪಿ ನಾಯಕ ಗೋಪಾಲ ರೆಡ್ಡಿ, ಮತ್ತೊಬ್ಬ ಬಿಜೆಪಿ ನಾಯಕ ನಾಗೇಶ್ ರಾವ್, ಯುವ ಮೋರ್ಚಾ ನಾಯಕ ಮಹೇಶ್, ಸಂಜಯ್‌ನಗರದ ನಾಗರಾಜ್ ಮುಂತಾದ ಮೂಲ ಬಿಜೆಪಿ ಕಾರ್ಯಕರ್ತರೆಲ್ಲ ಇತ್ತೀಚಿಗೆ ಪಕ್ಷ ಬಿಟ್ಟಿದ್ದು ಕಟ್ಟಾ ಅಟ್ಟಹಾಸದ ವಿರುದ್ಧವೆ.

ಜನಸಂಘದ ಕಾಲದಿಂದಲೂ ಸಕ್ರಿಯವಾಗಿದ್ದ ಮಾಜಿ ಚೇರ್ಮನ್ ನಾಗರಾಜ್, ಬಿ. ಕೃಷ್ಣಪ್ಪ, ರಂಗಸ್ವಾಮಿ, ಶೈಲಜ, ರಾಜಶೇಖರ ರೆಡ್ಡಿ ಮುಂತಾದವರೆಲ್ಲ ಈಗಾಗಲೇ ಪಕ್ಷ ಬಿಡಲು ನಿರ್ಧರಿಸಿದ್ದು ಇವರ ಜೊತೆ ವಕೀಲರಾದ ಚಂದ್ರಶೇಖರ ರೆಡ್ಡಿ, ವಸಂತ್ ಮತ್ತು ಹೆಬ್ಬಾಳ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಗೌಡ ಕೂಡ ಕಟ್ಟಾ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ.

ಕೇವಲ ಮುನಿಕೃಷ್ಣರ ಮೇಲೆ ಜಿದ್ದಿಗೆ ಬಿದ್ದು ಯಾರೆಲ್ಲ ಅವರಿಗೆ ಆಪ್ತರಾಗಿದ್ದರೋ ಅವರೆಲ್ಲರನ್ನೂ ತುಳಿಯಲು ಹೊರಟ ಕಟ್ಟಾ ದುರ್ಬುದ್ಧಿಯಿಂದಾಗಿ ಈ ಬಾರಿಯ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೇ ಲಾಭ ಹೆಚ್ಚು. ಸಂಜಯ್‌ನಗರದ ವಾರ್ಡಿನಲ್ಲಿ ಕಟ್ಟಾ ಅಟ್ಟಹಾಸಕ್ಕೆ ಬೇಸತ್ತೇ ಬಿಜೆಪಿ ತೊರೆದ ನಾಗರಾಜ್ ಕಾಂಗ್ರೆಸ್ ಅಭ್ಯರ್ಥಿಯಾಗುವ ಲಕ್ಷಣಗಳಿವೆ. ಗಂಗಾನಗರ ವಾರ್ಡಿಗೆ ಆ ಕಾಲದಿಂದಲೂ ಬಿಜೆಪಿಗಾಗಿ ದುಡಿದ ಶ್ರೀನಿವಾಸ್‌ರನ್ನು ವಂಚಿಸಿ ಮೊನ್ನೆಯಷ್ಟೇ ಕಾಂಗ್ರೆಸ್ಸಿನಿಂದ ಬಂದ ಆನಂದ್‌ಗೆ ಟಿಕೆಟ್ ಕೊಡುವುದು ಕಟ್ಟಾ ಹುನ್ನಾರ. ಹೀಗಾದರೆ ಮೂಲ ಬಿಜೆಪಿಗಳೇ ಉಲ್ಟಾ ಹೊಡೆಯುತ್ತಾರೆ.

ಇನ್ನು ಜೇಸಿನಗರಕ್ಕೆ ಬಂದರೆ ಕಳೆದ ಬಾರಿ ನೂರು ಮತಗಳಿಂದ ಸೋತ ಆರೆಸ್ಸೆಸ್ ಪಟು ಗಣೇಶ್ ರಾವ್ ಮಾನೆಗೇ ಕಟ್ಟಾ ಟಿಕೆಟ್ ಕೊಡಿಸಬಹುದು. ಆದರೆ ಕಾಂಗ್ರೆಸ್ಸಿನ ಪಟೇಲ್ ಸೀನಪ್ಪನ ಬೆನ್ನಿಗೆ ಕಟ್ಟಾ ವಿರೋಧಿ ಬಿಜೆಪಿ ಕಾರ್ಯಕರ್ತರೇ ನಿಲ್ಲುವ ಸೂಚನೆಗಳಿವೆ. ಗಂಗೇನಹಳ್ಳಿಯಲ್ಲಿ ಮಾಜಿ ಬಿಜೆಪಿ ಕೌನ್ಸಿಲರ್ ನಾಗರಾಜ್‌ಗೇನಾದರೂ ಕಟ್ಟಾ ಟಿಕೆಟ್ ತಪ್ಪಿಸಿದರೆಂದರೆ ಅದರ ಲಾಭ ಪಡೆಯಲು ಕಾಂಗ್ರೆಸ್ಸಿನ ಮುನಿರಾಜು ಮತ್ತು ವಿಜಯ್‌ಕುಮಾರ್ ಕಾದು ಕೂತಿದ್ದಾರೆ. ವಿಶ್ವನಾಥ ನಾಗೇನಹಳ್ಳಿಗೆ ಮಮತಾ ರವಿ ಎಂಬ ತನ್ನ ಚೇಲಾನ ಮಗಳಿಗೆ ಬಿಜೆಪಿ ಟಿಕೆಟ್ ಕೊಡಿಸುವುದು ಕಟ್ಟಾ ಉದ್ದೇಶವಂತೆ. ಇಲ್ಲಿ ಲೋಕಲ್ ಕಾಂಗ್ರೆಸ್ ಕುಳಗಳಾದ ಬಾರ್ ನಾಗರಾಜ್ ಅಥವಾ ವೆಂಕಟಸ್ವಾಮಿ ಪೈಕಿ ಯಾರೊಬ್ಬರ ಪತ್ನಿ ಕಣಕ್ಕಿಳಿದರೂ ಸ್ಥಳೀಯರಿಗೆ ಪರಿಚಯವೇ ಇಲ್ಲದ ಮಮತಾ ರವಿ ಮಣ್ಣು ಮುಕ್ಕಲೇಬೇಕು.

ಸಂಜಯ್ ನಗರ ವಾರ್ಡಿಗೆ ಮಾಜಿ ಕೌನ್ಸಿಲರ್ ವೆಂಕಟೇಶ್ ಏನಾದರೂ ಜೆಡಿಎಸ್ ಅಭ್ಯರ್ಥಿಯಾದರೆಂದರೆ ಬಿಜೆಪಿಗಿಲ್ಲಿ ಬೋಣಿಯಾಗುವುದು ಕಷ್ಟ. ಇಂಥಾ ಹೀನಾಯ ಸ್ಥಿತಿಯಲ್ಲಿ ಮುನಿಕೃಷ್ಣರಂಥ ದಲಿತ ನಾಯಕನನ್ನು ತುಳಿಯಲು ಹೊರಟ ಕಟ್ಟಾ ದುರ್ಬುದ್ಧಿ ಬಿಜೆಪಿ ಪಾಲಿಗೆ ಕೆಡುಕಾದರೂ ಬೆಂಗಳೂರಿನ ಮಟ್ಟಿಗಂತೂ ಹಿತಕಾರಿ ತಾನೆ?

• ರಾ. ಸೋಮನಾಥ್

ಅಶೋಕ್ ತಮ್ಮನಿಗೇ ಬಗುಣಿಗೂಟ

ಬೆಂಗಳೂರಿನ 198 ವಾರ್ಡುಗಳ ಪೈಕಿ ತಲಾ ತೊಂಬತ್ತೊಂಭತ್ತು ವಾರ್ಡುಗಳಂತೆ ಹಂಚಿಕೊಂಡು ತಂತಮ್ಮ ಅನುಕೂಲಕ್ಕೆ ತಕ್ಕಂತೆ ಮೀಸಲಾತಿಗೊಳಪಡಿಸುವ ಉಸಾಬರಿ ಹೊತ್ತಿದ್ದು ಮಂತ್ರಿಗಳಾದ ಕಟ್ಟಾ ಮತ್ತು ಅಶೋಕ್. ಒಬ್ಬರ ವಿಷಯಕ್ಕೊಬ್ಬರು ತಲೆ ಹಾಕಕೂಡದೆಂಬ ಷರತ್ತಿಗೆ ಬದ್ಧರಾಗೇ ವಾರ್ಡ್ ಮೀಸಲಾತಿಗಿಳಿದಿದ್ದಾರೆ. ಬಿಬಿಎಂಪಿಗೆ ಭಾವಿ ಕೌನ್ಸಿಲರ್ ಆಗುವ ಕನಸು ಕಂಡವರ ಪೈಕಿ ಆರ್. ಅಶೋಕ್ ತಮ್ಮ ರವಿಗೆ ಬ್ಯಾಟರಾಯನಪುರ ಅಥವಾ ಕೊಡಿಗೇಹಳ್ಳಿಗೆ ಬಿಜೆಪಿ ಅಭ್ಯರ್ಥಿಯಾಗುವ ಆಸೆಯಿತ್ತು. ತನ್ನ ಅನುಕೂಲಕ್ಕೆ ತಕ್ಕಂತೆ ಈ ಎರಡರಲ್ಲಿ ಯಾವುದನ್ನಾದರೂ ಜನರಲ್ ವಾರ್ಡನ್ನಾಗಿ ಮಾಡಿಕೊಡುವಂತೆ ಕಟ್ಟಾಗೆ ರವಿ ದುಂಬಾಲು ಬಿದ್ದಿದ್ದ. ಎಷ್ಟೆಂದರೂ ಅಶೋಕ್ ತಮ್ಮನಲ್ಲವೆ? ಕಟ್ಟಾ ಕೆಲಸ ಮಾಡಿಕೊಡುತ್ತಾನೆಂದೇ ರವಿ ಲೆಕ್ಕ ಹಾಕಿದ್ದ. ಆದರೆ ಒಳಗೊಳಗೇ ಅಶೋಕ್ ವಿರುದ್ಧ ಹಗೆಯಿತ್ತಲ್ಲ, ತಮ್ಮ ರವಿಗೆ ಎಲ್ಲೂ ಅವಕಾಶವೇ ಸಿಗದ ಹಾಗೆ ಬ್ಯಾಟರಾಯನಪುರವನ್ನು ಹಿಂದುಳಿದ ಮಹಿಳಾ ವಾರ್ಡನ್ನಾಗಿಸಿದ್ದು ಅಲ್ಲದೇ ಪಕ್ಕದ ಕೊಡಿಗೇಹಳ್ಳಿಯನ್ನು ಹಿಂದುಳಿದ ವರ್ಗದ ವಾರ್ಡ್‌ನ್ನಾಗಿಸಿಬಿಟ್ಟ ಕಟ್ಟಾ. ಅಶೋಕ್ ತಮ್ಮ ರವಿಗೆ ಎಂಥಾ ಆಘಾತವಾಗಿತ್ತೆಂದರೆ ಮೀಸಲಾತಿ ಪ್ರಕಟಗೊಂಡಿದ್ದೇ ತಡ "ಏನ್ಸಾರ್... ಚಿತ್ತೂರಿಂದ ಬಂದ ನೀನು ನನ್ನತ್ರ ಆಟ ಆಡ್ತೀಯೇನೋ" ಎಂದು ಝಾಡಿಸಿಬಿಟ್ಟ. ಅಶೋಕ್ ತಮ್ಮನಿಂದ ಅಮ್ಮಾ, ಅಕ್ಕಾ ಮಂತ್ರ ಕೇಳಿದ ಕಟ್ಟಾಗೆ ನಾಚಿಗೆ ಮಾನ ಯಾವ ಲೆಕ್ಕ?


ಕಟ್ಟಾ ಮಗ ಜಗ್ಗನೇ ಇಂತಿಂಥಾ ವಾರ್ಡಿಗೆ ಮೀಸಲಾತಿ ಮಾಡಿಕೊಡಲು ಇಷ್ಟಿಷ್ಟೇ ಕಾಸು ಬಿಚ್ಚುವಂತೆ ಫಲಾನುಭವಿಗಳನ್ನು ಪೀಡಿಸುತ್ತಿದ್ದ. ಹೀಗೆ ಕಟ್ಟಾ ಮಗನಿಗೆ ಕಾಸು ಕೊಟ್ಟು ಜನರಲ್ ವಾರ್ಡ್ ಆಗಬೇಕಿದ್ದ ನಾಗಪುರವನ್ನು ಹಿಂದುಳಿದ ಎ ವಾರ್ಡನ್ನಾಗಿಸಿಕೊಂಡವನು ರಾಜಾಜಿನಗರದ ಕ್ರಿಮಿನಲ್ ನಾಯಿ ಹರೀಶ. ಈತನ ಪಟಾಲಮ್ಮಿನ ಕಾಟ ಹೇಗಿದೆಯೆಂದರೆ ನಾಗಪುರ, ಮೋದಿ ಆಸ್ಪತ್ರೆ, ರಾಜಾಜಿನಗರ ಏರಿಯಾಗಳಲ್ಲಿ ಹೆಣ್ಣು ಮಕ್ಕಳ್ಯಾರೂ ತಲೆ ಎತ್ತಿ ಓಡಾಡುವಂತಿಲ್ಲ. ಇಂಥ ಕ್ರಿಮಿನಲ್‌ಗಳ ಅನುಕೂಲಕ್ಕೆ ತಕ್ಕಂತೆ ವಾರ್ಡ್ ಮೀಸಲಾತಿ ಮಾಡಿಕೊಟ್ಟ ಕಟ್ಟಾ ಕೇಡಿ ಬುದ್ಧಿಗೆ ಏನೆನ್ನಬೇಕು?

ಹಿಂಗಂತಲ್ಬ್ರೇ, ಖರೆಯನು?

ಗಿಲೆಟ್ ಕಂಪನಿ 30 ಬಾರಿ ಶೇವ್ ಮಾಡಬಹುದಾದ 125 ರೂಪಾಯಿಯ ಬ್ಲೇಡ್ ಬಿಡುಗಡೆ ಮಾಡಿದೆ. ಬಿಡುಗಡೆಗೆ ಮೊದಲು ಪತ್ರಿಕೆಯೊಂದರಲ್ಲಿ "ಕ್ಲೀನ್ ಶೇವ್ಡ್ ಯುವಕರತ್ತ ಮಹಿಳೆಯರು ಆಕರ್ಷಿತರಾಗುತ್ತಿದ್ದಾರೆ" ಎಂಬ ಸಮೀಕ್ಷಾ ವರದಿ ಬರೆಸಿತಂತೆ. `Shave India' ಚಳವಳಿಯನ್ನು ಶುರು ಮಾಡಲು ಹಣ ನೀಡಿ ಪ್ರಚಾರ ಪಡೆಯಿತಂತೆ! ಅಂತೂ ಬ್ಲೇಡ್ ಮಾರಲು ಹೊಸ ಬ್ಲೇಡ್ ಟೆಕ್ನಿಕ್!

ಅದಿರ್ಲಿ ಬಿಡ್ಬೇ, ಈ ಐಡಿಯಾ ಏನರ ನಿರೋಧ್ ಕಂಪ್ನಿಯೋರ್ಗೆ ಹೊಳೆದ್ರ ಹ್ಯಂಗಬೆ.... ಯವ್ವಾ ಯವ್ವಾ ನಾ ಒಲ್ಲೆಪಾ ಯವ್ವಾ.....

* * * * * * *



ಮುತಾಲಿಕ್, ಪ್ರಮೀಳಾ ನೇಸರ್ಗಿ ಎಂಬ ಬಾಯ್ಬಡುಕರು ಪತ್ತೇದಾರಿ ಕೆಲಸ ಆರಂಭಿಸಿದ್ದಾರಂತೆ. ಅವರ ಪ್ರಕಾರ ಕರ್ನಾಟಕದ 500ಕ್ಕೂ ಹೆಚ್ಚು ಹಿಂದೂ ಹುಡುಗಿಯರನ್ನು ಹೊತ್ತು ತಂದ ಸಾಬರು ಬೆಂಗಳೂರಿನ ಬಿಲ್ಡಿಂಗ್ ಒಂದರಲ್ಲಿ ಗೃಹಬಂಧನದಲ್ಲಿಟ್ಟಿದ್ದಾರಂತೆ.

"ಇರ್ಲಿ ಪ್ರೇಮವ್ವ ಚಿಗವ್ವ, ನೀ ಯಾಕS ಆ ಹೆಣ್ಮಕ್ಕಳನ್ನು ಬಿಡಿಸಿಗೊಂಡು ಬರಬಾರ್ದುಬೇ" ಅಂತಾ ಕೇಳಿದ್ರ, "ಅಯ್ಯ ಯವ್ವಾ, ಅಲ್ಲಿ ಭಾರೀ ಗೂಂಡಾಪಡೆ ಐತಿ" ಅಂದ್ಲಂತೆ ಪ್ರೇಮವ್ವ. "ಇಲ್ಲೇ ನಿಂತಾನಲ್ಲ ಇವ ಮುತಾಲಿಕ... ಇವ ಮತ್ ಇವ್ನ ಮಂಗ್ಯಾಗೋಳು ಅದ್ಯಾವ್ ಗೂಂಡಾಗಳಿಗೆ ಕಡಿಮಿಬೇ" ಎಂದು ಕೇಳಿದರೆ ಪೇಮವ್ವ "ಇಲ್ಲಿಲ್ಲ... ನಾವ್ ಪೊಲೀಸ್ ಕಮಿಷನರ್ಗ ಕಂಪ್ಲೇಂಟು ಕೊಡ್ತಿವಿ" ಅಂದ್ಲಂತ...

ಹಿಂಗ ಹೇಳಿ ಆಗಾಲೇ 30 ದಿನಾ ಆಯ್ತು.... ಪಾಪ, ಆ ಹಿಂದೂ ಹುಡುಗಿಯರ್ನ ಕಾಪಾಡೋಕೆ ಶೋಭಕ್ಕನಾದ್ರೂ ಹೆಲಿಕಾಪ್ಟರ್ ತಗೊಂಡು ಹೋಗ್‌ಬಾರ್ದಿತ್ತಾ?

ವಾಯ್-ಕುಗಳು

ನೆರೆ ಬಂದೂರಿಗೆ ಮನೆ
ಕಟ್ಟಲು ಹೋದ ಸಿಸ್ಕೋ
ಕಟ್ಟಿತು ಫಾರಿನ್ ಪಾಯಿಖಾನೆ
ಮಂಡಿ ಮಡಚದೇ ಕೆಲಸವೇ
ಇಲ್ಲ ಎನ್ನುವ ನಮ್ಮ ಮುತ್ತ್ಯಾ
ಮತ್ತೆ ಬಯಲಿಗೆ.....

* * * *

ಪುರುಷ ಸರ್ಕಾರದ ಪರಿಹಾರ
ಮುಟ್ಟಲ್ಲ ನಮ್ಮೂರಿಗೆ
ಮುಟ್ಟು ಬರದಿರಲೆಂಬ
ಪ್ರಾರ್ಥನೆಯೇ ಗತಿ ನೀರೆಯರಿಗೆ

* * * *

ಸರ್ಕಾರಿ ದುಡ್ಡಲಿ
ನೆರೆಪರಿಹಾರಕ್ಕಿಳಿದ ಸೇವಾ ಭಾರತಿ
ನೀಡಿದೂಟದಲಿಲ್ಲ ಈರುಳ್ಳಿ, ಬೆಳ್ಳುಳ್ಳಿ

* * * *

ಹಳ್ಳಿಗಳೂ ನಗರಗಳಂತೆ
ಫಾಸ್ಟ್ ಆಗಿವೆ ಎಂದು
ಭ್ರಮಿಸಿರುವ ಸಾಫ್ಟ್‌ವೇರ್ ಹುಡುಗಿ
ಕಳಿಸಿದ ಪರಿಹಾರದ ಬಟ್ಟೆಯ
ಬ್ಯಾಗಿನ ತುಂಬಾ ಬರೀ ಬ್ರಾ, ಪ್ಯಾಂಟಿಗಳು

-ಮುನ್ನಿ

ಭಟ್ಕಳ: ಹಿಂಜಾವೇಯ ವಿಕೃತ ನಾಯಕನ ಡಿಂಗ್‌ಡಾಂಗ್ ಪುರಾಣ


ಹಿಂದೂ ಸಂಸ್ಕೃತಿ, ಹಿಂದೂ ಹೆಣ್ಣಿನ ಮಾನ ಮತ್ತು ಗೋಪ್ರಾಣ ರಕ್ಷಣೆ ಎಂಬ ತ್ರಿವಿಧ ತರಲೆ ಬಿಟ್ಟರೆ ಹಿಂಜಾವೇ ಅಡ್ನಾಡಿಗಳಿಗೆ ಇನ್ನೇನೂ ಗೊತ್ತಿಲ್ಲ. ವಿಪರ್ಯಾಸವೆಂದರೆ, ಈ ಧರ್ಮೋನ್ಮಾದಿಗಳ ಹುಚ್ಚಾಟದಿಂದ ಹಿಂದೂ ಧರ್ಮದ ಮಾನ-ಮರ್ಯಾದೆ ಹರಾಜಾಗಿ ಹೋಗಿದೆ; ಹಿಂದೂ ಹೆಣ್ಣಿನ ಶೀಲವೇ ಸಂಶಯಕ್ಕೀಡಾಗುತ್ತಿದೆ. ಈ ಹಿಂಜಾವೇಯ ಮುಖಂಡ ಗೋವಿಂದ ನಾಯ್ಕ ಎಂಬ ಅಖಂಡ ಬ್ರಹ್ಮಚಾರಿ ಇತ್ತೀಚೆಗೆ ಪರಸ್ತ್ರೀ ಹಿಂದೂ ಹೆಣ್ಣೊಬ್ಬಳ ಜೊತೆ ಸಿಕ್ಕಿ ಹಾಕಿಕೊಂಡ ವೃತ್ತಾಂತವಿಲ್ಲಿದೆ.....



ಭಟ್ಕಳ ಯಾರಿಗೆ ಗೊತ್ತಿಲ್ಲ?!

ನವಾಯತ ಮುಸ್ಲಿಮರು ಹೆಚ್ಚಿರುವ ಈ ಮಿನಿ ದುಬೈ ಸಂಘಪರಿವಾರದ ಸೋಕಾಲ್ಡ್ ಸೋಗಲಾಡಿಗಳ ಕರ್ಮ"ಭೂಮಿ! 1990ರ ದಶಕದಲ್ಲಿ ವರ್ಷಗಟ್ಟಲೆ ಹೊತ್ತಿ ಉರಿದ ಕೋಮು ಬೆಂಕಿಯ ನಿಗಿನಿಗಿ ಬೆಳಕಲ್ಲಿ ಜಗತ್ತಿಗೆಲ್ಲ ಕಂಡಿರುವ ಭಟ್ಕಳ ಇವತ್ತಿಗೂ ಒಂಥರಾ ಆತಂಕ-ಅಭದ್ರತೆಯ ನಗರಿಯೇ! ಅಂದಿನ ಆ ಅನಾಹುತ ಅವಿ ಅಗ್ನಿಕುಂಡದಲ್ಲಿ ಕಂಡಲ್ಲಿ ರಕ್ತ ಚೆಲ್ಲುವ ಹಿಂದೂ ಮುಂದಾಳುಗಳ ದೊಡ್ಡ ಪಡೆಯೇ ತಯಾರಾಗಿದೆ.

ಗೂಂಡಾ ಸಂಸದನೆಂದೇ ಹೆಸರುವಾಸಿಯಾಗಿರುವ ಅನಂತಕುಮಾರ್ ಹೆಗಡೆ ಭಟ್ಕಳವೆಂಬ ಹಿಂದುತ್ವದ ಪ್ರಯೋಗಶಾಲೆಯ ಬೈಪ್ರಾಡಕ್ಟ್; ಮಾಜಿ ಮಂತ್ರಿ ಶಿವಾನಂದ ನಾಯ್ಕ ಶಾಸಕ-ಸಚಿವನಾಗಿದ್ದು ಈಗ ನಿಗಮದ ಅಧ್ಯಕ್ಷನ ಸ್ಥಾನ-ಮಾನ ಎಂಜಾಯ್ ಮಾಡುತ್ತಿರುವುದು ಭಟ್ಕಳದ ಬೆಂಕಿ ಮಹಿಮೆಯಿಂದಾಗಿಯೇ. ಈ ಬ್ರಾಹ್ಮಣ ಶೂದ್ರರಿಂದ ದೀಕ್ಷೆ ಪಡೆದಿರುವ ಅನೇಕ ಬೆಂಕಿ ನವಾಬರು ಭಟ್ಕಳದ ಉದ್ದಗಲಕ್ಕೆ ವ್ಯಾಪಿಸಿದ್ದಾರೆ. ಈ ಧರ್ಮೋದ್ಧಾರಕರಿಗೆಲ್ಲ ಮೈತೆವಲು, ದುಡ್ಡು, ಅಧಿಕಾರ ದಾಹದ ದಂಧೆಗೆ ಹಿಂದೂತ್ವವೇ ಬಂಡವಾಳ.



ಭಟ್ಕಳದಲ್ಲಿ ಭಜರಂಗಿಗಳಿಗಿಂತ ಹಿಂದೂ ಜಾಗರಣ ವೇದಿಕೆಯೇ ಸ್ಟ್ರಾಂಗು. ಸಂಸದ ಅನಂತ್ಮಾಣಿಯ ಪೂರ್ವಾಶ್ರಮವೂ ಇದೇ. ಹಿಂದೂತ್ವ ಪ್ರಯೋಗಿಸಿ ಪೊಲಿಟಿಕಲ್-ಫೈನಾನ್ಶಿಯಲ್ ಮೈಲೇಜ್ ಗಿಟ್ಟಿಸಿರುವ ಹೆಗಡೆ-ಶಿವಾನಂದ ನಾಯ್ಕರನ್ನೇ "ಆದರ್ಶ ಮೂರ್ತಿ" ಮಾಡಿಕೊಂಡಿರುವ ಹುಂಬ ಹಿಂದೂ ಹುಡುಗರ ದಂಗೇ ಭಟ್ಕಳ ಹಿಂ.ಜಾ.ವೇ. ತಾವೂ ಬಹುಸಂಖ್ಯಾತ ಹಿಂದೂಗಳ ರಕ್ಷಕರಂತೆ ಪೋಸು ಕೊಡುತ್ತ ದಿನಕ್ಕೊಂದು ತಂಟೆ-ತಕರಾರು-ಗಲಭೆ-ಗಲಾಟೆ ಮಾಡಿದರೆ ಮುಂದೊಂದು ದಿನ ಹೆಗಡೆ-ನಾಯ್ಕರಂತೆ ತಮಗೂ ಅದೃಷ್ಟ ಖುಲಾಯಿಸಬಹುದೆಂಬ ದೂ(ದು)ರಾಲೋಚನೆ ಪುಂಡ ಪೋರರದು.

ಹಿಂದೂ ಸಂಸ್ಕೃತಿ ಹಿಂದೂ ಹೆಣ್ಣಿನ ಮಾನ ಮತ್ತು ಗೋಪ್ರಾಣ ರಕ್ಷಣೆ ಎಂಬ ತ್ರಿವಿಧ ತರಲೆ ಬಿಟ್ಟರೆ ಹಿಂಜಾವೇ ಅಡ್ನಾಡಿಗಳಿಗೆ ಇನ್ನೇನೂ ಗೊತ್ತಿಲ್ಲ. ವಿಪರ್ಯಾಸವೆಂದರೆ, ಈ ಧರ್ಮೋನ್ಮಾದಿಗಳ ಹುಚ್ಚಾಟದಿಂದ ಹಿಂದೂ ಧರ್ಮದ ಮಾನ-ಮರ್ಯಾದೆ ಹರಾಜಾಗಿ ಹೋಗಿದೆ; ಹಿಂದೂ ಹೆಣ್ಣಿನ ಶೀಲವೇ ಸಂಶಯಕ್ಕೀಡಾಗುತ್ತಿದೆ; ಜಾನುವಾರು ಸಾಗಾಟ ತಡೆ, ಹಿಂದೂ ಹೆಣ್ಣಿನ ಮಾನ ರಕ್ಷಣೆ ಹಿಂಜಾವೇ ವೀರರಿಗೆ ಕಾಸು ಮಾಡುವ ಕಸುಬುಗಳಷ್ಟೇ. ಇಂಥ ಹಿಂಜಾವೇ ಹಿಕಮತ್ತುದಾರರಿಗೆಲ್ಲ ಗೋವಿಂದ ನಾಯ್ಕನೆಂಬ 'ವಿಕೃತ'ನೇ ಮುಖಂಡ. ಸಂಸದ ಅನಂತ ಹೆಗಡೆಯ ಖಾಸಾ ಶಿಷ್ಯನೀತ. ಅರ್ಥಾತ್ ಮಾಜಿ ಮಿನಿಸ್ಟರ್ ಶಿವಾನಂದ ನಾಯ್ಕರ ಬಣದ ಕಡು ಶತ್ರು. ಸದಾ ಒಂದಿಲ್ಲೊಂದು 'ಧರ್ಮಕಾರಣ'ದಲ್ಲಿ ಬಿಜಿಯಾಗಿರುವ ಗೋವಿಂದ ನಾಯ್ಕ ಹಿಂದೂ ಹೆಣ್ಣಿನ ಮಾನ-ಗೋಪ್ರಾಣ ರಕ್ಷಣೆ ಗುತ್ತಿಗೆ ಹಿಡಿದಂತೆ ಹಾರಾಡುತ್ತಿರುತ್ತಾನೆ. ಹಿಂದೂತ್ವದ ಹೆಸರಲ್ಲಿ ಎಂಥ ಹಲ್ಲೆ-ಹಿಂಸೆಗೂ ಈತ ಹೇಸಲಾರ. ಇಂಥ "ಧರ್ಮಾತ್ಮ"ನ ಅಸಲೀ ಅವತಾರವನ್ನು ಮೊನ್ನೆ ಪೊಲೀಸರು ಹಿಂದೂ ಸಮಾಜಕ್ಕೆ ತೋರಿಸಿದ್ದಾರೆ. ಗೋವಿಂದ 'ಗೋಪಿಕೆ'ಯೊಂದಿಗೆ ಸಿದ್ಧಾಪುರ ಲಾಡ್ಜ್‌ನಲ್ಲಿ ಸಿಕ್ಕಿಬಿದ್ದಿದ್ದು ಹಿಂದೂಗಳಲ್ಲೇ ಈಗ ರೋಚಕ ಚರ್ಚೆಯ "ಹಿಂದೂತ್ವ" ಆಗಿಬಿಟ್ಟದೆ!!

ಸಿದ್ದಾಪುರದಲ್ಲಿ ಸ.....ರಿ....ಗ...ಮ...

ಸಂಘಪರಿವಾರದಲ್ಲಿ ಗೋವಿಂದ ನಾಯ್ಕ ಸಣ್ಣ-ಪುಟ್ಟ ಕುಳವಲ್ಲ. ಹಿಂದೂ ಜಾಗರಣಾ ವೇದಿಕೆಯ ಉತ್ತರ ಪ್ರಾಂತ್ಯದ ಸಂಚಾಲಕ ಈತ. ಜತೆಗೆ ಕಾರವಾರ ಎಂಪಿ ಅನಂತಕುಮಾರ್ ಹೆಗಡೆಯ ಬಲಗೈ ಬಂಟ ಬೇರೆ. ಇಂಥ "ಸೆಲಿಬ್ರಿಟಿ" ಎರಡು ಮಕ್ಕಳ ತಾಯಿಯಾದ ಪರಸ್ತ್ರೀ ಸಂಗಡ ಪರ ಊರಿನ ಲಾಡ್ಜ್‌ನಲ್ಲಿ ರೂಂ ಮಾಡಿ ಇರ್ತಾನೆಂದರೆ ಸುಮ್ಮನೆ ಮಾತಾ? ಅದೀಗ ಹಿಂಜಾವೇಯಲ್ಲಷ್ಟೇ ಅಲ್ಲ ಜಿಲ್ಲೆಯ ಬಿಜೆಪಿಯಲ್ಲೂ ಕಂಪನಗಳನ್ನೆಬ್ಬಿಸಿಬಿಟ್ಟಿದೆ. ಅನಂತ್ಮಾಣಿ-ಶಿವಾನಂದ ನಾಯ್ಕರ ಬಿಜೆಪಿಯ ದಾಯಾದಿ ಬಣಗಳ ಬಡಿದಾಟಕ್ಕೆ ಹೊಸ ರಂಗೇರಿಸಿಬಿಟ್ಟಿದೆ.

ಬಿಜೆಪಿ ಹಿಂದೂ ಸಂಘಟನೆಯ ಸರದಾರ ಗೋವಿಂದ ನಾಯ್ಕ ತನ್ನ ಹೊಸ ಕಾರೇರಿ ಶಿರಸಿ ಕಡೆ ಹೊರಟಿದ್ದ. ಹೊರಡುವಾಗ ತನ್ನ ಕೇರಿಯ (ಹನುಮಾನ್ ನಗರ) ಪಕ್ಕದ ಮುಗ್ಧಂ ಕಾಲನಿಯ ಹಿಂದೂ ಗೃಹಿಣಿಯೊಬ್ಬಳಿಗೆ ಶಿರಸಿಗೆ ಬರುವಂತೆ ಹೇಳಿದ್ದ. ಎರಡೂ-ಮೂರು ವರ್ಷದಿಂದ ಈ ಸದ್ಗೃಹಿಣಿಯ ಅಂಗ-ಸಂಗ-ಸಹವಾಸದಲ್ಲಿದ್ದ ಗೋವಿಂದಣ್ಣ ಇಬ್ಬರೂ ಶಿರಸಿಯಲ್ಲಿ ಸಂಧಿಸಿ ರಿಮೋಟ್ ನಗರ ಸಿದ್ದಾಪುರಕ್ಕೆ ಸಂಜೆ ಹೊತ್ತಿಗೆ ತಲುಪಿದ್ದಾರೆ.

ಗೋವಿಂದ ನಾಯ್ಕ ಸಿದ್ಧಾಪುರದ ಪೂರ್ಣಿಮಾ ಹೋಟೆಲಿಗೆ ನೇರ ಆಕೆಯನ್ನು ಕರೆದೊಯ್ದಿದ್ದಾನೆ. ಅಲ್ಲಿ ಸಂಜೆ 6.15 ರ ವೇಳೆಗೆ ರೂಮು ಪಡೆದಿದ್ದಾರೆ. ಕೋಣೆ ಪಡೆಯುವಾಗ ಈ ಅಖಂಡ ಬ್ರಹ್ಮಚಾರಿ-ಹಿಂದೂ ಶೂರ ತನ್ನ ಹೆಸರನ್ನು ಗೋಪಾಲ ಮೊಗೇರ್ ಎಂದು ಹೇಳಿದ್ದಾನೆ. ಊರು ಹೊನ್ನಾವರ ಎಂದಿದ್ದಾನೆ. ರಾತ್ರಿ ತಿಂಡಿ-ತೀರ್ಥ ಎಲ್ಲ ಮುಗಿಸಿ ಗೋವಿಂದ ಪಲ್ಲಂಗವೇರಿದ್ದಾನೆ.

ಶಿವ ಪೂಜೇಲಿ ಕರಡಿ

ಭಟ್ಕಳದ ಈ ನೋಟೆಡ್ ನಾ(ಲಾ)ಯ್ಕ್ ಹೆಂಗಸೊಬ್ಬಳ ಜತೆ ಊರು ಬಿಟ್ಟದ್ದು ಬಹುಶಃ ಆತನ ವಿರೋಧಿ ಗ್ಯಾಂಗಿಗೆ ಗೊತ್ತಾಗಿದೆ. ಈತನನ್ನು ಹಣಿಯಲು ಇದೇ ಸರಿಯಾದ ಸಮಯವೆಂದು ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ. ಮೊದಲೇ ತೊಗಲೋದ್ಯಮಕ್ಕೆ ಹೆಸರುವಾಸಿಯಾಗಿರುವ ಸಿದ್ಧಾಪುರದ ಪೂರ್ಣಿಮಾ ಲಾಡ್ಜ್‌ನಲ್ಲಿ ಹಿಂದೂ ಹುಲಿ ಸುರತನಿರತವಾಗಿದೆ ಎಂದೊಡನೆ ಸ್ಥಳೀಯ ಇನ್ಸ್‌ಪೆಕ್ಟರ್ ಹಾಲಮೂರ್ತಿರಾವ್ ಅಲರ್ಟ್ ಆಗಿದ್ದಾರೆ.

ರಾತ್ರಿ 11.30 ರ ಹೊತ್ತಿಗೆ ಲಾಡ್ಜ್ ಮೇಲೆ ತನ್ನ ಟೀಮ್‌ನೊಂದಿಗೆ ದಾಳಿ ಮಾಡಿದ್ದಾರೆ ಸಿಪಿಐ ಸಾಹೇಬರು. ಕೋಣೆ-ಕೋಣೆಗೆ ಹೋಗಿ ಪೊಲೀಸರು ತಪಾಸಣೆ ಶುರು ಹಚ್ಚಿಕೊಂಡಿದ್ದಾರೆ. ಅದಾಗಲೇ ಸುಖದ ಸುಪ್ಪತ್ತಿಗೆಯಲ್ಲಿದ್ದ ಗೋವಿಂದನಿಗೆ ಏನೋ ಎಡವಟ್ಟಾಗುತ್ತಿದೆ ಎಂಬ ಅರಿವಾಗಿದೆ. ಪೊಲೀಸರೇ ರೇಡು ಬದ್ದಿದ್ದಾರೆಂಬುದು ಖಾತ್ರಿಯಾಗುತ್ತಲೇ ಈತ ಉಪಾಯವಾಗಿ ಕೋಣೆಯಿಂದ ಒಬ್ಬನೇ ಹೊರಬಂದಿದ್ದಾನೆ; ರೇಡು ಮಾಡುತ್ತಿದ್ದ ತಂಡದ ಜತೆಗಿದ್ದ ಗುಂಪಿನಲ್ಲಿ ಸೇರಿಕೊಂಡಿದ್ದಾನೆ. ನಡುರಾತ್ರಿ ಗೆಣೆಗಾರ ಕೈಕೊಟ್ಟು ಪರಾರಿಯಾಗಿದ್ದು ಕಂಡು ಆ ಹಿಂದೂ ಲಲನಾ ಮಣಿ ಕಂಗಾಲಾಗಿ ರೂಮಿನ ಬಾಗಿಲು ಜಡಿದು ಕುಕ್ಕರು ಬಡಿದಿದ್ದಾಳೆ, ಪಾಪ!!

ಗೋವಿಂದಾ... ಗೋ.... ವಿಂದಾ.....

ಸಿದ್ಧಾಪುರ ಪೊಲೀಸರಿಗೆ ಹಿಂಜಾವೇ ಭೂಪ ಹೆಂಗಸೊಬ್ಬಳನ್ನು ಪಿಕ್‌ಅಪ್ ಮಾಡಿಕೊಂಡು ಬಂದಿದ್ದಾನೆಂಬುದು ಗೊತ್ತಿತ್ತೇ ಹೊರತು ದಿ ಗ್ರೇಟ್ ಗೋವಿಂದ ನಾಯ್ಕನ ಮುಖ ಪರಿಚಯವಿರಲಿಲ್ಲ. ಇದು ಕಮ್ಯುನಲ್ ಕ್ರಿಮಿನಲ್ ಕಾರ್ಯಾಚರಣೆ ಮಾಡಿ ಪಲಾಯನ ಮಾಡುವ ಕಲೆ ಕರಗತ ಮಾಡಿಕೊಂಡಿದ್ದ ಗೋವಿಂದ ನಾಯ್ಕನಿಗೆ ಬಚಾವಾಗಲು ಅನುಕೂಲ ಕಲ್ಪಿಸಿತು.

ಪೊಲೀಸರು ಗೋವಿಂದನ ರಾಸಲೀಲೆಯ ಕೋಣೆಯ ಬಾಗಿಲು ತೆಗೆಸಿದಾಗ ಅಲ್ಲಿ ಒಂಟಿ ಹೆಂಗಸು ಮಾತ್ರ ಇದ್ದಳು. ಆದರೆ ಎರಡೆರಡು ಮೊಬೈಲ್ ಇತ್ತು. ಒಂದು ಆ ಹಿಂದೂ ಹೆಂಗಸಿನದಾದರೆ, ಇನ್ನೊಂದು ಆಕೆ ಜತೆಗಿದ್ದು ಕೆಲವೇ ನಿಮಿಷಗಳ ಹಿಂದೆ ಪರಾರಿಯಾಗಿದ್ದ ಹಿಂದೂ ಜಾಗರಣಾ ವೇದಿಕೆಯ ದೇಶಭಕ್ತ ಗೋವಿಂದ ನಾಯ್ಕನದಾಗಿತ್ತು. ಬಿಎಸ್‌ಎನ್‌ಎಲ್‌ನ 9449771367 ನಂಬರಿನ ನೋಕಿಯಾ ಸೆಟ್ ಕೈಗೆ ಸಿಗುತ್ತಿದ್ದಂತೆಯೇ ಭಟ್ಕಳದ ಹಿಂದೂ ಮುಂದಾಳು ಗೋವಿಂದ ನಾಯ್ಕನೇ ಅನೈತಿಕ ಕವಾಯತನಲ್ಲಿ ನಿರತನಾಗಿದ್ದ ವಿಟ ಪುರುಷನೆಂಬುದು ಪೊಲೀಸರಿಗೆ ಖಾತ್ರಿಯಾಗಿ ಹೋಯ್ತು!

ಹಿಂದೂ ಹೆಂಗಸು ಹೇಳಿದ್ದೇನು?

ಈ ಕಳ್ಳ ಹಿಂದೂ ಧರ್ಮೀಯ ಜೋಡಿಯ ಮೇಲೆ ಅನೈತಿಕ ಚಟುವಟಿಕೆ ನಿಯಂತ್ರಣ ಕಾನೂನಿನ ಸೆಕ್ಷನ್ 4 ಮತ್ತು 5 ರಂತೆ ಕೇಸು ಜಡಿದ ಪೊಲೀಸರು ವಿಚಾರಣೆ ಶುರು ಹಚ್ಚಿಕೊಂಡರು. ಆಕೆ ಆರಂಭದಲ್ಲಿ ಖೋಟಾ ಹೆಸರು ಹೇಳಿದಳು; ಹೊನ್ನಾವರದವಳೆಂದಳು. ದುರ್ದೈವವಶಾತ್ ಅಂದು ಆಕೆಯ ಬ್ಯಾಗ್‌ನಲ್ಲಿ ಆಕೆಯದೇ ಮತದಾರ ಗುರುತಿನ ಚೀಟಿ ಇತ್ತು. ಅದು ಪೊಲೀಸರ ಕೈಗೆ ಸಿಗುತ್ತಿದ್ದಂತೆಯೇ ಆಕೆಯ ನಿಜ ನಾಮಧೇಯ, ಜಾತಕ ಎಲ್ಲ ಒಂದೊಂದಾಗಿ ಆಕೆಯ ಬಾಯಿಂದಲೇ ಹೊರ ಬಂತು....

ಭಟ್ಕಳದ ಹನುಮಾನ್ ನಗರದ "ದುರ್ಗಾಂಬಿಕಾ" ಬೇಕರಿಯ ಬಾಸ್ ಗೋವಿಂದ ನಾಯ್ಕ ತನ್ನನ್ನು ಸಿದ್ಧಾಪುರ ಲಾಡ್ಜ್‌ಗೆ ಕರೆತಂದಿದ್ದ "ದೊಡ್ಡ ಮನುಷ್ಯ"ನೆಂದು "ಆಕೆ" ಹೇಳಿದಳು. "ನಾನು ಎರಡು ಪುಟ್ಟ ಮಕ್ಕಳ ತಾಯಿ. ನನ್ನ ಗಂಡ ದೂರದ ಗೋವಾದಲ್ಲಿ ಡ್ರೈವರಿಕೆ ಮಾಡಿಕೊಂಡಿದ್ದಾನೆ... ನನ್ನ ಕೇರಿಯ ಪಕ್ಕದ ಕೇರಿಯ ಗೋವಿಂದನೊಂದಿಗೆ ಸ್ನೇಹ-ಸಲಿಗೆ ಇತ್ತು. ಆತ ತನಗೆ ಆಗಾಗ ಹೆಲ್ಪ್ ಮಾಡುತ್ತಿದ್ದ. ಹೀಗಾಗಿ ನಾವಿಬ್ಬರೂ 'ಒಂಥರಾ' ಸಂಗಾತಿಗಳಂತಾಗಿದ್ದೆವು....." ಎಂದಾಕೆ ಪೊಲೀಸರ ಮುಂದೆ ಮುಚ್ಚುಮರೆಯಿಲ್ಲದೆ ದೋಸ್ತನ ಇತಿಹಾಸ-ಭೂಗೋಲ ಬಿಚ್ಚಿಟ್ಟಳು.

ಅಂದು ಗೋವಿಂದನೇ ಆಕೆಗೆ ಶಿರಸಿಗೆ ಬರುವಂತೆ ಹೇಳಿ ಅಲ್ಲಿಂದ ಸಿದ್ಧಾಪುರಕ್ಕೆ ಕರೆದೊಯ್ದಿದ್ದನಂತೆ... ಪೊಲೀಸರ ವಾಸನೆ ಹಿಡಿದು ಆತ ಪರಾರಿಯಾದನಂತೆ. ಹಾಗಂತ 'ಆಕೆ'ಯೇ ಹೇಳಿದ್ದಾಳೆ ಪೊಲೀಸರಿಗೆ. ಇವನೆಂಥ ಕರುಣಾಮಯಿ ಹಿಂದೂ ನೋಡಿ! ತನ್ನ ನಂಬಿ ಬಂದು, ಸುಖ-ಸಂತೋಷ ನೀಡಿದ ಅಸಹಾಯಕ ಹೆಣ್ಣನ್ನು ಪೊಲೀಸರ ಕೈಗೆ ಕೊಟ್ಟು ತಾನು ಬಚಾವಾಗಿದ್ದಾನೆ. ಹೇ ರಾಮ್! ಹಿಂದೂ ಹೆಣ್ಣಿಗೆ ಅದೆಂಥ ಮೋಸ! ಹಿಂದೂ ಧರ್ಮಕ್ಕೆಂತ ಅಪಚಾರ!!

ವ್ಯರ್ಥಾಲಾಪ

"ಕಳ್ಳ ಬಾಯಿ ದೊಡ್ಡದು" ಅಂತಾರಲ್ಲ ಹಾಗೆ ಸಿಕ್ಕಿಬಿದ್ದು ಮಾನ ಹರಾಜಾದ ನಂತರ ಗೋವಿಂದ ಓಡಿಹೋಗಿದ್ದಾನೆ. ಮರುದಿನವೇ ತನ್ನ ಜಿಲ್ಲಾ ಮಟ್ಟದ ಹಿಂಜಾವೇ ಸಹಚರರ ಜತೆ ಸೇರಿ ಪ್ರೆಸ್ ಕಾನ್ಫರೆನ್ಸ್ ಮಾಡಿದ್ದಾನೆ. ಆತನ ಗೋರಕ್ಷಣೆ ಮತ್ತು ರಾಜಕೀಯದಿಂದ ಹತಾಶರಾದವರು ಮಾಡಿದ ಪಿತೂರಿ ಇದಂತೆ. ಮಾಜಿ ಮಂತ್ರಿ ಶಿವಾನಂದ ನಾಯ್ಕನೇ ತನ್ನನ್ನು ಹಿಡಿಸಿಹಾಕಿದನೆಂಬ ಪರೋಕ್ಷ ಸಿಟ್ಟು ಆತನ ಅಭಿವ್ಯಕ್ತಿಯಲ್ಲಿತ್ತು.

"ಆಕೆ" ತಾನು ಕಷ್ಟದಲ್ಲಿದ್ದೇನೆಂದು ಫೋನಾಯಿಸಿದ್ದರಿಂದ ಗೋವಿಂದ ನಾಯ್ಕ ಸಿದ್ಧಾಪುರಕ್ಕೆ ದೌಡಾಯಿಸಿದ್ದನಂತೆ. ಪರ ಊರಿನಲ್ಲಿ ರಾತ್ರಿ ವೇಳೆ ಲಾಡ್ಜ್‌ನಲ್ಲಿ ರೂಂ ಮಾಡಿಕೊಂಡು ಒಬ್ಬಂಟಿ ಹೆಂಗಸೊಂದಿಗೆ ಉಳಿದು "ರಕ್ಷಿಸುವ" ದರ್ದು ಹಿಂದೂ ಧರ್ಮಕಿತ್ತೆ? ಸೋಗಲಾಡಿ ಹಿಂದೂ ಹೀರೋ ಗೋವಿಂದನಾಯ್ಕನ ಸುಳ್ಳು ಸಬೂಬು ಮಾತ್ರ ಯಾರೂ ನಂಬುತ್ತಿಲ್ಲ!! ಗೋವಿಂದ ನಾಯ್ಕ ಸಂಘಪರಿವಾರದ "ಹಿಂದೂತ್ವ"ದ ಸಣ್ಣ ಸ್ಯಾಂಪಲ್ ಅಷ್ಟೇ!!

● ವರದಿಗಾರ

ಗಲಾಟೆ ಗೋವಿಂದ!!

ಕೋಮು ಸೂಕ್ಷ್ಮ ಏರಿಯಾ ಭಟ್ಕಳದಲ್ಲಿ "ಗಲಾಟೆ ಗೋವಿಂದ"ನೆಂದೇ ಕುಖ್ಯಾತನಾಗಿರುವ ಹಿಂಜಾವೇ ಉತ್ತರ ಪ್ರಾಂತ್ಯ ಸಂಚಾಲಕ ಗೋವಿಂದ ನಾಯ್ಕನ ಜಾತಕ ರೋಚಕವಾಗಿದೆ. ಭಟ್ಕಳ ಕೋಮು ಅಗ್ನಿಕುಂಡವಾಗಿದ್ದ ಹೊತ್ತಲ್ಲಿ (1994) ದಲ್ಲಿ ಹಠಾತ್ ಪ್ರವರ್ಧಮಾನಕ್ಕೆ ಬಂದಾತ ಈ ಗೋವಿಂದ. ಅದುವರೆಗೂ ಹೈದರಾಬಾದ್‌ನ ಬೇಕರಿಯೊಂದರಲ್ಲಿ ಚಾಕರಿ ಮಾಡಿಕೊಂಡಿದ್ದ ಗೋವಿಂದನಿಗೆ ಊರಿಗೆ ಬಂದಾಗ ಆಶ್ರಯ ಕೊಟ್ಟವನು ನವಾಯತ ಸಾಬಿ ಕುಬುಸ್ ಮೀರಾ.

ಮೀರಾ ತನ್ನ ಬೇಕರಿಯಲ್ಲಿ ಗೋವಿಂದನಿಗೆ ಕೆಲಸ ಕೊಟ್ಟಿದ್ದ. ಅಷ್ಟೇ ಅಲ್ಲ ಬೇಕರಿ ದಂಧೆಯ ಟ್ರಿಕ್ಕುಗಳನ್ನು ಹೇಳಿಕೊಟ್ಟಿದ್ದ. ಆನಂತರ ಗೋವಿಂದ ತಾನೇ ಸ್ವಂತ ಬೇಕರಿಯೊಂದನ್ನು ಆರಂಭಿಸಿದ. ವಿದ್ಯೆ ಕಲಿಸಿ ಖುಷಿಯಿಂದಲೇ ಮೀರಾ ಕಳಿಸಿಕೊಟ್ಟಿದ್ದರು. ಆದರೆ ಈ ಕೃತಘ್ನ ತನಗೆ ಬದುಕುವ ದಾರಿ ಹೇಳಿ ಕೊಟ್ಟ ಮೀರಾನ ಮುಸ್ಲಿಮ್ ಧರ್ಮೀಯರ ಮೇಲೆ ಪೂರ್ವಾಗ್ರಹ ಬೆಳೆಸಿಕೊಂಡಿದ್ದ. ಅಮಾನುಷವಾಗಿ ಸಾಬಗಳ ಮೇಲೆ ದಾಳಿ ಹಲ್ಲೆ ಮಾಡುತ್ತಿದ್ದ ಉಗ್ರ ಹಿಂದೂವಾದಿಯಾಗಿ ತಯಾರಾಗಿ ಹೋದ. ನೋಡುನೋಡುತ್ತಿದ್ದಂತೆಯೇ ಈತನ ಮೇಲೆ ಡಜನ್‌ಗಟ್ಟಲೆ ಕಮ್ಯುನಲ್ ಕೇಸ್‌ಗಳು ಬಿದ್ದವು. ಗುರು ಅನಂತ್ಮಾಣಿ ಎಂಪಿಯಾಗುತ್ತಲೇ ಗೋವಿಂದನ ಗುದುಮುರಿಗೆ ಮಿತಿಮೀರಿ ಹೋಯ್ತು. ಧರ್ಮದ ಅಮಲಲ್ಲಿ ಮನುಷ್ಯತ್ವ ಕಳೆದುಕೊಂಡು ರಾಕ್ಷಸನಂತಾಗಿ ಬಿಟ್ಟ!!

"ದುರ್ಗಾಂಬಿಕಾ" ಹೆಸರಿನ ಬೇಕರಿ ತೆರೆದ ಗೋವಿಂದ ನಾಯ್ಕ ಮೂರ್ನಾಲ್ಕು ವರ್ಷದಲ್ಲೇ ಶ್ರೀಮಂತನಾಗಿ ಹೋದ. ಮೂರ್ನಾಲ್ಕು ಕಾರು-ಬೈಕು-ಬೇಕರಿ ಮಾಡಿಕೊಂಡಿದ್ದ ಗೋವಿಂದನ ಸಿರಿವಂತಿಕೆ ಕಂಡವರು ಇದು ಬೇಕರಿ ಉದ್ಯಮದಿಂದ ಬಂದುದ್ದಲ್ಲ ಎಂದೇ ಅನುಮಾನ ಪಡತೊಡಗಿದರು. ಮೊನ್ನೆ ಗೋವಿಂದ ನಾಯ್ಕ ಸಿದ್ಧಾಪುರದಲ್ಲಿ ಅನೈತಿಕ ವ್ಯವಹಾರದಲ್ಲಿ ಸಿಕ್ಕಿಬಿದ್ದ ನಂತರ ಆತನ ಸುತ್ತ 'ರಂಗೀಲಾ' ಕತೆಗಳು ಗಿರಕಿ ಹೊಡೆಯತೊಡಗಿವೆ.

ಗೋವಿಂದನೇನಾದರೂ ತೊಗಲೋದ್ಯಮದಲ್ಲಿದ್ದಾನಾ? ಎಂಬ ಸಂಶಯದ ಚರ್ಚೆ ನಡೆದಿದೆ. ಪೊಲೀಸರಿಗೆ ಸಿಕ್ಕಿರುವ "ಆಕೆ" ಮತ್ತು "ಆತ"ನ ಮೊಬೈಲ್‌ನಲ್ಲಿ ಇರುವ ಸೆಲಬ್ರಿಟಿಗಳ ನಂಬರುಗಳು [illegible] ಮಾಡಿಸಿದೆಯಂತೆ. ಆ ಹಿಂದೂ ಹೆಂಗಸನ್ನು ಕುಗ್ರಾಮದಂತಿರುವ ಸಿದ್ಧಾಪುರ [illegible] ಕರೆದೊಯ್ದು ತನ್ನ ಹಿಂದೂ "ಬಾಸ್"ಗಳಿಗೇನಾದರೂ [illegible] ಗೋವಿಂದ ಸ್ಕೆಚ್ ಹಾಕಿಕೊಂಡಿದ್ದನಾ?

ಇಂಥದೊಂದು ಅನುಮಾನ ಎಲ್ಲರಿಗೂ ಇದ್ದೇ ಇದೆ. ಇದಕ್ಕೆ ಇಂಬು ಕೊಡುವಂತಿದೆ ಇವತ್ತಿಗೂ ಗೋವಿಂದ ನಾಯ್ಕನ ಬಂಧನವಾಗದಿರುವುದು. [illegible] ಅನಂತ ಹೆಗಡೆಯ ರಾಜಾಶ್ರಯವಿರುವುದು ಮತ್ತು ರಾಜ್ಯದಲ್ಲಿ ಬಿಜೆಪಿಯ ಭಂಡ ಹಿಂದುತ್ವವಾದಿಗಳೇ ಆಡಳಿತ ನಡೆಸುತ್ತಿರುವುದರಿಂದ ಗೋವಿಂದನ ಕೇಸು ಹಳ್ಳ ಹಿಡಿಯುವ ಸಾಧ್ಯತೆಯೇ ಜಾಸ್ತಿ!

ವಿಕೃತ ನಟ ಆದಿಯ ಸೆಕ್ಸ್ ಮೇನಿಯಾ



ಒಬ್ಬ ನಟ, ಸೋಕಾಲ್ಡ್ ಸೆಲೆಬ್ರಿಟಿ; ಎಲ್ಲಕ್ಕೂ ಮಿಗಿಲಾಗಿ ಹೊಟ್ಟೆಗೆ ಅನ್ನ ತಿನ್ನುವ ಆದಿ ಲೋಕೇಶ್ ತನ್ನ ಎರಡನೇ ಹೆಂಡತಿಯನ್ನು ಪಕ್ಕ ಕೂರಿಸಿಕೊಂಡು ತನ್ನಿಂದ ವಂಚನೆಗೀಡಾದ ಯುವತಿ ತನ್ನ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿದ್ದೇ ತಪ್ಪು ಎಂದು ಕಿಡಿಕಾರುತ್ತಾನೆ. ಆಕೆಗೆ ತಾನು ವಂಚಿಸಿದ್ದು ಕೇವಲ 75 ಗ್ರಾಂ ಚಿನ್ನ ಮಾತ್ರ, ಆದರೆ ಪೊಲೀಸರು 85 ಗ್ರಾಂ ಕೊಡಿಸಿದ್ದಾರೆಂಬುದು ಆತನ ಆರೋಪ. ವಂಚನೆಗೀಡಾದ ಯುವತಿ ತನ್ನ ಬಾಳೇ ಹಾಳಾಯಿತೆಂದು ಕಣ್ಣೀರಿಡುತ್ತಿದ್ದರೆ ಆದಿ ಲೋಕೇಶ್‌ಗೆ ಹತ್ತು ಗ್ರಾಂ ಚಿನ್ನದ ಚಿಂತೆ!

ತಾನೇ ನಾಶಗೈದ ಹೆಣ್ಣುಮಗಳೊಬ್ಬಳ ಬದುಕಿನ ಮುಂದೆ ಹತ್ತು ಗ್ರಾಂ ಚಿನ್ನ ಯಾವ ಲೆಕ್ಕ?

ನಟ ಆದಿ ಲೋಕೇಶ್‌ನ ವಿಕೃತಿ ಮತ್ತು ಕ್ರೌರ್ಯಕ್ಕೆ ಬಲಿಯಾದ ಹೆಣ್ಣುಮಗಳೊಬ್ಬಳು ಪೊಲೀಸರಿಗೆ ದೂರು ಕೊಟ್ಟದ್ದೇ ತಪ್ಪಂತೆ. ಆಕೆಯನ್ನು ನಂಬಿಸಿ ತಾನು ಕಿತ್ತಿದ್ದ ಚಿನ್ನಾಭರಣಗಳನ್ನು ಪೊಲೀಸರು ವಾಪಸ್ಸು ಕೊಡಿಸಿದ್ದೂ ಅಪರಾಧವಂತೆ. ತಾನು ಕೊಡಬೇಕಿದ್ದದ್ದು ಕೇವಲ 75 ಗ್ರಾಂ ಚಿನ್ನ ಮಾತ್ರ; ಆದರೆ ಆರ್.ಟಿ. ನಗರ ಪೊಲೀಸರು ಅನ್ಯಾಯವಾಗಿ ತನ್ನಿಂದ ಹತ್ತು ಗ್ರಾಂ ಚಿನ್ನವನ್ನು ಆಕೆಗೆ ಹೆಚ್ಚುವರಿಯಾಗಿ ಕೊಡಿಸಿದ್ದಾರಂತೆ!



ಹಾಗೆಂದು ಪೊಲೀಸ್ ಕಮೀಷನರ್ ಶಂಕರ್ ಬಿದರಿಯವರಿಗೆ ದೂರು ಕೊಟ್ಟವನು ಪೂಜಾರಿ ಚಿತ್ರದ ಹೀರೋ ಆದರ್ಶ್ ಅಲಿಯಾಸ್ ಆದಿ ಲೋಕೇಶ್!


ಸಾಫ್ಟ್‌ವೇರ್ ಕಂಪೆನಿಯೊಂದರ ಉದ್ಯೋಗಿ ಶಾಲಿನಿ ಎಂಬಾಕೆಯನ್ನು ಕಳೆದ ಐದು ವರ್ಷಗಳಿಂದ ಲೈಂಗಿಕವಾಗಿ ಪೀಡಿಸುತ್ತಾ ಬಂದಿದ್ದ ನಟ ಆದಿ ಲೋಕೇಶ್‌ಗೆ ತನ್ನಿಂದಾಗಿ ಆಕೆಯ ಬದುಕೇ ಹಾಳಾದ ಲೆಕ್ಕಕ್ಕಿಂತಲೂ ಹತ್ತು ಗ್ರಾಂ ಚಿನ್ನವೇ ಮುಖ್ಯವಂತೆ. ಬಹುಶಃ ಬೀದಿಯಲ್ಲೇನಾದರೂ ನಿಂತು ಈ ಮಾತು ಹೇಳಿದ್ದರೆ ಜನ ಯಾವುದರಲ್ಲಿ ಬಡಿಯುತ್ತಿದ್ದರೋ-

ಒಬ್ಬ ನಟ, ಸೋಕಾಲ್ಡ್ ಸೆಲೆಬ್ರಿಟಿ; ಎಲ್ಲಕ್ಕೂ ಮಿಗಿಲಾಗಿ ಹೊಟ್ಟೆಗೆ ಅನ್ನ ತಿನ್ನುವ ಆದಿ ಲೋಕೇಶ್ ತನ್ನ ಎರಡನೇ ಹೆಂಡತಿಯನ್ನು ಪಕ್ಕ ಕೂರಿಸಿಕೊಂಡು ತನ್ನಿಂದ ವಂಚನೆಗೀಡಾದ ಯುವತಿ ತನ್ನ ವಿರುದ್ಧ ಪೊಲೀಸರಿಗೆ ದೂರು ಕೊಟ್ಟದ್ದೇ ತಪ್ಪು ಎಂದು ಕಿಡಿಕಾರುತ್ತಾನೆ. ಆಕೆಗೆ ತಾನು ವಂಚಿಸಿದ್ದು ಕೇವಲ 75 ಗ್ರಾಂ ಚಿನ್ನ ಮಾತ್ರ, ಆದರೆ ಪೊಲೀಸರು 85 ಗ್ರಾಂ ಕೊಡಿಸಿದ್ದಾರೆಂಬುದು ಆತನ ಆರೋಪ. ವಂಚನೆಗೀಡಾದ ಯುವತಿ ತನ್ನ ಬಾಳೇ ಹಾಳಾಯಿತೆಂದು ಕಣ್ಣೀರಿಡುತ್ತಿದ್ದರೆ ಆದಿ ಲೋಕೇಶ್‌ಗೆ ಹತ್ತು ಗ್ರಾಂ ಚಿನ್ನದ ಚಿಂತೆ!

ಹಾಳಾಗಲಿ, ಈ ಆದಿ ಲೋಕೇಶ್ ಈತನಕ ಅದೆಷ್ಟು ಮಂದಿ ಯುವತಿಯರಿಗೆ ಈ ರೀತಿ ವಂಚಿಸಿದ್ದಾನೆಂಬುದನ್ನು ಪಟ್ಟಿ ಮಾಡುತ್ತಾ ಹೋದರೆ ಪೊಲೀಸ್ ಕಮೀಷನರ್ ಶಂಕರ್ ಬಿದರಿ ಈತನ ಕೀಚಕ ಪೀಡೆಯ ವಿರುದ್ಧವೇ ಪ್ರತ್ಯೇಕ ತನಿಖಾ ತಂಡವನ್ನು ರಚಿಸಬೇಕಾಗುತ್ತದೆ.

ಮೊದಲು ಮೈಸೂರಿನ ಪೂಜಾ (ಹೆಸರು ಬದಲಿಸಿದೆ) ಎಂಬ ಯುವತಿಯನ್ನು ಮದುವೆಯಾದ. ಸಾಕಷ್ಟು ವರದಕ್ಷಿಣೆಯನ್ನೂ ಪಡೆದಿದ್ದ. ಮದುವೆಯಾಗಿ ವರ್ಷ ತುಂಬುವ ಮೊದಲೇ ಒಂದಲ್ಲ ಇಬ್ಬರು ಯುವತಿಯರ ಜೊತೆ ಚಕ್ಕಂದಕ್ಕಿಳಿದ.

ಇದು ಗೊತ್ತಾಗಿದ್ದೇ ಹುಷಾರಾದ ಪೂಜಾಳ ತಂದೆ 'ಇಂಥಾ ಲಫಂಗನ ಜೊತೆ ಬದುಕೋದಕ್ಕಿಂತ ಭಿಕ್ಷೆ ಬೇಡೋದೇ ವಾಸಿ' ಎಂದು ಮಗಳಿಂದ ಸೋಡಚೀಟಿ ಕೊಡಿಸಿದ್ದಾರೆ. ಅಲ್ಲಿಗೆ ಒಬ್ಬ ಹೆಣ್ಣುಮಗಳ ಬದುಕನ್ನ ಆದಿ ಲೋಕೇಶ್ ಹಾಳುಗೈದಾಗಿತ್ತು. ಹೋಗಲಿ, ಪತ್ನಿಯನ್ನೇ ವಂಚಿಸಿ ಚಕ್ಕಂದಕ್ಕಿಳಿದಿದ್ದ ಇಬ್ಬರು ಹೆಣ್ಣುಮಕ್ಕಳ ಪೈಕಿ ಯಾರಾದರೂ ಒಬ್ಬರಿಗಾದರೂ ಆದಿ ನಿಷ್ಠನಾಗಿದ್ದರೆ ಆ ಮಾತು ಬೇರೆ. ಆ ಇಬ್ಬರು ಯುವತಿಯರನ್ನೂ ತನ್ನ ವಿಕೃತಿಗಷ್ಟೇ ಬಳಸಿ ಕೈಬಿಟ್ಟ ಆದಿ ಈಗ ಕಣ್ಣೀರಿಡುತ್ತಿರುವ ಶಾಲಿನಿಯ ಬೆನ್ನಿಗೆ ಬಿದ್ದ.



ಈ ಶಾಲಿನಿ ಸದ್ಯ ಬೆಂಗಳೂರಿನ ಸಾಫ್ಟ್‌ವೇರ್ ಕಂಪೆನಿಯೊಂದರ ಉದ್ಯೋಗಿ. ಮೂಲತಃ ಮೈಸೂರಿನವಳು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಆದಿಗೆ ಸಹಪಾಠಿಯಾಗಿದ್ದಾಕೆ. ಆ ಹೊತ್ತಿಗಾಗಲೇ 'ಜೋಗಿ' ರಿಲೀಜಾಗಿತ್ತು. ಶಿವಣ್ಣನ ಮುಂದೆ ರೌಡಿ ಬಿಡ್ಡನ ಪಾತ್ರ ಮಾಡಿದ್ದ ಆದಿ ಲೋಕೇಶ್ ಬಗ್ಗೆ ಗಾಂಧಿನಗರಕ್ಕೇನಾದರೂ ಚೂರುಪಾರು ಗೌರವವಿದ್ದಿದ್ದರೆ ಅದು ಆತನ ತಂದೆ ಮೈಸೂರು ಲೋಕೇಶ್ ಕಾರಣಕ್ಕೆ. ಜೊತೆಗೆ ಆದಿಯ ಅಕ್ಕ ಪವಿತ್ರಾ ಲೋಕೇಶ್ ಆಗಷ್ಟೇ ಕಿರುತೆರೆಯಲ್ಲಿ ಮಿಂಚುತ್ತಿದ್ದಳು. ಇದೆಲ್ಲದರ ಲಾಭ ಪಡೆದವನೇ ಆದಿ.

ಕುಚೋದ್ಯವೆಂದರೆ ಆತನ ಹುಟ್ಟು ಹೆಸರು ಆದರ್ಶ್. ಅಪ್ಪನ ಹೆಸರನ್ನೂ ಸೇರಿಸಿಕೊಂಡು ಆದಿ ಲೋಕೇಶ್ ಎಂದಿಟ್ಟುಕೊಂಡ. 'ಜೋಗಿ' ಹಿಟ್ಟಾದ ಕಾರಣಕ್ಕೆ 'ಬಿಡ್ಡ' ಎಂಬ ರೌಡಿಯ ಪಾತ್ರವನ್ನೇ ನೆಪ ಮಾಡಿಕೊಂಡು ಆದಿಗೆ ಹೀರೋ ಪಟ್ಟ ಕಟ್ಟಿದ್ದು ಶರಣ್ ಗಬ್ಬೂರ್. ಗಾಂಧಿನಗರದ ಮಟ್ಟಿಗೆ ಹೆಣ್ಣುಬಾಕ ಡೈರೆಕ್ಟರ್ ಎಂದೇ ಕುಖ್ಯಾತನಾದ ಶರಣ್ ಗಬ್ಬೂರ್ ತನ್ನದೇ ನಿರ್ದೇಶನದಲ್ಲಿ 'ಪೂಜಾರಿ' ಎಂಬ ಸಿನಿಮಾ ಸೃಷ್ಟಿಸಿದ್ದಕ್ಕೆ ಸಾಥು ಕೊಟ್ಟವನು ಆದಿ.

ಇಂಟರ್‌ನ್ಯಾಷನಲ್ ಪಾತಕಿ ರವಿ ಪೂಜಾರಿಯ ಕತೆ ಹೊತ್ತ 'ಪೂಜಾರಿ' ರಿಲೀಜಾದ ಒಂದೇ ವಾರಕ್ಕೆ ಎತ್ತಂಗಡಿಯಾಯ್ತು. ಅನಂತರ ರಮೇಶ್ ಚೊಕ್ಕನಹಳ್ಳಿ ಡೈರೆಕ್ಟರ್‌ಗಿರಿಯಲ್ಲಿ ಬಿಡ್ಡ ರಿಲೀಜಾಯಿತು. ಅದೂ ಒಂದೇ ವಾರಕ್ಕೆ ಸುಸ್ತು ಬಿತ್ತು. ನಂತರ ಅನಂತ್ ಪದ್ಮನಾಭನ 'ನಿಷೇಧಾಜ್ಞೆ'ಗೆ ಹೀರೋ ಆದ ಆದಿ ಈ ಹಂತದಲ್ಲೂ ಶಾಲಿನಿ ಜೊತೆಗೇ ಇದ್ದ. ಮದುವೆಯಾಗ್ತೀನಿ ಎಂದು ಭರವಸೆಯನ್ನೂ ಕೊಟ್ಟಿದ್ದ.

ನಂಬಿದ ಶಾಲಿನಿ ಆದಿ ಹೇಳಿದಂತೆಲ್ಲ ಕೇಳಿದ್ದಾಳೆ. ಈ ಮಧ್ಯೆ ತಾನು ಸಿಕ್ಕಾಪಟ್ಟೆ ಹಣಕಾಸಿನ ತಾಪತ್ರಯಕ್ಕೆ ಬಿದ್ದಿದ್ದೇನೆಂದೂ ಸಾಲಗಾರರ ಕಾಟ ತಾಳದೇ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದೂ ನಂಬಿಸಿದ ಆದಿ ಆಕೆಯ ಒಂದೂವರೆ ಲಕ್ಷದಷ್ಟು ಚಿನ್ನಾಭರಣಗಳನ್ನು ಲಪಟಾಯಿಸಿದ್ದಾನೆ. ಹೀಗೆ ಶಾಲಿನಿಯ ಒಡವೆ ಗಿರವಿಗಿಟ್ಟು ದುಡ್ಡು ಪಡೆದ ಆದಿ ಅದನ್ನು ಬಳಸಿದ್ದು 'ವಿಐಪಿ' ಚಿತ್ರದ ಕ್ಯಾಬರೆ ಡ್ಯಾನ್ಸರ್ ಅನೂಪಾ ಅಲಿಯಾಸ್ ಅರುಣಾ ಎಂಬಾಕೆಯ ಜೊತೆ ಶೋಕಿ ತಿರುಗಾಡಲಿಕ್ಕೆ.

ಶಿವು ಮತ್ತು ರಾಜ್‌ಶೇಖರ್ ಎಂಬ ಜೋಡಿ ಡೈರೆಕ್ಟರ್‌ಗಳು ನಿರ್ದೇಶಿಸಿದ 'ವಿಐಪಿ' ಚಿತ್ರದ ಐದು ಮಂದಿ ಹೀರೋಗಳ ಪೈಕಿ ಆದಿ ಕೂಡ ಒಬ್ಬನಾಗಿದ್ದ. ಆದರೆ ಶೂಟಿಂಗ್ ಮುಗಿಯುವ ಮೊದಲೇ 'ಐಟಮ್' ಡ್ಯಾನ್ಸಿಗೆಂದು ಬಂದಿದ್ದ ಅರುಣಾ ಅಲಿಯಾಸ್ ಅನೂಪಾ ಎಂಬಾಕೆಯನ್ನು ಪಟಾಯಿಸಿದ. ಆದರೆ ಅನೂಪಾ ಚಾಲಾಕಿ ಹೆಣ್ಣು. ಯಾವತ್ತು ಆದಿ ಗಂಟು ಬಿದ್ದನೋ ಉಪಾಯವಾಗಿ ತನ್ನ ಅಕ್ಕನನ್ನು ಮುಂದೆ ಬಿಟ್ಟು ಮದುವೆಯ ಪ್ರಸ್ತಾಪ ತೇಲಿಬಿಟ್ಟಳು. ಮೈಸೂರಿನ ದೇವಸ್ಥಾನವೊಂದರಲ್ಲಿ ಮದುವೆಯೂ ನಡೆದುಹೋಯ್ತು.

ಮೊದಲ ಪತ್ನಿಯಿಂದ ಇನ್ನೂ ಡೈವೋರ್ಸ್ ಸಿಗುವ ಮೊದಲೇ ರಹಸ್ಯವಾಗಿ ಎರಡನೇ ಮದುವೆ ಮಾಡಿಕೊಂಡ ಆದಿ ಅದರ ಖರ್ಚಿಗೆಂದು ತನ್ನ

▶▶▶

ಅಪ್ಪನಿಂದ ಬಂದ ಅನುವಂಶಿಕ ವಿಕೃತಿ?



ಮೈಸೂರು ಲೋಕೇಶ್ ಎಂಬ ಹಾಸ್ಯನಟನನ್ನು ಕನ್ನಡಿಗರಾಗಲಿ, ಗಾಂಧಿನಗರವಾಗಲಿ ಸುಲಭಕ್ಕೆ ಮರೆಯುವಂತಿಲ್ಲ. ಕನ್ನಡದ ಸರಿಸುಮಾರು ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಗೆನಟನಾಗಿ, ಕೆಲವೊಮ್ಮೆ ವಿಲನ್ ಆಗಿ ನಟಿಸಿದ ಮೈಸೂರು ಲೋಕೇಶ್‌ರ ಮಗನಾದ ಆದಿ ಲೋಕೇಶ್‌ಗೆ ತನ್ನ ತಂದೆಯ ದುರಂತವೊಂದೇ ಪಾಠವಾಗಬೇಕಿತ್ತು.

ಪಾರ್ವತಿ ಎಂಬ ಕೇರಳದ ಹೆಂಗಸನ್ನು ಮದುವೆಯಾಗಿದ್ದ ಮೈಸೂರು ಲೋಕೇಶ್ ಆತ್ಮಹತ್ಯೆಗೆ ಯತ್ನಿಸಿದ್ದು 1992 ರ ಏಪ್ರಿಲ್ 14 ರಂದು. ಅದೂ ಡಿಂಗ್ರಿ ನಾಗರಾಜ್ ಎಂಬ ಮತ್ತೊಬ್ಬ ಹಾಸ್ಯನಟನ ಪತ್ನಿ ಸರ್ವಮಂಗಳ ಎಂಬ ಕಂಠದಾನ ಕಲಾವಿದೆಯ ಜೊತೆ.

ಇಬ್ಬರಿಗೂ ಬೇರೆಬೇರೆ ಮದುವೆಗಳಾಗಿದ್ದವು. ಮಕ್ಕಳಿದ್ದರು. ಇಬ್ಬರಿಗೂ ಪ್ರತ್ಯೇಕ ಸಂಸಾರಗಳಿದ್ದವು. ಹೀಗಿದ್ದೂ ಹೊಸಪೇಟೆ ಸಮೀಪದ ತುಂಗಭದ್ರಾ ಡ್ಯಾಮಿನ ಹೋಟೆಲ್ ಮಯೂರ್ ವಿಜಯನಗರದ ಎರಡನೇ ನಂಬರಿನ ಕೋಣೆಯಲ್ಲಿ ಮೈಸೂರು ಲೋಕೇಶ್ ಮತ್ತು ಸರ್ವಮಂಗಳಾ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದರು. ವಿಸ್ಕಿಯ ಜೊತೆ ಕ್ರಿಮಿನಾಶಕ ಬೆರೆಸಿ ಕುಡಿದಿದ್ದ ಇಬ್ಬರ ಪೈಕಿ ಮೈಸೂರು ಲೋಕೇಶ್ ಮಾರನೇ ದಿನ ಬೆಳಿಗ್ಗೆ ಬೆಂಗಳೂರಿನ ಸೆಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರೆ ಸರ್ವಮಂಗಳ ಅದ್ಹೇಗೋ ಬದುಕುಳಿದು ಬಿಟ್ಟಳು.

ಆತ್ಮಹತ್ಯೆಗೆ ಸಂಚು ಹೂಡಿದ ಕೇಸು ಆಕೆಯ ಮೇಲೆ ಬತ್ತಾದರೂ ಆಕೆ ಕೂಡ ಕೆಲವೇ ವರ್ಷಗಳಲ್ಲಿ ಕುಡಿಕುಡಿದು ಸತ್ತುಹೋದಳು. ಬಹುಶಃ ತಂದೆಯ ದುರಂತ ಸಾವಾದಾಗ ಆದಿ ಇನ್ನೂ ಹುಡುಗನಾಗಿದ್ದ. ತಾಯಿಯ ಕಷ್ಟಕಾರ್ಪಣ್ಯಗಳನ್ನೆಲ್ಲ ನೋಡುತ್ತಲೇ ಬೆಳೆದ. ಅಕ್ಕ ಪವಿತ್ರಾ ಲೋಕೇಶ್‌ಳ ಮದುವೆ ಮುರಿದು ಬಿದ್ದ ಆಘಾತವನ್ನೂ ಅನುಭವಿಸಿದ್ದ. ಹೀಗಿದ್ದೂ ಅನೇಕಾನೇಕ ಹೆಣ್ಣುಮಕ್ಕಳ ಬಾಳಿಗೆ ಬೆಂಕಿಯಿಡುತ್ತಲೇ ಬಂದ.



ಸರ್ವಮಂಗಳ

ವಿಪರ್ಯಾಸ ಹೇಗಿದೆಯೆಂದರೆ ಈಗ ವಂಚಿತಳಾದ ಶಾಲಿನಿಯನ್ನು ಕರೆದೊಯ್ದು ಆದಿ ತನ್ನ ತಾಯಿ ಪಾರ್ವತಮ್ಮನವರಿಗೆ ಪರಿಚಯಿಸಿದ್ದ. ಹಾಗೇ ಮಗನ ಸಂಗಕ್ಕೆ ಬಿದ್ದಿದ್ದ ಶಾಲಿನಿಗೆ ತಾಯಿ ಪಾರ್ವತಮ್ಮ 'ನೋಡು ನನ್ನ ಮಗ ಎಂಥವನು ಅನ್ನೋದು ನಿನಗೆ ಗೊತ್ತಿಲ್ಲ. ಆತನ್ನ ನಂಬಿ ಸುಮ್ಮನೇ ಲೈಫ್ ಹಾಳು ಮಾಡಿಕೊಳ್ಳಬೇಡ....' ಎಂದು ಬುದ್ಧಿ ಮಾತು ಹೇಳಿದ್ದರು. ಒಬ್ಬ ತಾಯಿಯೇ ತನ್ನ ಮಗನ ದುಷ್ಟತನದ ಬಗ್ಗೆ ಇಂಥಾ ಮಾತು ಹೇಳುತ್ತಾಳೆಂದರೆ ಆದಿಯ ವ್ಯಕ್ತಿತ್ವ ಇನ್ನೆಂಥದ್ದಿರಬೇಡ?

ಇದೇ ಆದಿ ತನ್ನ ತಾಯಿಗೂ ಹಿಂಸೆ ಕೊಡುತ್ತಿದ್ದನೆಂದು ಆತನ ಮೊದಲ ಪತ್ನಿ ಹೇಳುತ್ತಾಳೆ. ಇನ್ನೂ ಸಾಯದೇ ಏಕೆ ಬದುಕಿದ್ದೀಯಾ? ಎಂದು ತನ್ನ ತಾಯಿಯನ್ನೇ ಹಿಂಸಿಸುತ್ತಿದ್ದನಂತೆ ಆದಿ. ವಿಕೃತಿ ಎಂಬುದು ಅನುವಂಶಿಕವಾಗಿ ಬಂದಿತ್ತೆ?

ದುಬೈ ಆಂಟಿಯ ಜೊತೆ ಇಂಟರ್‌ನೆಟ್ ಪ್ರಣಯ



ಹೀಗೆ ಹಲವಾರು ಯುವತಿಯರೊಂದಿಗೆ ಒಟ್ಟೊಟ್ಟಿಗೇ ಚಕ್ಕಂದಕ್ಕಿಳಿದ ಆದಿ ಲೋಕೇಶ್ ಇದೆಲ್ಲದರ ಮಧ್ಯೆಯೇ ದುಬೈನಲ್ಲಿದ್ದ ಕೂರ್ಗಿ ಹೆಂಗಸು ಸೌಮ್ಯ ಎಂಬಾಕೆಯ ಜೊತೆ ಕದ್ದೂಮುಚ್ಚಿ ರೋಮಾನ್ಸ್ ಶುರುಹಚ್ಚಿಕೊಂಡಿದ್ದು ಇತ್ತೀಚೆಗೆ.

ಆಕೆ ಇಬ್ಬರು ಮಕ್ಕಳ ತಾಯಿ. ಆಕೆಯ ಪತಿ ಕೂಡ ಎಮಿರೇಟ್ಸ್‌ನ ಕಂಪೆನಿಯೊಂದರ ಉದ್ಯೋಗಿ. ಆಕೆಯ ಜೊತೆ ಇಂಟರ್‌ನೆಟ್ ರೋಮಾನ್ಸ್ ಶುರುವಿಟ್ಟುಕೊಂಡ ಆದಿ ಇಲ್ಲಿಂದ ತಾನೊಬ್ಬ ಸೆಲೆಬ್ರಿಟಿಯೆಂದೂ, ನಾನು ತುಂಬಾ ರೋಮ್ಯಾಂಟಿಕ್ ಎಂದೂ ಏನೆಲ್ಲಾ ಮಾಡ್ತೀನಿ ಗೊತ್ತಾ.....? ಇತ್ಯಾದಿಯಾಗಿ ಅಶ್ಲೀಲ ಸಂಭಾಷಣೆ ನಡೆಸಿದ ಬಗ್ಗೆ ದಾಖಲೆಗಳಿವೆ.

ಎರಡನೇ ಮದುವೆಯಾದ ನಂತರವೂ ಯಾರದೋ ಪತ್ನಿ, ಇಬ್ಬರು ಮಕ್ಕಳ ತಾಯಿಯ ಜೊತೆ ಇಂಥಾ ಭಾನಗಡಿಗಿಳಿದ ಆದಿ ಕೊಡಗಿನಲ್ಲಿದ್ದ ಆಕೆಯ ಆಸ್ತಿಯನ್ನೂ ಲಪಟಾಯಿಸಲು ಹವಣಿಸಿದ್ದು ಆತನ ದುಷ್ಟತನಕ್ಕೆ ಮತ್ತೊಂದು ಉದಾಹರಣೆಯಷ್ಟೇ.

ಷ್ಟು ಶ್ರೇಯಸಿ ಶಾಲಿನಿಯ ಒಡವೆಗಳನ್ನು ಟ್ಟಿದ್ದ ಇದಷ್ಟಲ್ಲಾ ನಾಳೆ ತನ್ನನ್ನು ವೆಯಾಗುತ್ತಾನೆಂದು ನಂಬಿದ್ದ ಶಾಲಿನಿಗೆ ಎಂಥಾ ಕಾದಿತ್ತೆಂದರೆ 2009 ಆಗಸ್ಟ್ ಹೊತ್ತಿಗೆ ಲಿನ ಪತ್ರಿಕೆಯೊಂದರಲ್ಲಿ ಆದಿ–ಅನೂಪ ವೆಯಾದ ವರದಿ ಫೋಟೋ ಸಮೇತ ಟ್ಟು!

ಕ್ಷಣವೇ ಆದಿಯನ್ನು ಹಿಡಿದು ಕೇಳಿದರೆ ಆತನ ಮೇ ಬೇರೆಯಾಗಿತ್ತು. 'ನಿನ್ನ ಕ್ಯಾರೆಕ್ಟರ್ ಸರಿ ಇಲ್ಲ ಬೇರೆ ಮದುವೆಯಾದೆ' ಎಂದು ಒಮ್ಮೆ ರ್ ಹೊಡೆದರೆ ಮತ್ತೊಮ್ಮೆ 'ಆಗೇನೋ ನ್ನೆ ನಿಜ. ಆದರೆ ಈಗ ನಾನು ನಿರ್ಧಾರವನ್ನು ಸಿದ್ದೇನೆ...' ಎನ್ನುತ್ತಿದ್ದ. ಹಾಳಾಗಲಿ ನನ್ನ ಗಳನ್ನಾದರೂ ಹಿಂತಿರುಗಿಸು ಎಂದು ಶಾಲಿನಿ ಟ್ಟರೆ 'ಈಗ ನನ್ನ ಬಳಿ ದುಡ್ಡಿಲ್ಲ, ಸಿಕ್ಕಾಗ ಬಿಡಿಸಿಕೊಡ್ತೀನಿ' ಎನ್ನುತ್ತಿದ್ದ.

ಹೊತ್ತಿಗಾಗಲೇ ಶಾಲಿನಿಗೆ ಒಂದಲ್ಲ ನಾಲ್ಕು ಅಬಾರ್ಷನ್ ಮಾಡಿಸಿದ್ದ. ಸಾಮಾನ್ಯವಾಗಿ ಗರು ಪ್ರೇಯಸಿಗೆ ಒಡವೆ ಕೊಡಿಸುವುದುಂಟೇ ಈತ ಆಕೆಯಿಂದಲೇ ಒಡವೆ ದೋಚಿದ್ದು ಪ. ಆದಿ ಲೋಕೇಶ್ ಎಂಥಾ ಅಸಹ್ಯದ ಷ್ಯ ಎಂಬುದಕ್ಕೆ ಇದಕ್ಕಿಂತ ಬೇಕೆ?

ನ್ನೂ ದಾರುಣವೆಂದರೆ ಮದುವೆಯಾದ ಹಾಗೇ ಆದಿ ವರದಕ್ಷಿಣೆ ಕಿರುಕುಳ ಶುರು ಂಡ. ಬೆಂಗಳೂರಿನ ಆರ್.ಟಿ. ನಗರದಲ್ಲಿ ಗ್ಯದ ಮನೆಯೊಂದನ್ನು ಹಿಡಿದು ಅನುಷಾಳನ್ನು ತ್ತ ಆದಿ ಆಕೆಯನ್ನು ನಡುರಾತ್ರಿಯೆದ್ದು ಬುತ್ತಿದ್ದ. ಐದು ಲಕ್ಷ ತಾ ಎಂದು ಪದೇಪದೇ ಸುತ್ತಿದ್ದ. ರೋಸತ್ತ ಅನುಷಾ ಇಲ್ಲಿಗೆ ಎರಡು ಹಿಂದಷ್ಟೇ ಆದಿ ವಿರುದ್ಧ ವರದಕ್ಷಿಣೆ ಳದ ದೂರು ಕೊಟ್ಟಳು. ಆಗಲೂ ವಕೀಲರ ಪೊಲೀಸ್ ಠಾಣೆಗೆ ಬಂದ ಆದಿ ಇನ್ನು ದೆ ತಾನು ಕಾಟ ಕೊಡೋಲ್ಲ ಎಂದು ಳಿಕೆ ಬರೆದುಕೊಟ್ಟಿದ್ದ.

ತ್ತ ಮೊದಲ ಪತ್ನಿಗೆ ದೋಖಾ, ಇತ್ತ ಎರಡನೇ ಗೆ ಹಿಂಸೆ, ಜೊತೆಜೊತೆಗೇ ನಂಬಿ ಒಡವೆ ದ್ದ ಶಾಲಿನಿಯನ್ನೂ ಬೀದಿಗೆ ಹಾಕಿದ್ದ ಆದಿ ಸೆಕ್ಸ್ ಮೇನಿಯಾಕ್ ಎಂಬುದು ಆತನ ದ ಪ್ರತಿ ಹೆಣ್ಣಿಗೂ ಅರ್ಥವಾಗಬೇಕಿತ್ತು. ಈ ರ ಮಧ್ಯೆ ಮೈಸೂರಿನ ರಶ್ಮಿ (ಹೆಸರು ದೆ) ಎಂಬ ಯುವತಿಗೆ ಹೀರೋಯಿನ್ ಸ್ತೀನಿ ಎಂದು ಆದಿ ವಂಚಿಸಿದ್ದ. ಬೆಂಗಳೂರಿನ ಾ ಎಂಬ ಮತ್ತೊಬ್ಬಳು ಮಾಡೆಲ್, ನರದ ಲತಾ ಎಂಬ ಯುವತಿಯರ ಜೊತೆಗೂ ವೇಳೆ ಚಕ್ಕಂದಕ್ಕಿಳಿದಿದ್ದ.

ದಿಯ ಇಂಥ ಕ್ರೌರ್ಯದ ಪರಮಾವಧಿಯೇ ಯ ಒಡವೆ ರಾದ್ಧಾಂತ. ಬದುಕೇನೋ ಮುತು ಕನಿಷ್ಠ ಒಡವೆಗಳನ್ನಾದರೂ ಂಗಿಸು ಎಂದು ಶಾಲಿನಿ ಕಣ್ಣೀರಿಟ್ಟರೆ ಆದಿ ಜುಟ್ಟು ಹಿಡಿದು ಹೊರದಬ್ಬಿದ್ದ. ಇದೇ ಕ್ಕೆ ಬಿದ್ದ ಶಾಲಿನಿ ತನ್ನ ಸಂಬಂಧಿಯೊಬ್ಬರ ಕಣ್ಣೀರಿಟ್ಟು ಆದಿ ಮಾಡಿದ ವಂಚನೆಯನ್ನು ಟ್ಟಿದ್ದಾಳೆ. ಆರ್.ಟಿ. ನಗರ ಪೊಲೀಸ್ ಲ್ಲಿ ದೂರನ್ನೂ ದಾಖಲಿಸಿದ್ದಾಳೆ. ಇನ್ಸ್‌ಪೆಕ್ಟರ್ ಆದಿಯನ್ನು ಕರೆಸಿದ್ದೇ ಅಲ್ಲಾಡುವುದಕ್ಕೂ 85 ಗ್ರಾಂ ಚಿನ್ನಾಭರಣಗಳನ್ನು ವಸೂಲಿ ದ್ದಾರೆ. ಇನ್ನೆಲ್ಲಿ ತನ್ನನ್ನು ಜೈಲಿಗೆ ಹಾಕುತ್ತಾರೋ ಕಂಗಾಲಾದ ಆದಿ ಪೊಲೀಸರ ಮುಂದೆ ಯ ಕಾಲಿಗೆ ಬಿದ್ದ, ತನ್ನ ಮರ್ಯಾದೆ ಉಳಿಸು ಗೋಳಿಡುತ್ತಿದ್ದ.


ಗೆ 85 ಗ್ರಾಂ ಒಡವೆ ಒಪ್ಪಿಸಿ ಜೈಲು ಪ್ಪುದನ್ನು ತಪ್ಪಿಸಿಕೊಂಡ ಆದಿಯ ಬಗ್ಗೆ ಸಲ್ಲಿ ಸುದ್ದಿ ಪ್ರಕಟವಾಗುತ್ತಿದ್ದಂತೆ ಆತನ ಂದೇ ಕಣ್ಣಾಮುಚ್ಚಾಲೆ ಪ್ರಕರಣಗಳು ಹೊರಬರಲಾರಂಭಿಸಿವೆ. ಮಾನ ಮುಚ್ಚಿಕೊಳ್ಳಬೇಕಲ್ಲ; ಮೇಲೆ ಬಿದ್ದು ಆರ್.ಟಿ. ನಗರ ದ ವಿರುದ್ಧ ದೂರು ಕೊಟ್ಟಿದ್ದಾನೆ. ಅದೂ ಗ್ರಾಂ ಹೆಚ್ಚಿಗೆ ವಸೂಲಿ ಮಾಡಿದ ಬಗ್ಗೆ,

ಮೈಸೂರು ಡೀಸಿಯ ಮರಕೋತಿ ಆಟ


ಮಣಿವಣ್ಣನ್

ತನ್ನನ್ನು ಮೈಸೂರಿಗೆ ಕರೆತಂದು ಜಿಲ್ಲಾಧಿಕಾರಿ, ಕಾರ್ಪೊರೇಷನ್ ಕಮೀಷನರ್‌ಗಿರಿ ಮತ್ತು ಮುಡಾ ಅಧ್ಯಕ್ಷಗಾದಿಯನ್ನು ಒಟ್ಟೊಟ್ಟಿಗೆ ಕರುಣಿಸಿದ ಬಿಜೆಪಿಯ ಋಣವನ್ನು ಜಾತಿ ಕೆಟ್ಟಾದರೂ ತೀರಿಸಲೇಬೇಕೆಂಬ ಮಣಿವಣ್ಣನ್ ದುರ್ಬುದ್ಧಿಗೆ ಹುಣಸೂರೆಂಬ ಊರೇಕೆ ದಂಡ ಕಟ್ಟಬೇಕು? ಕಾಯ್ದೆ ಕಾನೂನು ಬಿಜೆಪಿಗೇ ಒಂದು ಇತರರಿಗೆ ಮತ್ತೊಂದಿರುತ್ತಾ?

ಮೈಸೂರಿನ ಜನಕ್ಕಿದು ಅರ್ಥವಾಗದ ಪ್ರಶ್ನೆ. ಸದ್ಯ ಹೌಸಿಂಗ್ ಬೋರ್ಡ್ ಅಧ್ಯಕ್ಷನಾಗಿರುವ ಜಿ.ಟಿ. ದೇವೇಗೌಡನ ಕುಮ್ಮಕ್ಕು ಮತ್ತು ಬಿಜೆಪಿ ಸರ್ಕಾರದ ಮರ್ಜಿಗೆ ಬಿದ್ದ ಡೀಸಿ ಮಣಿವಣ್ಣನ್ ಪಕ್ಷಾಂತರ ನಿಷೇಧ ಕಾಯ್ದೆಗೇ ಕೊಳ್ಳಿಯಿಟ್ಟಿದ್ದಾರೆ. ಹೀಗೆ ಮಣಿವಣ್ಣನ್ ಕುತಂತ್ರಕ್ಕೆ ಸಿಲುಕಿದ ಹುಣಸೂರು ಪುರಸಭೆಯ ಐವರು ಕೌನ್ಸಿಲರ್‌ಗಳೇ ಇಡೀ ಪ್ರಕರಣದ ಖಳನಾಯಕರು. ಮೂಲತಃ ಜೆಡಿಎಸ್‌ನಿಂದ ಗೆದ್ದು ರಾತ್ರೋರಾತ್ರಿ ಪಕ್ಷ ನಿಷ್ಠೆ ಬದಲಿಸಿದ ಈ ಐವರ ವಿರುದ್ಧ ಪಕ್ಷಾಂತರ ನಿಷೇಧ ಕಾಯ್ದೆಯಡಿ ಮಣಿವಣ್ಣನ್ ಕ್ರಮ ಜರುಗಿಸಬೇಕಿತ್ತು. ಒಂದೇ ತಿಂಗಳಲ್ಲಿ ಅವರ ಕೌನ್ಸಿಲರ್‌ಗಿರಿಯನ್ನೂ ಕಳೆಯಬೇಕಿತ್ತು. ಆದರೆ ಎರಡು ವರ್ಷಗಳಾಗುತ್ತಾ ಬಂದರೂ ಮಣಿವಣ್ಣನ್ ಸಾಹೇಬರಿಗೆ ತಾನೊಬ್ಬ ಬಿಜೆಪಿ ಗುಲಾಮನಲ್ಲದೇ ಶಾಸನಬದ್ಧ ಅಧಿಕಾರಿ ಎಂಬುದೇ ನೆನಪಾಗುತ್ತಿಲ್ಲ.


ಜಿ.ಟಿ. ದೇವೇಗೌಡ


ಚಿಕ್ಕಮಾದು

ಅದು ಹುಣಸೂರು ಪುರಸಭೆಯ ದುರಂತ. 2007ರ ಸೆಪ್ಟೆಂಬರ್ 28 ರಂದು ಹುಣಸೂರು ಪುರಸಭೆಗೆ ಚುನಾವಣೆ ನಡೆದು ಜೆಡಿಎಸ್‌ನ 14 ಮಂದಿ ಕೌನ್ಸಿಲರ್‌ಗಳು ಗೆದ್ದರು. ಒಟ್ಟು 29 ಸ್ಥಾನಗಳ ಪೈಕಿ ನಾಲ್ಕು ಮಂದಿ ಪಕ್ಷೇತರರೂ ಹನ್ನೊಂದು ಮಂದಿ ಕಾಂಗ್ರೆಸ್ ಕೌನ್ಸಿಲರ್‌ಗಳೂ ಗೆದ್ದು ಜೆಡಿಎಸ್‌ನ ಎಚ್.ಎನ್. ಚಂದ್ರಶೇಖರ್ ಅಧ್ಯಕ್ಷರಾಗುವುದು ಗ್ಯಾರಂಟಿಯಾಗಿತ್ತು. ಎಲ್ಲಾ ಜೆಡಿಎಸ್ ಕೌನ್ಸಿಲರ್‌ಗಳಿಗೂ ದೇವೇಗೌಡರ ಸಹಿಯಿದ್ದ ವಿಪ್ಪನ್ನು ಕೊಟ್ಟಾಗಿತ್ತು. ಹುಣಸೂರಿನ ಜೆಡಿಎಸ್ ನಾಯಕ ಲಾರಿ ಸ್ವಾಮಿಗೌಡರೇ ಮನೆಮನೆಗೂ ಹೋಗಿ ವಿಪ್ ಕೊಟ್ಟು ಬಂದಿದ್ದರು.

ಆ ಹೊತ್ತಿಗೆ ಹುಣಸೂರು ಜೆಡಿಎಸ್‌ಗೆ ಅಧಿಪತಿಗಳಂತಿದ್ದದ್ದು ಜಿ.ಟಿ. ದೇವೇಗೌಡ ಮತ್ತು ಚಿಕ್ಕಮಾದು. ಆ ಹೊತ್ತಿಗಾಗಲೇ ದೇವೇಗೌಡರ ಜೊತೆ ಸಂಬಂಧ ಕೆಡಿಸಿಕೊಂಡಿದ್ದ ಜೀಟಿಗೆ ಹೇಗೂ ಮುಂಬರುವ ಚುನಾವಣೆಯಲ್ಲಿ ತನಗೆ ಟಿಕೆಟ್ ಗ್ಯಾರಂಟಿಯಿಲ್ಲವಾದ್ದರಿಂದ ಜೆಡಿಎಸ್‌ಗೊಂದು ಏಟು ಕೊಟ್ಟೇ ಬಿಡೋಣ ಎಂದಿದ್ದೇ ತನ್ನ ಬೆಂಬಲಿಗರಾದ ಐವರು ಕೌನ್ಸಿಲರ್‌ಗಳಿಂದ 'ದೋಖಾ' ಮಾಡಿಸಿಬಿಟ್ಟ.

ಆವತ್ತು ಜೆಡಿಎಸ್‌ಗೆ ದ್ರೋಹ ಬಗೆದು ಕಾಂಗ್ರೆಸ್ಸಿನ ಸರೋಜಾ ಬಾಯಿಯನ್ನು ಅಧ್ಯಕ್ಷೆಯನ್ನಾಗಿ ಮಾಡಲು ನೆರವಾದ ಐವರು ಕೌನ್ಸಿಲರ್‌ಗಳೆಂದರೆ ಚಂದ್ರನಾಯ್ಕ, ಎಚ್.ಪಿ. ಸುರೇಶ್‌ಕುಮಾರ್, ಕೆ.ಪಿ. ಕೃಷ್ಣಾಚಾರಿ, ಪ್ರೇಮಾ ರಮೇಶ್ ಮತ್ತು ಧರ್ಮರಾಜು!

ವಿಪ್ ಜಾರಿಯಾಗಿದ್ದರೂ ಕಾಂಗ್ರೆಸ್ಸಿಗೆ ಓಟು ಕೊಟ್ಟ ಈ ಐವರು ಜೀಟಿ ಚೇಲಾಗಳ ಕೌನ್ಸಿಲರ್‌ಗಿರಿ ಕಾನೂನು ಪ್ರಕಾರವೇ ರದ್ದಾಗಬೇಕಿತ್ತು. ಪಕ್ಕದ ಚಾಮರಾಜನಗರ ಮತ್ತು ಮಂಡ್ಯ ನಗರಸಭೆಗಳಲ್ಲೂ ಇದೇ ರೀತಿ ಕ್ರಾಸ್ ಓಟ್ ಮಾಡಿದ ಕೌನ್ಸಿಲರ್‌ಗಳನ್ನು ಅಲ್ಲಿನ ಜಿಲ್ಲಾಧಿಕಾರಿಗಳು ಒಂದೇ ತಿಂಗಳಲ್ಲಿ ವಜಾಗೊಳಿಸಿದ್ದರು. ಆದರೆ ಮೈಸೂರು ಜಿಲ್ಲಾಧಿಕಾರಿ ಮಣಿವಣ್ಣನ್ ಸಾಹೇಬರಿಗೆ ವಿಪರೀತ ಬಿಜೆಪಿ ನಿಷ್ಠೆ. ಕರಂದ್ಲಾಜೆಯ ಮನೆಮಗನಂತೆ ಬಿಜೆಪಿ ಜೀತಕ್ಕೆ ನಿಂತಿದ್ದ ಮಣಿವಣ್ಣನ್‌ಗೆ ಬಿಜೆಪಿಯ ಮತ್ತೊಬ್ಬ ಅಧಿಪತಿ ಜೀಟಿ ದೇವೇಗೌಡರ ಆಣತಿಯೂ ಇತ್ತಲ್ಲ–

ಕ್ರಾಸ್ ಓಟ್ ಮಾಡಿದ ಐವರು ಜೆಡಿಎಸ್ ಕೌನ್ಸಿಲರ್‌ಗಳ ಸದಸ್ಯತ್ವ ರದ್ದುಪಡಿಸುವಂತೆ ಹುಣಸೂರಿನ ಜೆಡಿಎಸ್ ಅಧ್ಯಕ್ಷ ಹಜರತ್ ಜಾನ್ ಮತ್ತು ಸೋತ ಅಧ್ಯಕ್ಷಾಕಾಂಕ್ಷಿ ಚಂದ್ರಶೇಖರ್ ಖುದ್ದಾಗಿ ಡೀಸಿಗೆ ದೂರು ಕೊಟ್ಟಿದ್ದರು. ಕಾಯ್ದೆ ಪ್ರಕಾರ ಒಂದು ತಿಂಗಳೊಳಗೆ ಪಕ್ಷಾಂತರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಆದರೆ ಎರಡು ವರ್ಷಗಳಾಗುತ್ತಾ ಬಂದರೂ ಮಣಿವಣ್ಣನ್ ಸಾಹೇಬರು ಕಾಲ ನೂಕುತ್ತಲೇ ಬಂದರೇ ಹೊರತು ಕೌನ್ಸಿಲರ್‌ಗಳನ್ನು ವಜಾಗೊಳಿಸಲಿಲ್ಲ.

ಈ ಮಧ್ಯೆ ವಿಧಾನಸಭೆ ಚುನಾವಣೆ ಬೇರೆ ಬಂತು. ಕಾಂಗ್ರೆಸ್‌ನ ಎಚ್.ಪಿ. ಮಂಜುನಾಥ್ ಜೀಟಿಯನ್ನು 23 ಸಾವಿರ ಮತಗಳ ಅಂತರದಿಂದ ಸೋಲಿಸಿಬಿಟ್ಟಿದ್ದ. ಜೆಡಿಎಸ್‌ನ ಚಿಕ್ಕಮಾದು ಮತ್ತು ಬಿಜೆಪಿಯ ಜೀಟಿಯಂಥ ದೈತ್ಯರ ಮುಂದೆ ನಿನ್ನೆ ಮೊನ್ನೆಯ ಪೋರ ಮಂಜುನಾಥ್ ಗೆದ್ದಿದ್ದು ಎಂಥಾ ಆಘಾತಕಾರಿಯಾಗಿತ್ತೆಂದರೆ; ಒಂದೋ ನಾನು ಆಳಬೇಕು ಇಲ್ಲಾಂದ್ರೆ ನೀನು ಆಳಬೇಕು. ಈ ಮೂರನೇ ವ್ಯಕ್ತಿಗೆ ನಾವೇಕೆ ಬಿಟ್ಟುಕೊಡಬೇಕು? ಎಂದಿದ್ದೇ ಜೀಟಿ ಮತ್ತು ಚಿಕ್ಕಮಾದು ಒಂದಾಗಿಬಿಟ್ಟರು. 2008 ರ ಡಿಸೆಂಬರ್ 11ಕ್ಕೆ ಕಾಂಗ್ರೆಸ್ಸಿನ ಸರೋಜಾಬಾಯಿಯನ್ನು ಇಳಿಸಿದ್ದೇ ಆ ಜಾಗಕ್ಕೆ ಎಚ್.ಎನ್. ಚಂದ್ರಶೇಖರ್‌ನನ್ನು ತಂದರು.

ಏನೇ ಆದರೂ ಪಕ್ಷಾಂತರ ನಿಷೇಧ ಕಾಯ್ದೆ ಪ್ರಕಾರ ಐವರ ಕೌನ್ಸಿಲರ್‌ಗಿರಿ ಹೋಗಬೇಕಲ್ಲ. ವಿಚಿತ್ರವೆಂದರೆ ಆವತ್ತು ದೂರು ಕೊಟ್ಟಿದ್ದ ಚಂದ್ರಶೇಖರ್‌ನೇ ಈಗ ನಾವು ರಾಜಿಯಾಗಿದ್ದೀವಿ ಪ್ರಕರಣದ ವಿಚಾರಣೆ ನಿಲ್ಲಿಸಿಬಿಡಿ ಎಂದು ಡೀಸಿಗೆ ಪೂಸಿ ಹೊಡೆಯುತ್ತಿದ್ದಾನೆ. ಹಾಗಂತ ಹುಣಸೂರಿನ ಜನ ಬಿಡಬೇಕಲ್ಲ.

ಅಲ್ಲಿನ ವಕೀಲರು, ಜನಪರ ಸಂಘಟನೆಗಳೆಲ್ಲ ಈಗ ಡೀಸಿಯ ನಿಷ್ಕ್ರಿಯತೆಯ ವಿರುದ್ಧವೇ ಹೋರಾಟಕ್ಕಿಳಿದಿದ್ದಾರೆ ರಾಜ್ಯಪಾಲರು, ಲೋಕಾಯುಕ್ತ ಎಲ್ಲರಿಗೂ ದೂರಿನ ಮೇಲೆ ದೂರು ಕೊಡುತ್ತಾ ಬಂದರೂ ಐವರು ಜೀಟಿ ಚೇಲಾ ಕೌನ್ಸಿಲರ್‌ಗಳ ತಲೆ ಕಾಯಲು ನಿಂತ ಡೀಸಿ ಮಣಿವಣ್ಣನ್ ಈ ರೀತಿ ಕಾನೂನನ್ನೇ ಮಾರಾಟಕ್ಕಿಟ್ಟರೆ ಗತಿ ಏನು?

ಕಾಯ್ದೆಯನ್ನು ಪಾಲಿಸಬೇಕಿದ್ದ ಡೀಸಿಯೇ ಅದನ್ನು ಉಲ್ಲಂಘಿಸುತ್ತಾನೆಂದರೆ ಶಿಕ್ಷಿಸುವವರ್ಯಾರು? ಮಣಿವಣ್ಣನ್ ಅರ್ಥಾತ್ moneyವಣ್ಣನ್ ಬಿಜೆಪಿ ನಿಷ್ಠೆಗೆ ಕಾನೂನು ಬಲಿಯಾಗಬೇಕೇ? ●



ಬಾಬಾ ಬುಡನ್‌ಗಿರಿ: ವೈದಿಕ ದತ್ತನಿಗೆ ಮೊದಲ ನರಬಲಿ

ಎಲ್ಲಾ ನಿರೀಕ್ಷೆಯಂತೆಯೇ ನಡೆದಿದೆ!



ಬಜೆಪಿಯ ಸ್ವಾರ್ಥ ರಾಜಕಾರಣದ ಕಾರಣದಿಂದಾಗಿ ವೈದಿಕ ದತ್ತನಿಗೆ ಮೊದಲ ಬಾರಿ ರಕ್ತ ಸಿಂಚನವಾಗಿದೆ. ಚಿಕ್ಕಮಗಳೂರಿನ ಕುದಿ ರಕ್ತದ ಚಿಡ್ಡಿ ದರಬಾರು ಅಮಾಯಕ ದಲಿತ ಯುವಕನನ್ನು ಬಲಿ ತೆಗೆದುಕೊಂಡಿದೆ. ಮೂಡಿಗೆರೆ ಪಟ್ಟಣದಲ್ಲಿ ನಡೆದಿರುವ ಈ ನರಬಲಿಯನ್ನು ಕಂಡು ಜನರು ದಂಗಾಗಿ ಹೋಗಿದ್ದಾರೆ.


ಚಿಡ್ಡಿಗಳ ಕಪಿ ಸೈನ್ಯದ ಆಚರಣೆಗೆ ಬಲಿಯಾದವನು ಮೂಡಿಗೆರೆಯ ಛತ್ರ ಮೈದಾನ ಬಡಾವಣೆಯ ನಾಗರಾಜು ಅವರ ಪುತ್ರ ಬಾಬು. ಈ ಬಾರಿಯ ದತ್ತಮಾಲೆ ಮತ್ತು ದತ್ತ ಜಯಂತಿಯನ್ನು ಒಂದೇ ಸಲ ಆಚರಿಸಿದ್ದು ಅದಕ್ಕಾಗಿ ಬ್ಯಾನರ್ ಕಟ್ಟಲು, ಪೋಸ್ಟರ್ ಅಂಟಿಸಲು ಬಡ ದಲಿತರನ್ನು ಸಂಘಪರಿವಾರಿಗಳು ಕರೆದುಕೊಂಡು ಹೋಗಿದ್ದರು. ಶತಶತಮಾನಗಳಿಂದ ಊರಿನ ಹೊರಗಿಟ್ಟು ಪ್ರಾಣಿಗಳಿಗಿಂತಲೂ ಕೀಳಾಗಿ ಕಂಡ ಇದೇ ಮನುವಾದಿಗಳಿಗೆ ದಲಿತರು ಈಗ ಬ್ಯಾನರ್ ಕಟ್ಟುವುದಕ್ಕೆ ಬೇಕಾಗಿದ್ದರು. ಹಾಗೆ ಬಳಕೆಯಾಗುತ್ತಿದ್ದ ಯುವಕರಲ್ಲಿ ಬಾಬು ಕೂಡ ಒಬ್ಬನಾಗಿದ್ದ.

ನವೆಂಬರ್ 26 ರ ಸಂಜೆಯ ಸಮಯದಲ್ಲಿ ಗೆಂಡೇಹಳ್ಳಿ ರಸ್ತೆಯಲ್ಲಿ ಬನಶಂಕರಿ ಟವರ್ ಎದುರು ಲಕ್ಷ್ಮಿ ವೈನ್ಸ್ ಪಕ್ಕ ಕಟ್ಟಡವೊಂದರ ಮೇಲೆ ರಸ್ತೆಗೆ ಅಡ್ಡಲಾಗಿ ಬ್ಯಾನರ್ ಕಟ್ಟಲು ಬಾಬುನನ್ನು ಹತ್ತಿಸಿದ್ದಾರೆ. ಮೇಲೇರಿದ ಬಾಬು ವಿದ್ಯುತ್ ತಂತಿ ತಗುಲಿ ಶಾಕ್‌ನಿಂದ ಕೆಳಗೆ ಬಿದ್ದು ಹಕ್ಕಿಯಂತೆ ಒದ್ದಾಡಿ ಪ್ರಾಣ ಕಳೆದುಕೊಂಡಿದ್ದಾನೆ. ಬಾಬು ಹೆಣವಾಗುತ್ತಿದ್ದಂತೆಯೇ ಅಲ್ಲಿದ್ದ ಸಂಘ ಪರಿವಾರದ ಕಾರ್ಯಕರ್ತರೆಲ್ಲ ಹೇಳ ಹೆಸರಿಲ್ಲದಂತೆ ನಾಪತ್ತೆಯಾಗಿದ್ದಾರೆ. ಮೃತ ದೇಹವನ್ನು ಆತನ ಮನೆಗೆ ತೆಗೆದುಕೊಂಡು ಹೋಗುವ ಕನಿಷ್ಠ ಕೆಲಸವನ್ನೂ ಮಾಡದೇ ಬೇಜವಾಬ್ದಾರಿ ಮೆರೆದಿದ್ದಾರೆ. ಕೊನೆಗೆ ಬೇರೆ ಯಾರೋ ಆತನ ಮೃತ ದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಮುಂದಿನ ಒಂದು ಗಂಟೆಯ ಅವಧಿಯೊಳಗೆ ಮರಣೋತ್ತರ ಪರೀಕ್ಷೆ ಮುಗಿಸಲಾಗಿದೆ. ಅಷ್ಟು ಹೊತ್ತಿಗೆ ಸಂಘಪರಿವಾರದ ಮುಖಂಡರಿಗೆ ಸುದ್ದಿ ಹೋಗಿ ಎಲ್ಲಿ ಅದು ತಮ್ಮ ತಲೆಗೆ ಸುತ್ತಿಕೊಳ್ಳುತ್ತದೆಯೋ ಎಂಬ ಭಯದಿಂದ ಆತುರಾತುರವಾಗಿ ದೇಹವನ್ನು ಸುಟ್ಟುಬಿಡಲು ಪಿತೂರಿ ಮಾಡಿದ್ದಾರೆ.



ಸಾತಿ


ಅಷ್ಟರಲ್ಲಿ ಮೂಡಿಗೆರೆ ದಲಿತ ನಾಯಕರಿಗೂ ಸುದ್ದಿ ಮುಟ್ಟಿ ಅವರೆಲ್ಲಾ ಎಚ್ಚೆತ್ತುಕೊಂಡರು. ತಮ್ಮ ಹುಡುಗನೊರ್ವನನ್ನು ಭಜರಂಗಿ ಪಡೆಗಳು ತಮ್ಮ ಸ್ವಾರ್ಥಕ್ಕಾಗಿ ಸಾಯಿಸಿದ್ದು ಅವರನ್ನು ಸಹಜವಾಗಿ ಕೆರಳಿಸಿತು. ಸಿಪಿಐನ ಕಾಮ್ರೇಡ್ ಸಾತಿ ಸುಂದರೇಶ್, ಸಿಪಿಐಎಂಎಲ್‌ನ ಕಾಮ್ರೇಡ್ ಬಿ. ರುದ್ರಯ್ಯ, ಡಿಎಸ್‌ಎಸ್‌ನ ಲೋಕವಳ್ಳಿ ರಮೇಶ್ ಸಹಿತ ನೂರಾರು ಮಂದಿ ಸ್ಥಳಕ್ಕೆ ಜಮಾಯಿಸಿ ಸಂಘಪರಿವಾರಿಗಳಿಗೆ ಬಿಸಿಮುಟ್ಟಿಸಲಾರಂಭಿಸಿದರು. ಅಲ್ಲಿ ನಡೆದ ಘಟನೆಯ ಮೂಲ ಕಾರಣವನ್ನು ಸಂಘಪರಿವಾರದ ಮುಖಂಡರು ಮುಚ್ಚಿ ಹಾಕುವ ಯತ್ನ ನಡೆಸುತ್ತಿರುವುದು ತಿಳಿಯುತ್ತಿದ್ದಂತೆಯೇ ಆಸ್ಪತ್ರೆಯ ಮುಂದೆ ರಾತ್ರಿಯೇ ಪ್ರತಿಭಟನೆ ನಡೆಸಿದರು. ನಂತರ ಅಲ್ಲಿಂದ ಬಂದು ಪೊಲೀಸ್ ಠಾಣೆ ಮುಂಭಾಗದಲ್ಲಿ ಸಂಘ ಪರಿವಾರದ ವಿರುದ್ಧ ಘೋಷಣೆ ಕೂಗಿ ಧರಣಿ ನಡೆಸಿ ತಪ್ಪಿತಸ್ಥ ಚಿಡ್ಡಿ ನಾಯಕರ ಮತ್ತು ಸರ್ಕಾರಿ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಲು ಒತ್ತಾಯಿಸಿದರು.



ರುದ್ರಯ್ಯ

ಈ ಬೆಳವಣಿಗೆಯಿಂದ ಬಜೆಪಿ ಪ್ರಾಯೋಜಿತ ವಾನರ ಪಡೆ ಕಂಗಾಲಾಯಿತು. ಘಟನೆಗೆ ಕಾರಣನೆನ್ನಲಾದ ಮನಮೋಹನ್ ಮತ್ತು ಜನಾರ್ದನ ಎಂಬ ಕಪಿ ಮುಖಂಡರ ಮೇಲೆ ದೂರು ದಾಖಲಿಸಿಕೊಳ್ಳುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು. ಆದರೆ ಗೃಹ ಮಂತ್ರಿ ವಿ.ಎಸ್. ಆಚಾರ್ಯನಿಂದ ಹಿಡಿದು ಇದ್ದಬದ್ದ [illegible] ಪೊಲೀಸರ ಮೇಲೆ ಒತ್ತಡ ತಂದು ದೂರು ದಾಖಲಿಸಿಕೊಳ್ಳದಂತೆ ನೋಡಿಕೊಂಡರು.

ಅಸಲು [illegible]



ಸಮಸ್ಯೆ ಪರಿಹರಿಸುವಂತೆ ಬೀದಿಗಿಳಿದು ಹೋರಾಟ ಮಾಡಲು ಮುಂದಾದರೆ ಹತ್ತಾರು ಕಡೆ ಅಲೆದು ಅನುಮತಿ ಪಡೆಯುವಂತೆ ಇದೇ ಜಿಲ್ಲಾಡಳಿತ ಮತ್ತು ಪೊಲೀಸರು ಒತ್ತಾಯಿಸುತ್ತಾರೆ. ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನೆ ಅಥವಾ ಕಾರ್ಯಕ್ರಮ ಮಾಡುವುದಾದರೆ, ಪಟ್ಟಣಗಳಲ್ಲಿ ಮಾಡುವುದಾದರೆ ಸಂಬಂಧಿಸಿದ ಇಲಾಖೆಗಳಿಂದ ಲಿಖಿತ ಅನುಮತಿ ಪಡೆಯುವ ನಿಯಮವನ್ನು ರೂಪಿಸಲಾಗಿದೆ. ಆದರೆ ಸಂಘಪರಿವಾರ ನಗರ ಪಟ್ಟಣಗಳ ತುಂಬೆಲ್ಲಾ ಕಂಡ ಕಂಡಲ್ಲಿ ವಿದ್ಯುತ್ ಕಂಬ, ದೂರವಾಣಿ ಕಂಬ, ಸರಕಾರಿ ಕಟ್ಟಡ ಎಲ್ಲೆಂದರಲ್ಲಿ ರಾಜಾರೋಷವಾಗಿ ಓಂ ಧ್ವಜ, ಬ್ಯಾನರ್, ಬಂಟಿಂಗ್ ಕಟ್ಟುತ್ತದೆಯಾದರೂ ಯಾವ ಇಲಾಖೆಯಿಂದಲೂ ಅನುಮತಿ ಪಡೆಯದೇ ಇರುವುದು ಆಶ್ಚರ್ಯ ತಂದಿದೆ. ಇಂತಹ ಕಾನೂನುಬಾಹಿರ ಚಟುವಟಿಕೆಗಳನ್ನು ಸಂಬಂಧಿಸಿದ ಇಲಾಖೆಗಳು ತಡೆಯುವುದಿಲ್ಲ, ಬದಲು ಸಮ್ಮತಿ ಸೂಚಿಸಿದಂತೆ ಮೌನವಾಗಿರುತ್ತವೆ. ಹೀಗಾಗಿ ದತ್ತ ಜಯಂತಿಗೆ ಪರೋಕ್ಷವಾಗಿ ಸರಕಾರಿ ಅಧಿಕಾರಿಗಳು ಬಜೆಪಿ ಪಕ್ಷದ ಏಜೆಂಟರಂತೆ ನಡೆದುಕೊಳ್ಳುತ್ತಿದ್ದಾರೆ. ಆದ್ದರಿಂದ ದತ್ತಜಯಂತಿ ಸಂದರ್ಭದಲ್ಲಿ ಸಂಘಪರಿವಾರಿಗಳು ಆಡಿದ್ದೇ ಆಟ ಎಂಬಂತಾಗಿದೆ.

ಯಾವಾಗ ದಲಿತ ಯುವಕನ ಸಾವು ಸಂಭವಿಸಿತೋ ಆ ಪ್ರಕರಣವನ್ನು ಅಲ್ಲಿಗೆ ಮುಚ್ಚಿ ಹಾಕಲು ಪ್ರಯತ್ನ ನಡೆಸಲಾಗಿದೆ. ಜನಾರ್ದನನ ಲಕ್ಷ್ಮಿ ವೈನ್ಸ್ ಶಾಪ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ವಿದ್ಯುತ್ ತಗುಲಿ ಬಾಬು ಸತ್ತಿದ್ದಾನೆ ಎಂದು ಪೊಲೀಸರು ದಾಖಲೆ ಸೃಷ್ಟಿಸುವ ಮಟ್ಟಿಗೆ ಬೆಳವಣಿಗೆಗಳು ನಡೆದಿದೆ. ಪಟ್ಟಣ ಪಂಚಾಯತಿಯು ಅನುಮತಿ ನೀಡಿರುವ ಪತ್ರವನ್ನು ರೆಡಿ ಮಾಡಿಟ್ಟು ನಿಂತಿದೆ.

ಇದೆಲ್ಲವನ್ನು ತಿಳಿದ ತಾಲ್ಲೂಕಿನ ದಲಿತ ಮುಖಂಡರು, ಪ್ರಗತಿಪರ ಸಂಘಟನೆಗಳು, ಜಾತ್ಯತೀತ ಪಕ್ಷಗಳು ಡಿಸೆಂಬರ್ 1 ರಂದು ಮೂಡಿಗೆರೆ ಬಂದ್‌ಗೆ ಕರೆ ನೀಡಿದ್ದಲ್ಲದೆ ಬಾಬುವಿಗೆ ಶ್ರದ್ಧಾಂಜಲಿ ಸಲ್ಲಿಸುವುದಾಗಿ ಪ್ರಕಟಣೆ ಹೊರಡಿಸಿದ್ದವು. ಅಷ್ಟರಲ್ಲಿ ಸಂಘ ಪರಿವಾರದ ವಾನರರ ಅರ್ಧ ಜೀವ ಹಾರಿಹೋದಂತಾಗಿದೆ. ಮರುದಿನವೇ ಪ್ರವಾಸಿ ಮಂದಿರದಲ್ಲಿ ದಲಿತ ಶಾಸಕ ಎಂ.ಪಿ. ಕುಮಾರಸ್ವಾಮಿ, ತಹಸೀಲ್ದಾರ್ ಶಿವೇಗೌಡ, ವೃತ್ತ ನಿರೀಕ್ಷಕ ಜಿ.ಟಿ.ಸ್ವಾಮಿ, ಬಜೆಪಿಯ ಜಿಲ್ಲಾ ಮಾಜಿ ಅಧ್ಯಕ್ಷ ಎಂ.ಕೆ. ಪ್ರಾಣೇಶ್ ಎಲ್ಲಾ ಸೇರಿ ದಲಿತ ಸಂಘಟನೆಗಳ ಮತ್ತು ಜಾತ್ಯತೀತ ಶಕ್ತಿಗಳ ಮನವೊಲಿಸುವ ಯತ್ನಕ್ಕೆ ಕೈಹಾಕಿದರು. ಚೌಕಾಸಿ ಬಳಿಕ ಮೃತ ಬಾಬುವಿನ ಕುಟುಂಬಕ್ಕೆ ನಾಲ್ಕು ಲಕ್ಷ ರೂಪಾಯಿಗಳ ಪರಿಹಾರ, [illegible] ಒಂದು ನಿವೇಶನ ಮತ್ತು ಮನೆ [illegible] ಭರವಸೆ ನೀಡಿದ್ದಾರೆ. ಇದಕ್ಕಾಗಿ [illegible]. ಹಾಗಾಗಿ ಮೂಡಿಗೆರೆ [illegible]

[illegible] ಇದು ಮೂಡಿಗೆರೆಯ ದಲಿತ ಶಕ್ತಿಗಳು ಒಗ್ಗಟ್ಟಾಗಿ [illegible] ಪ್ರತಿರೋಧಕ್ಕೆ ಸಿಕ್ಕ ಜಯವಾಗಿತ್ತು.

ಮೃತ ಬಾಬು ಕುಟುಂಬಕ್ಕೆ ಸೂಕ್ತ ಪರಿಹಾರ ಹಾಗೂ ಅಪರಾಧಿಗಳಿಗೆ ಶಿಕ್ಷೆಯಾಗುವ ತನಕ ಮೂಡಿಗೆರೆಯ ದಲಿತ ಸಂಘಟನೆಗಳು ಹೋರಾಡುತ್ತವೆಯೋ ಅಥವಾ ಮಧ್ಯದಲ್ಲಿ ರಾಜಿ ಮಾಡಿಕೊಳ್ಳುತ್ತವೆಯೋ ಎಂಬುದನ್ನು ಕಾದುನೋಡಬೇಕಿದೆ.

- ಅಜೀಜ್ ಕಿರುಗುಂದ



ಜಿಲ್ಲಾಡಳಿತವೇ ನ್ಯಾಯಾಂಗನಿಂದನೆ ಮಾಡಿದೆ!

ಜಿಲ್ಲಾಧಿಕಾರಿ ಆರ್. ನಾರಾಯಣಸ್ವಾಮಿ ಈ ದೇಶದ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನೂ ಕಾಲುಕಸದಂತೆ ನೋಡುತ್ತಾರೆ, ಆದರೆ ಸಂಘ ಪರಿವಾರಕ್ಕೆ ಮಾತ್ರ ಎದುರು ಮಾತನಾಡುವುದಿಲ್ಲ ಎಂಬುದು ಮೊನ್ನೆ ನಡೆದ ದತ್ತ ಜಯಂತಿ ಸಂದರ್ಭದಲ್ಲಿ ಮತ್ತೊಮ್ಮೆ ಸಾಬೀತಾಯಿತು.

ಅಸಲಿಗೆ ಈ ಮನುಷ್ಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೇವಲ ಪ್ರದರ್ಶನದ ಗೊಂಬೆಯಂತೆ ಕುಳಿತಿದ್ದು ಆಡಳಿತವನ್ನು ಸಂಘಪರಿವಾರಿಗಳೇ ನಡೆಸುತ್ತಿದ್ದಾರೆ ಎಂಬುದಕ್ಕೆ ಮೊನ್ನೆಯ ಪ್ರಕರಣ ಮತ್ತಷ್ಟು ಇಂಬು ಕೊಡುತ್ತದೆ. ಈತನೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ನಾಗರಾಜ್, ಚಿಕ್ಕಮಗಳೂರಿನ ತಹಸೀಲ್ದಾರ್ ವೀಣಾ ಮತ್ತು ಉಪವಿಭಾಗಾಧಿಕಾರಿ ಕೆ.ಎ. ದಯಾನಂದ್, ಡಿವೈಎಸ್‌ಪಿ ಪುಟ್ಟಮಾದಯ್ಯ ಮುಂತಾದವರು ಸೇರಿಕೊಂಡು ಇಡೀ ಚಿಕ್ಕಮಗಳೂರಿನ ಜಿಲ್ಲಾಡಳಿತ ಸುಪ್ರೀಮ್ ಕೋರ್ಟಿನ ಆದೇಶವನ್ನು ಉಲ್ಲಂಘಿಸಿ ಸಂಘಪರಿವಾರಿಗಳ ಸೇವೆಗೆ ನಿಂತಿತ್ತು.

ಡಿಸೆಂಬರ್ ಒಂದರಂದು ಬಾಬಾಬುಡನ್‌ಗಿರಿಯಲ್ಲಿ ಜಿಲ್ಲಾಡಳಿತವು ಬಜೆಪಿ ಸರ್ಕಾರದ ಒತ್ತಡಕ್ಕೆ ಮಣಿದು ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕೆಂಬ ಸುಪ್ರೀಂಕೋರ್ಟಿನ ಆದೇಶವನ್ನು ಉಲ್ಲಂಘಿಸಿ "ದತ್ತ ಪಾದುಕೆ"ಗಳನ್ನು ಗುಹೆಯ ಹೊರಗೆ ಶೆಡ್‌ನಲ್ಲಿರಿಸಿ ಪೂಜೆ ಮತ್ತು ದರ್ಶನಕ್ಕೆ ಅವಕಾಶ ಮಾಡಿಕೊಟ್ಟಿದೆ. ಇದು ಸುಪ್ರೀಂಕೋರ್ಟು 2008ರ ಡಿಸೆಂಬರ್ 1ರಂದು ನೀಡಿದ ಆದೇಶದ ಉಲ್ಲಂಘನೆಯಾಗಿದೆ. ಆ ಆದೇಶದ ಪ್ರಕಾರ ಕರ್ನಾಟಕ ಸರ್ಕಾರವು ಬಾಬಾಬುಡನ್‌ಗಿರಿಯಲ್ಲಿ ಯಾವ ರೀತಿಯ ಧಾರ್ಮಿಕ ಆಚರಣೆಗಳಿದ್ದವು ಎಂದು 1989ರ ಫೆಬ್ರವರಿ 25ರಂದು ಧಾರ್ಮಿಕ ದತ್ತಿ ಆಯುಕ್ತರು ಆದೇಶಿಸಿದ್ದರೋ ಅದಕ್ಕೆ ಮಾತ್ರ ಅವಕಾಶ ಮಾಡಿಕೊಡಬೇಕಷ್ಟೇ.

1989ರ ಫೆಬ್ರವರಿ 25ರಂದು ಧಾರ್ಮಿಕ ದತ್ತಿ ಆಯುಕ್ತರ ಆದೇಶವು ಈ ಕೆಳಗಿನ ಆಚರಣೆಗಳನ್ನು ಮಾತ್ರ ಪಾಲಿಸುವಂತೆ ನಿಗದಿಪಡಿಸಿದೆ:

- "ಶ್ರೀ ಗುರು ದತ್ತಾತ್ರೇಯ ಸ್ವಾಮಿ ಬಾಬಾಬುಡನ್ ದರ್ಗಾ ಒಂದು ಸೂಫಿ ಶ್ರದ್ಧೆಯ ಭಕ್ತಿಕೇಂದ್ರವಾಗಿದ್ದು ಅಲ್ಲಿಯ ಧಾರ್ಮಿಕ ಮತ್ತು ಆಡಳಿತಾತ್ಮಕ ಮುಖ್ಯಸ್ಥರು -ಸಜ್ಜಾದೆ ನಶೀನ್- ಶಾಖಾದ್ರಿ ಆಗಿರುತ್ತಾರೆ.
- ಅಲ್ಲಿ ಕರ್ಪೂರ ಬೆಳಗುವ, ತೆಂಗಿನಕಾಯಿ ಒಡೆಯುವ ಕೆಲವು ಹಿಂದೂ ಸ್ವರೂಪದ ಆಚರಣೆಗಳೂ ಇವೆ.
- ದರ್ಗಾದ ಗರ್ಭಗುಡಿಗೆ ಶಾಖಾದ್ರಿಯಿಂದ ನೇಮಕವಾಗಲ್ಪಡುವ ಮುಜಾವರ್ ಮಾತ್ರವೇ ಪ್ರವೇಶಿಸಿ ಪಾದುಕೆಗೆ ಪೂಜೆ ಮಾಡುತ್ತಾರೆ ಮತ್ತು ಬೆಳಿಗ್ಗೆ ಹಾಗೂ ಸಂಜೆ ಲೋಬಾನ ಬೆಳಗುತ್ತಾರೆ. ಬರುವ ಭಕ್ತಾದಿಗಳಿಗೆ ಪಡಿಯನ್ನು ನೀಡಲಾಗುತ್ತದೆ.
- ಕೆಲವು ಗಣ್ಯ ಮಠಾಧೀಶರು ಶಾಖಾದ್ರಿಯವರಿಗೆ ತಿಳಿಸಿ ಗರ್ಭಗುಡಿ ಪ್ರವೇಶಿಸಬಹುದು.
- ಮತ್ತು ಇಲ್ಲಿ ಪ್ರತಿ ವರ್ಷಕ್ಕೊಮ್ಮೆ ಉರುಸ್ ನಡೆಯುತ್ತದೆ."

ಮೇಲಿನ ಆದೇಶ ಸ್ಪಷ್ಟಪಡಿಸುವಂತೆ ಪಾದುಕೆಯನ್ನು ಗರ್ಭಗುಡಿಯಿಂದ ಹೊರತಂದು ಗುಹೆಯ ಪಕ್ಕದಲ್ಲೇ ದರ್ಶನಕ್ಕೆ ಮತ್ತು ಪೂಜೆಗೆ ಅವಕಾಶ ಮಾಡಿಕೊಟ್ಟಿರುವುದೇ ಸುಪ್ರೀಂ ಕೋರ್ಟಿನ ಆದೇಶದ ಸ್ಪಷ್ಟ ಉಲ್ಲಂಘನೆಯಾಗಿದೆ. ವಾಸ್ತವದಲ್ಲಿ ಇದೆಲ್ಲಾ ಜಿಲ್ಲಾಧಿಕಾರಿ ಆರ್.ನಾರಾಯಣಸ್ವಾಮಿಗೆ ಗೊತ್ತಿಲ್ಲವೆಂದೇನಲ್ಲ. ಆದರೆ ಮುಖ್ಯಮಂತ್ರಿ ಯಡಿಯೂರಪ್ಪ ನೇರವಾಗಿ ಅವರಿಗೆ ಫೋನ್ ಮಾಡಿ ಸಂಘಪರಿವಾರದ ಮುಖಂಡರು ಹೇಳಿದಂತೆ ಕೇಳುವಂತೆ ಆಜ್ಞಾಪಿಸಿದ್ದಾರೆ. ಜಿಲ್ಲಾಡಳಿತವು ತಾನು ಸಂವಿಧಾನವನ್ನು ರಕ್ಷಿಸಬೇಕಾದ ಮತ್ತು ನ್ಯಾಯಾದೇಶವನ್ನು ಪಾಲಿಸಬೇಕಾದ ಮಹತ್ತರ ಹೊಣೆಗಾರಿಕೆಯಿದ್ದರೂ ಯಡ್ಡಿಯ ಒತ್ತಡಕ್ಕೆ ಮಣಿದು ಉಲ್ಲಂಘನೆಯಲ್ಲಿ ಪಾಲ್ಗೊಂಡಿದೆ. ಹಾಗಾಗಿ ನ್ಯಾಯಾಂಗ ನಿಂದನೆಯು [illegible] ಚಿಕ್ಕಮಗಳೂರು ಜಿಲ್ಲಾಡಳಿತ [illegible] ರಾಜ್ಯ ಸರ್ಕಾರ ಎರಡೂ ನೇರವಾಗಿ, ಸಮಾನವಾಗಿ ಹೊಣೆಗಾರರಾಗಿವೆ.



ಈ ಹಿಂದೆಯೂ ದರ್ಗಾದ ರಿಪೇರಿ ಕೆಲಸಗಳಿಗೆ ಭೂಮಿಪೂಜೆ ಮಾ[illegible] ಸಂಸದ ಮತ್ತು ಬಿಜೆಪಿ ಅಧ್ಯಕ್ಷ ಸದಾನಂದಗೌಡ, ಶಾಸಕ ಸಿ.ಟಿ.ರವಿ ಮತ್ತು [illegible] ಈಶ್ವರಪ್ಪನವರು ಗುಟ್ಟಾಗಿ ದತ್ತ ವಿಗ್ರಹವನ್ನು ದರ್ಗಾದ ಬಳಿ ಕೊಂಡೊಯ್ದು [illegible] ಮಾಡಿ ನೇರವಾಗಿ ಜಿಲ್ಲಾಡಳಿತದ ಸಮಕ್ಷಮದಲ್ಲೇ ನ್ಯಾಯಾದೇಶದ ಉಲ್ಲಂಘನೆ ಮಾ[illegible] [illegible]ಲ್ಲಿ ಮತ್ತು ಸುಪ್ರೀಂಕೋರ್ಟಿನಲ್ಲಿ ನ್ಯಾಯಾಂ[illegible] ಪ್ರಕರಣ ದಾಖಲಾಗಿರುವುದಲ್ಲದೆ ಯಾವುದೇ ರಿಪೇರಿ ಕೆಲಸ ತೆಗೆದುಕೊಳ್ಳದೆ [illegible] ಸಹ ಆದೇಶ ನೀಡಿದೆ. [illegible] ಬಿಜೆಪಿ ಸರ್ಕಾರ ಮತ್ತು [illegible] ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದೆ. ಅಲ್ಲದೆ 1989ರ ಆದೇಶ ಸ್ಪಷ್ಟಪಡಿಸುವಂತೆ ಉರುಸ್ ಹೊರತಾಗಿ ಬೇರೆ ಯಾವುದೇ ಧಾರ್ಮಿಕ ಆಚರಣೆಗೆ ಅವಕಾಶವಿಲ್ಲದಿದ್ದರೂ ದತ್ತ ಜಯಂತಿಯನ್ನೂ ಒಳಗೊಂಡಂತೆ ಗಣಹೋಮ, ಸತ್ಯನಾರಾಯಣ ಪೂಜೆ ಮತ್ತು [illegible] ಹೋಮ ಇತ್ಯಾದಿ ಆಚರಣೆಗಳನ್ನು ನಡೆಸಿ ನ್ಯಾಯಾದೇಶದ ದೊಡ್ಡ ಉಲ್ಲಂಘನೆ ಮಾಡಿವೆ.

ವಾಸ್ತವದಲ್ಲಿ ಈ ಪ್ರಕರಣವು ಸಂಘಪರಿವಾರ ಮತ್ತು ಬಜೆಪಿಯು ಈ ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ಎಷ್ಟರಮಟ್ಟಿಗೆ ಗೌರವಿಸುತ್ತವೆ ಎಂಬುದನ್ನು ಎತ್ತಿ ತೋರುತ್ತದೆ.



▶▶2

...ಭೋಪಾಲ್ ದುರಂತವನ್ನು ...ಮರೆಯುವುದೆಂದರೆ...

...ಗೊಳಿಸಲು ಏನಿಲ್ಲವೆಂದರೂ 50 ಕೋಟಿಗೂ ಹೆಚ್ಚು ...ರ್ಚಾಗುತ್ತದೆ. ಎರಡು ಕೋಟಿ ಖರ್ಚು ಮಾಡಿ ಸಂಭವ ...ದ ದುರಂತವನ್ನೇ ತಡೆಯ ಬಹುದಾಗಿದ್ದ ಕಾರ್ಬೈಡ್ ...ನಿ 50 ಕೋಟಿ ವೆಚ್ಚ ಮಾಡಿ ಲಾಭವಿಲ್ಲದ ಸ್ವಚ್ಛತೆಗೆ ...ಂದಾಗುವುದೇ?

...ಈ ಮಧ್ಯೆ ತಾನು ಮಾಡಿರುವ ಅಪರಾಧದಿಂದ ...ನೂನುಬದ್ಧವಾಗಿ ಹೊರಬರಲು ಯೂನಿಯನ್ ...ರ್ಬೈಡ್ ಕಂಪನಿ ಮತ್ತೊಂದು ದೊಡ್ಡ ಬಹುರಾಷ್ಟ್ರೀಯ ...ಪನಿಯಾದ DOW (ಡೌ)ಗೆ ತನ್ನನ್ನು ಮಾರಿಕೊಂಡು ...ತು. ಕಾರ್ಬೈಡ್ ಕಂಪನಿಯನ್ನು 2000ರಲ್ಲಿ ...ಡುಕೊಂಡ ಡೌ ಕಂಪನಿ ಕಾರ್ಬೈಡ್ ಕಂಪನಿಯ ...ತೆಗಾರಿಕೆಗಳಿಗೆ ತಾನು ಜವಾಬ್ದಾರನಲ್ಲವೆಂದು ಘೋಷಿ... ನಮ್ಮ ಎಲ್ಲಾ ರಾಜಕೀಯ ಪಕ್ಷಗಳು ಕೂಡ ಡೌ ...ನಿಯ ಮೇಲೆ ಕಾರ್ಬೈಡ್‌ನ ಹೊಣೆಯನ್ನು ಹೇರಿದರೆ ...ತಕ್ಕೆ ವಿದೇಶಿ ಬಂಡವಾಳ ಹರಿದು ಬರುವುದು ...ವಾಗಬಹುದೆಂದು "ಸಲಹೆ" ನೀಡಿದವು. ಡೌ ಕಂಪನಿ ... ವಕಾಲತ್ತನ್ನು ಸಾಕ್ಷಾತ್ ಟಾಟಾ ಕಂಪನಿಯೇ ...ಸಿಕೊಂಡು ಸರ್ಕಾರಕ್ಕೆ ಬುದ್ಧಿ ಹೇಳಿತು.

...ಆದರೂ ಜನರ ಆಕ್ರೋಶ ಮೇರೆ ಮೀರುತ್ತಿದ್ದದ್ದನ್ನು ...ನಿಸಿದ ಕೇಂದ್ರದ ಕಾಂಗ್ರೆಸ್ ಸರ್ಕಾರ ಹಾಗೂ ಮಧ್ಯ ...ಶದ ಬಿಜೆಪಿ ಸರ್ಕಾರಗಳು ವಿಷಾನಿಲ ಸೋರಿಕೆಯಾಗಿ ... ವರ್ಷಗಳಾಗುತ್ತಿರುವ ಈ ಸಂದರ್ಭವನ್ನು ...ವಾಗಿಟ್ಟುಕೊಂಡು ಫ್ಯಾಕ್ಟರಿ ಗೇಟುಗಳನ್ನು ತೆರೆದು ...ವಾರ ಸಾರ್ವಜನಿಕ ವೀಕ್ಷಣೆಗೆ ಫ್ಯಾಕ್ಟರಿ ಆವರಣವನ್ನು ...ಡುತ್ತಿದ್ದಾರೆ. ಇದರ ಹಿಂದಿರುವ ಹುನ್ನಾರವಿಷ್ಟೆ: ...ರಿಯಲ್ಲಿ ಯಾವುದೇ ರೀತಿಯ ವಿಷವಸ್ತುಗಳಿಲ್ಲ, ...ರೂ ಅದರಿಂದ ಅಪಾಯವಿಲ್ಲ, ಆದರಿಂದ ...ರ್ಜಲಕ್ಕಾಗಲೀ ಪರಿಸರಕ್ಕಾಗಲೀ ಯಾವುದೇ ...ಯವಿಲ್ಲ, ಆದ್ದರಿಂದ 50 ಕೋಟಿ ಖರ್ಚು ಮಾಡಿ ...ನ್ನು ಸ್ವಚ್ಛೀಕರಣ ಮಾಡುವ ಅಗತ್ಯವೂ ಇಲ್ಲ ಎಂದು ...ಮವುದು!

...ಭೋಪಾಲ್ ದುರಂತ ಸಂಭವಿಸಿ 25 ವರ್ಷಗಳಾದ ...ವೂ ನಮ್ಮ ಸರ್ಕಾರಗಳು ಇನ್ನೂ ಹೆಚ್ಚೆಚ್ಚು ಕಂಪನಿಗಳ ...ದ ದಲ್ಲಾಳಿ ಸರ್ಕಾರಗಳಾಗಿವೆ. ಆದ್ದರಿಂದಲೇ ...ರ ರಕ್ಷಣೆಗಿಂತ, ಜನರ ಜೀವ ರಕ್ಷಣೆಗಿಂತ ಅಭಿವೃದ್ಧಿ ... ವಿದೇಶಿ ಬಂಡವಾಳವೇ ಮುಖ್ಯವೆಂಬುದು ಸರ್ಕಾ... ಅಧಿಕೃತ ನೀತಿಯಾಗುತ್ತಿದೆ. ಕಾರ್ಬೈಡನಂಥ ಭೀಕರ ...ಮಾಲಿನ್ಯಕಾರಿ ಕಾರ್ಖಾನೆಗಳು, ವಿದೇಶದಲ್ಲಿ ತಿರಸ್ಕರಿ... ಕಂಪನಿಗಳು ಭಾರತದಲ್ಲಿ ನೆಲೆಯೂರುತ್ತಿವೆ. ...ನಂಥ ಉದ್ಯಮಿಗಳು ಹೆಚ್ಚೆಚ್ಚು ಬಹುರಾಷ್ಟ್ರೀಯ ...ಗಳ ಸಹಚರರಾಗುತ್ತಾ ಭಾರತವನ್ನು ಬಡಿಗಾಸಿಗೆ ...ಮಾಡುವುದರಲ್ಲಿ ಪೈಪೋಟಿ ನಡೆಸುತ್ತಿದ್ದಾರೆ. [illegible]

ಮೌಲ್ಯ ಶಿಕ್ಷಣವೋ? ಚೆಡ್ಡಿ ಸೇನೆಗೆ ತರಬೇತಿಯೋ?

ಮೊನ್ನೆ ಡಿಸೆಂಬರ್ ಒಂದರಂದು ಹಿರಿಯೂರಿನ ಶ್ರೀ ವಾಸವಿ ಮಹಲ್‌ನಲ್ಲಿ ಹಿರಿಯೂರಿನ ರೋಟರಿ ಕ್ಲಬ್, ಶ್ರೀಶಾರದಾಶ್ರಮ ಹಾಗೂ ಬೆಂಗಳೂರಿನ ಸಪ್ತಮಿ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕರಿಗಾಗಿ ಚಿತ್ರದುರ್ಗ ಜಿಲ್ಲಾ ಮಟ್ಟದ ಗುರು ಚಿಂತನ ಶಿಬಿರ ನಡೆದಿದೆ. ಮೇಲ್ನೋಟಕ್ಕೆ ಕಾಣುವಂತೆ ಈ ಶಿಬಿರವನ್ನು ಆಯೋಜಿಸಿರುವ ಸಂಘಟನೆಗಳೆಲ್ಲವೂ ಹಿಂದೂತ್ವ ಪ್ರಚಾರದಲ್ಲಿ ಹಾಗೂ ಅಲ್ಪಸಂಖ್ಯಾತ ವಿರೋಧಿ ಕ್ರಿಯೆಗಳಲ್ಲಿ ತೊಡಗಿಕೊಂಡಿರುವ ಸಂಘಪರಿವಾರದ ಸಂಘಟನೆಗಳಾಗಿದ್ದು ಚಿಂತನ ಶಿಬಿರದಲ್ಲೂ ಅದೇ ಕೆಲಸವನ್ನು ಮಾಡಿವೆ. ಸಂಘಪರಿವಾರದ ಸಹಭಾಗಿ ಸಂಘಟನೆಗಳು ಇಂಥ ಹಲವು ಸಭೆ, ಶಿಬಿರ, ಬೈಠಕ್‌ಗಳನ್ನು ಆಗಾಗ ನಡೆಸುತ್ತಿರುತ್ತವೆ. ಅದರಲ್ಲೇನು ವಿಶೇಷ ಎನ್ನಬಹುದು. ಅಂಥ ಸಭೆ ಸಮಾರಂಭಗಳಲ್ಲಿ ಬೇಕಿದ್ದವರು ಭಾಗವಹಿಸಬಹುದು, ಬೇಡವಾದವರು ಅದರಿಂದ ದೂರವಿರಬಹುದು ಎಂತಾಗಿದ್ದರೆ ಅದರಲ್ಲೇನು ವಿಶೇಷ ಇಲ್ಲ ಎನ್ನಬಹುದು. ಆದರೆ ಮೊನ್ನೆ ಹಿರಿಯೂರಿನಲ್ಲಿ ನಡೆದಿರುವ ಸಭೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರು ಕಡ್ಡಾಯವಾಗಿ ಭಾಗವಹಿಸಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ಸುತ್ತೋಲೆ ಹೊರಡಿಸಿದ್ದಾರೆ!

ತನ್ನ ಈ ಪ್ರಚ್ಛನ್ನ ಕೋಮುವಾದಿ ಕಾರ್ಯಕ್ರಮಗಳನ್ನೆಲ್ಲಾ ಬಿಜೆಪಿ ಸರ್ಕಾರ ಮೌಲ್ಯ ಶಿಕ್ಷಣದ ಹೆಸರಲ್ಲಿ ನಡೆಸುತ್ತಿದೆ. ವಾಸ್ತವವಾಗಿ ಮೌಲ್ಯ ಶಿಕ್ಷಣದ ಹಿಂದಿನ ಪರಿಕಲ್ಪನೆ ಮಕ್ಕಳಲ್ಲಿ "ದಯೆ, ಅನುಕಂಪ, ಸಹಭಾಗಿತ್ವ, ಸಹೋದರತೆ, ವೈಜ್ಞಾನಿಕ ದೃಷ್ಟಿಕೋನ" ಇನ್ನಿತ್ಯಾದಿ ಮೌಲ್ಯಗಳನ್ನು ಬಿತ್ತುವುದು. ಆದರೆ ಬಿಜೆಪಿ ಸರ್ಕಾರ ಮೌಲ್ಯಶಿಕ್ಷಣದ ಹೆಸರಲ್ಲಿ ಬಿತ್ತುತ್ತಿರುವ ಮೌಲ್ಯಗಳೆಲ್ಲಾ ಇದಕ್ಕೆ ತದ್ವಿರುದ್ಧವಾದದ್ದೇ! ಸದರಿ ಗುರುಚಿಂತನಾ ಕಾರ್ಯಕ್ರಮದಲ್ಲಿ ವಿವೇಕಾನಂದರನ್ನು ಮುಂದು ಮಾಡಿ ಇವರು ಬಿತ್ತುತ್ತಿರುವ ಮೌಲ್ಯಗಳು ಎಂಥವು?


"ಶಿಕ್ಷಣವು ಮಾನವನ ಪರಿಪೂರ್ಣತೆಯ ಅಭಿವ್ಯಕ್ತಿ, ವಿದ್ಯಾರ್ಥಿಗಳ ಜೀವನ ನಿರ್ಮಾಣದಲ್ಲಿ ಶಿಕ್ಷಣದ ಆದರ್ಶ ವ್ಯಕ್ತಿಯ ಹಿರಿಮೆ ಮತ್ತು ಶಿಕ್ಷಣದಲ್ಲಿ ಮಾಡಬಹುದಾದ ಕೃಷಿ ಇನ್ನಿತ್ಯಾದಿಗಳನ್ನು ವಿವೇಕಾನಂದರ ಜೀವನ ಸಂದೇಶಗಳ ಬೆಳಕಿನಲ್ಲಿ" ಸಾರಲು ಈ "ಗುರುಚಿಂತನಾ" ಶಿಬಿರವನ್ನು ಆಯೋಜಿಸಲಾಗಿದೆ ಎಂದು ಶಿಕ್ಷಣ ಇಲಾಖೆ ತನ್ನ ಆದೇಶದಲ್ಲಿ ಹೇಳಿಕೊಂಡಿದೆ. ಆದರೆ ವಿವೇಕಾನಂದರ ಆದರ್ಶವೇನು ಎಂಬುದನ್ನು ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನಿಸುತ್ತಾರೆ. ವಾಸ್ತವವಾಗಿ ಈ ದೇಶದ ಪುರೋಹಿತಶಾಹಿಯೇ ಈ ದೇಶದ ಅವನತಿಗೆ ಕಾರಣ ಎಂಬುದು ವಿವೇಕಾನಂದರ ಖಚಿತ ಅಭಿಪ್ರಾಯವಾಗಿತ್ತು, ಅದಕ್ಕೆ ಪುರಾವೆಯಾಗಿ ಅವರ ವಿಪುಲವಾದ ಬರಹಗಳೇ ಇವೆ. ಅದೇರೀತಿ ಹಿಂದೂ ದೇಹ ಮತ್ತು ಇಸ್ಲಾಂ ಹೃದಯ ಈ ದೇಶದ ಅಸಲಿ ಚಹರೆಯೆಂಬುದು ಅವರ ಅಭಿಪ್ರಾಯವೂ ಆಗಿತ್ತು, ಅಂದರೆ ಸಾರಾಂಶದಲ್ಲಿ ಪುರೋಹಿತಶಾಹಿಯನ್ನು ವಿರೋಧಿಸುವ ಮತ್ತು ಸರ್ವಧರ್ಮ ಸಮಭಾವ ವಿವೇಕಾನಂದರ ಆದರ್ಶದ ನಿಜವಾದ ಸ್ವರೂಪ. ಇದು ನಮ್ಮ ಸಂವಿಧಾನದ ಆಶಯಗಳೂ ಹೌದು. ಹೀಗಾಗಿ ಇಲ್ಲಿ ನಮ್ಮ ತಕರಾರಿರುವುದು ವಿವೇಕಾನಂದರ ಜೀವನಾದರ್ಶವನ್ನು ಮಕ್ಕಳಿಗೆ ಕಲಿಸುವುದಕ್ಕೋ ಅಥವಾ ಅದರ ಬಗ್ಗೆ ಗುರುಚಿಂತನಾ ಮಾಡುವುದಕ್ಕೋ ಅಲ್ಲ.

ಬಿಜೆಪಿ ಸರ್ಕಾರ ವಿವೇಕಾನಂದರ ಜೀವನಾದರ್ಶದ ... ಗುರುಚಿಂತನಾ ಮಾಡಲು ಯಾವ ಖಾಸಗೀ ಸಂಸ್ಥೆಗಳಿಗೆ ... ವಿವೇಕಾನಂದರ ಈ ಸಮಾನತ... [illegible]

ಪ್ರಚಾರಕ್ಕೆ ಬಳಸಿಕೊಳ್ಳುತ್ತವೆಯೋ ಎಂಬುದು ಅಸಲಿ ತಕರಾರು!

ಏಕೆಂದರೆ ಈ ಮೌಲ್ಯಶಿಕ್ಷಣದ ಜವಾಬ್ದಾರಿ ಹೊತ್ತುಕೊಂಡಿರುವ ಶಾರದಾಶ್ರಮ ಮತ್ತು ವಿಶೇಷವಾಗಿ ಸಪ್ತಮಿ ಟ್ರಸ್ಟ್‌ನ ಹಿನ್ನೆಲೆ ಮತ್ತು ಇತ್ತೀಚಿನ ಕಾರ್ಯಕ್ರಮಗಳನ್ನು ನೋಡಿದ ಯಾರಿಗೇ ಆದರೂ ಈ ಅನುಮಾನಗಳು ಬಂದೇ ಬರುತ್ತವೆ. ಉದಾಹರಣೆಗೆ ಸಪ್ತಮಿ ಟ್ರಸ್ಟ್ ಹೆಸರಿಗೆ 2೦೦೦ದಲ್ಲೇ ಹುಟ್ಟಿದ್ದರೂ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವವರೆಗೆ ಯಾರೂ ಇದರ ಹೆಸರನ್ನೇ ಕೇಳಿರಲಿಲ್ಲ, ಅಂಥ ಅಡ್ರೆಸ್ಸಿಗಿಲ್ಲದ ಟ್ರಸ್ಟಿಗೆ ಬಿಜೆಪಿ ಸರ್ಕಾರ ಮೊನ್ನೆ ಟೀಚರ್ಸ್ ಡೇ ಹೆಸರಿನಲ್ಲಿ ಸೆಪ್ಟೆಂಬರ್ 3-5ರವರಗೆ ರಾಜ್ಯ ಮಟ್ಟದ ಮೌಲ್ಯ ಶಿಕ್ಷಕರ ತರಬೇತಿ ಶಿಬಿರವನ್ನು ಆಯೋಜಿಸುವ ಕಾಂಟ್ರಾಕ್ಟ್ ಕೊಟ್ಟಿತ್ತು, ಆ ಮೂರೂ ದಿನಗಳು ರಾಜ್ಯಾದ್ಯಂತ ಆಯ್ದ ಶಿಕ್ಷಕರಿಗೆ ಕಡ್ಡಾಯವಾಗಿ ಈ ತರಬೇತಿ ಶಿಬಿರದಲ್ಲಿ ಭಾಗವಹಿಸುವಂತೆ ಆದೇಶ ಹೊರಡಿಸಲಾಗಿತ್ತು, ಆದರೆ ಅಲ್ಲಿ ನಡೆದ ತರಬೇತಿಯೇ ಬೇರೇ!

ಆ ಕಾರ್ಯಕ್ರಮದ ಮುಖ್ಯ ಪ್ರವಚನ ಇದ್ದದ್ದು ಚಕ್ರವರ್ತಿ ಸೂಲಿಬೆಲೆ ಎಂಬ ಉಸಿರಾಡಿದರೂ ಹಿಂದೂತ್ವದ ನಾತ ಹೊಡೆಯುವ ಆಸಾಮಿಯದ್ದು. ಈತ ಮಾತಾಡಿದ್ದೆಲ್ಲಾ ನಮ್ಮ ಆರ್ಷೇಯ ಪರಂಪರೆಯಲ್ಲಿ ಎಲ್ಲವೂ ಇತ್ತು ಎಂಬುದು ಮತ್ತು ಈಗ ಇಸ್ಲಾಂ ಮತ್ತು ಕ್ರಿಶ್ಚಿಯನ್ ದಾಳಿಗೆ ಸಿಕ್ಕಿ ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದೇವೆ ಎಂಬ ಆರೆಸ್ಸೆಸ್ ಗಿಳಿಪಾಠವನ್ನೇ. ಇದನ್ನೇ ಮೌಲ್ಯ ಶಿಕ್ಷಣವೆಂದು ಉಳಿದವರೂ ಮೂರೂ ದಿನಗಳ ಕಾಲ ಗುರುಗಳ ತಲೆಗೆ


ದಿ : 1-12-2009

ಕರಸೇವೆ ಮಾಡುವ ಪ್ರಯತ್ನಗಳನ್ನು ನಡೆಸಿದ್ದರು. ಈಗ ಅದೇ ಸಂಸ್ಥೆಯೇ ಗುರುಚಿಂತನದ ಹೆಸರಲ್ಲಿ ವಿವೇಕಾನಂದರ ಜೀವನಾದರ್ಶಗಳ ಮುಖವಾಡವನ್ನು ಇಟ್ಟುಕೊಂಡು ಗುರುಗಳ ಹಿಂದೆ ಬಿದ್ದಿದೆ. ಆರೆಸ್ಸಿಸ್ಸಿಗರ ಪ್ರಕಾರ ವಿವೇಕಾನಂದರ ಆದರ್ಶವೆಂದರೆ ಹಿಂದೂತ್ವದ ಶ್ರೇಷ್ಠತೆ. ಇದು ವಿವೇಕಾನಂದರಿಗೂ ಮಾಡುವ ಅವಮಾನ ಮತ್ತು ಮಕ್ಕಳ ಎಳೆಯ ಮನಸ್ಸುಗಳ ಮೇಲೆ ಮಾಡುವ ಕೋಮುವಾದಿ ಅತ್ಯಾಚಾರ. ಆದ್ದರಿಂದಲೇ ಮೌಲ್ಯಶಿಕ್ಷಣದ ಹೆಸರಲ್ಲಿ ಸರ್ಕಾರ ಇಂಥಾ ಕೋಮುವಾದಿ ಸಂಸ್ಥೆಗಳಿಗೆ ತಮ್ಮ ... [illegible]

ಅಂಗಸಂಸ್ಥೆಯಾದ ರಾಷ್ಟ್ರೋತ್ಥಾನ ಪರಿಷತ್ ಹೊರತಂದಿರುವ 3೦೦ ಪುಸ್ತಕಗಳನ್ನು ಕಡ್ಡಾಯವಾಗಿ ಕೊಳ್ಳಲೇಬೇಕೆಂದು ಶಿಕ್ಷಣ ಇಲಾಖೆ ಅಧಿಕೃತವಾಗಿ ಆದೇಶ ಹೊರಡಿಸಿತ್ತು, ರಾಷ್ಟ್ರೋತ್ಥಾನ ಪರಿಷತ್ತು ಪ್ರಕಟಿಸಿದ ಪುಸ್ತಕಗಳೆಂದರೆ ಅವು ಏನು ಸಾರಾಂಶವನ್ನು ಹೊಂದಿರುತ್ತವೆಯೆಂದು ಅಂದಾಜಿಸುವುದು ಕಷ್ಟವಲ್ಲ, ಈ ಮುನ್ನೂರು ಪುಸ್ತಕಗಳಲ್ಲಿ ಆರೆಸ್ಸೆಸ್ ಮುಖಂಡರ, ಹಿಂದೂತ್ವ ಪ್ರತಿಪಾದಕರ ಜೀವನ ಚರಿತ್ರೆಗಳೇ ಶೇ.9೦ ಭಾಗ ಇವೆ. ಉಳಿದಂತೆ ಕನಕದಾಸ, ಅಂಬೇಡ್ಕರ್, ಲೋಹಿಯ ಮುಂತಾದವರ ಬಗ್ಗೆಯೂ ಪುಸ್ತಕಗಳಿವೆಯಾದರೂ ಅವೂ ಕೂಡ ಆರೆಸ್ಸೆಸ್‌ನ ಹಿಂದೂತ್ವ ಕನ್ನಡಕ ಹಾಕಿಕೊಂಡು ಬರೆಯಲಾದ ಪುಸ್ತಕಗಳೇ. ಇನ್ನು ಟಿಪ್ಪೂ ಸುಲ್ತಾನ್ ಎಂಬ ಧೀರೋದ್ಧಾತ ಸ್ವಾತಂತ್ರ್ಯ ಯೋಧನ ಬಗ್ಗೆ ಒಂದೇ ಒಂದು ಅಕ್ಷರವೂ ನಿಮಗೆ ಸಿಗುವುದಿಲ್ಲ, ಏಕೆಂದರೆ ಆತನೊಬ್ಬ ಮುಸ್ಲಿಂ! ಹೀಗೆ, ಈ ಪುಸ್ತಕಗಳನ್ನು ಓದಿಸುವ ಮೂಲಕ ಎಳೆಯ ಮಕ್ಕಳಲ್ಲಿ ದರ್ಮಾಂಧತೆಯನ್ನು ಬೆಳೆಸುವ, ಹಿಂದೂತ್ವದ ವಿಷವುಣ್ಣಿಸುವ ಮನುಷ್ಯ ವಿರೋಧಿ ಕೆಲಸವನ್ನು ಸರ್ಕಾರ ಮಾಡುತ್ತಿದೆ.

ಅದಾದ ಮೇಲೆ ರಾಜ್ಯದ 13ಕ್ಕೂ ಹೆಚ್ಚು ಜಿಲ್ಲೆಗಳ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳಿಗೆ ಭಗವದ್ಗೀತಾ ಕಂಠಪಾಠ ಮಾಡಿಸಬೇಕೆಂದು ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ಅಧಿಕೃತ ಸುತ್ತೋಲೆ ಹೊರಡಿಸಿತು. ಭಾರತ ಒಂದು ಬಹುಧರ್ಮೀಯ, ಬಹುಸಂಸ್ಕೃತಿಯ ದೇಶವಾಗಿದ್ದು ಇಲ್ಲಿನ ಶಾಲೆಗಳಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯಗಳನ್ನೂ ಒಳಗೊಂಡಂತೆ ಎಲ್ಲಾ ಧರ್ಮೀಯ ಮಕ್ಕಳೂ ಓದುತ್ತಿದ್ದಾರೆ. ಅಲ್ಲಿ ಕೇವಲ ಹಿಂದೂ ಧಾರ್ಮಿಕ ಗ್ರಂಥವಾಗಿರುವ ಭಗವದ್ಗೀತೆಯನ್ನು ಕಂಠಪಾಠ ಮಾಡಿಸುವುದು ಈ ದೇಶದ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ಸರ್ಕಾರ ಇಂತಹದ್ದೊಂದು ಆದೇಶ ಹೊರಡಿಸಿದಾಗ ವಿರೋಧ ಪಕ್ಷಗಳು ಚಕಾರವೆತ್ತಲಿಲ್ಲ, ಸರ್ವಧರ್ಮಗಳ ಮಕ್ಕಳು ಓದುವ ಶಾಲೆಯಲ್ಲಿ ಖುರಾನ್ ಪಠಣ ಮಾಡುವುದಕ್ಕೆ, ಬೈಬಲ್ ಪಠಣ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ ಎಂದು ಪ್ರಶ್ನಿಸಲಿಲ್ಲ.

ಈಗ ಹಿರಿಯೂರಿನಲ್ಲಿ ಆಯೋಜನೆಗೊಂಡಿರುವ ಗುರುಚಿಂತನಾ ಶಿಬಿರ ಸಂಘಪರಿವಾರ ಮತ್ತು ಬಿಜೆಪಿಗಳು ಸೇರಿಕೊಂಡು ಎಳೆಯ ಮಕ್ಕಳಿಗೆ ಹಿಂದೂತ್ವದ ವಿಷವುಣ್ಣಿಸುವ, ಹಿಂದೂತ್ವ ಧರ್ಮಾಂಧತೆಯನ್ನು ಬೆಳೆಸುವ, ಪರಧರ್ಮದ್ವೇಷಿ ಮನಸ್ಥಿತಿ ಸೃಷ್ಟಿಸುವ ಅಮಾನವೀಯ ಕಾರ್ಯಕ್ರಮದ ಮುಂದಿನ ಭಾಗವಷ್ಟೆ. ಮಕ್ಕಳಿಗೆ ಪಾಠ ಹೇಳುವ ಶಿಕ್ಷಕರನ್ನೇ ಹಿಂದೂತ್ವ ಸಿದ್ಧಾಂತದ ಪ್ರತಿಪಾದಕರನ್ನಾಗಿ ಮಾಡಿಬಿಟ್ಟರೆ ಅವರು ಎಳೆಯ ಮಕ್ಕಳ ಮಿದುಳುಗಳಿಗೆ ಹಿಂದೂತ್ವವನ್ನು ಚೆನ್ನಾಗಿ ಇಳಿಸುತ್ತಾರೆಂಬ ಲೆಕ್ಕಾಚಾರದಿಂದ ಸಂಘಪರಿವಾರ ಈ ಬಾರಿ ಶಿಕ್ಷಕರನ್ನು ಆಯ್ಕೆ ಮಾಡಿಕೊಂಡಿದೆ. ಸದ್ಯ ಹಿರಿಯೂರಿನಲ್ಲಿ ಪ್ರಾರಂಭವಾದ ಈ ಗುರುಚಿಂತನ ಶಿಬಿರವನ್ನು ರಾಜ್ಯದ ಇನ್ನಿತರ ಜಿಲ್ಲೆಗಳಿಗೂ ವಿಸ್ತರಿಸುವ ಉದ್ದೇಶವನ್ನು ಸಂಘಪರಿವಾರ ಹಾಕಿಕೊಂಡಿದೆ. ... ಸಂಘಟನೆಯೊಂದು ನಡೆಸುವ ಕಾರ್ಯಕ್ರಮವೊಂದಕ್ಕೆ ... [illegible]

● [illegible]

ವಿ.ಕ. ಸಂಪಾದಕರ ಮೃಗಯಾ ವಿನೋದಗಳು

ನಕ್ಸಲ್, ನಕ್ಸಲೀಯ, ನಕ್ಸಲ್ ಪರ, ನಕ್ಸಲ್ ಬೆಂಬಲಿಗ, ನಕ್ಸಲ್ ಒಡನಾಡಿ, ನಕ್ಸಲ್ ಸಹಾನುಭೂತಿ ಉಳ್ಳವ- ಈ ವ್ಯಕ್ತಿಗಳ ಗುರುತುಚಹರೆಗಳು ಏನು? ಅವರಲ್ಲಿ ಒಬ್ಬರನ್ನು ಮತ್ತೊಬ್ಬರಿಂದ ಪ್ರತ್ಯೇಕಿಸುವುದು ಹೇಗೆ? ಅಥವಾ ಅವರ ನಡುವೆ ವ್ಯತ್ಯಾಸವೇ ಇಲ್ಲವೋ? ಈ ಪ್ರಶ್ನೆಗಳಿಗೆ ರಾಜ್ಯ ಪೊಲೀಸು ಇಲಾಖೆ ಮಾತ್ರವಲ್ಲ, ವಿ.ಕ.ದಂತಹ ಪತ್ರಿಕೆಗಳೂ ಪ್ರಾಮಾಣಿಕವಾಗಿ ಉತ್ತರಗಳನ್ನು ಕಂಡುಕೊಳ್ಳುವುದು ಪ್ರಜಾಪ್ರಭುತ್ವದ ಉಳಿವಿನ ದೃಷ್ಟಿಯಿಂದ ಅತ್ಯಂತ ಜರೂರಿನದ್ದಾಗಿದೆ.

'ರಂಗಾಯಣ' ನಾಟಕ ಸುದ್ದಿಗೆ ಲೇಖಕ [illegible] ಹಾಗೂ ನಿವೃತ್ತ ಪ್ರಾಧ್ಯಾಪಕ ಲಿಂಗದೇವರು ಹಳೆಮನೆಯವರನ್ನು ನಿರ್ದೇಶಕರನ್ನಾಗಿ ರಾಜ್ಯ ಸರ್ಕಾರ ನೇಮಿಸಿದ ತರುವಾಯ ವಿಜಯ ಕರ್ನಾಟಕ ಪತ್ರಿಕೆಯು ಶ್ರೀಯುತರ ಬಗ್ಗೆ ಸ್ಫೋಟಕ ಸುದ್ದಿಯೊಂದನ್ನು ಹೊರಗೆಡವಿದೆ. ತಾ. 27.11.09ರ ತನ್ನ ಸಂಚಿಕೆಯ ಮುಖಪುಟದಲ್ಲಿ "ರಂಗಾಯಣ ದೇವರ ನಕ್ಸಲ್ ನಂಟು" ಎಂಬ ಅಪ್ಪಟ ವಿ.ಕ. ಬ್ರಾಂಡ್ ಗಿಮಿಕ್ಸ್‌ನ ಶೀರ್ಷಿಕೆಯ ಕೆಳಗೆ ಪ್ರಕಟವಾದ ವರದಿ, "ಕೇಸರಿ ಪಕ್ಷದ ಸರ್ಕಾರದಲ್ಲಿ ರಂಗಾಯಣದ ಹೊಣೆ ಹೊತ್ತಿರುವ ಕೆಂಬಾವುಟ ಪ್ರೇಮಿ ಲಿಂ.ಹಳೆಮನೆ ಅವರಿಗೆ ನಕ್ಸಲ್ ಸಂಪರ್ಕ ಇರುವುದಕ್ಕೆ ಸಾಕ್ಷಿ ಲಭಿಸಿದೆ" ಎಂದು ಖಡಾಖಂಡಿತವಾಗಿ ಸಾರುತ್ತದೆ.

ಹಳೆಮನೆಯವರ ಜೊತೆ, ಮೈಸೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಮುಜಫ್ಫರ್ ಅಸ್ಸಾದಿಯವರನ್ನೂ ಈ ವರದಿ ನಕ್ಸಲ್ ಪರ ಎಂದು ಹೆಸರಿಸುತ್ತದೆ. ವಿ.ಕ. ಪ್ರಕಾರ ಹಳೆಮನೆ ಮತ್ತು ಅಸ್ಸಾದಿ ಆಂಧ್ರದ ಪೀಪಲ್ಸ್ ವಾರ್ ಗ್ರೂಪ್ ಜೊತೆ ಒಡನಾಟ ಇಟ್ಟುಕೊಂಡಿದ್ದಾರೆ. ಆ ವರದಿಯ ಜೊತೆ ಪತ್ರಿಕೆಯಲ್ಲಿ ಎರಡು ಟೈಪ್ ಆದ ಪತ್ರಗಳ ಪಾಸ್‌ಪೋರ್ಟ್ ಸೈಜಿನ ಫೋಟೋಗಳು ಕೂಡ ಅಚ್ಚಾಗಿದ್ದು, ಅದರ ಸಾಲುಗಳನ್ನು ಹಳದಿ, ಹಸಿರು, ನೀಲಿ ಮಾರ್ಕರ್ ಪೆನ್ನುಗಳಿಂದ ಹೈಲೈಟ್ ಮಾಡಲಾಗಿದೆ. ಅದು ಒಟ್ಟು ವರದಿಗೆ, ರಾಜರಹಸ್ಯವೊಂದರ ರೋಚಕತೆಯ ಜೊತೆಗೆ "ಅಫಿಷಿಯಲ್" ಗಾಂಭೀರ್ಯವನ್ನೂ ತಂದುಕೊಟ್ಟಿದೆ.

ಆ ಪತ್ರಗಳಲ್ಲಿ ಇರುವುದಾದರೂ ಏನು? ಕೆಎಸ್‌ಎನ್ ಚಿಕ್ಕೆರೂರು ಎಂಬವರು 2003-04 ರ ಅವಧಿಯಲ್ಲಿ ಭಯೋತ್ಪಾದನಾ ನಿಗ್ರಹ ದಳದ ಐಜಿಪಿ ಆಗಿದ್ದಾಗ, "ಹಳೆಮನೆಯವರು ನಕ್ಸಲ್ ಪರವಾಗಿರುವುದರಿಂದ ಅವರ ಮೇಲೆ ಕಣ್ಣಿಟ್ಟಿರಿ" ಎಂದು ಮೈಸೂರಿನಲ್ಲಿ ಆಗಿನ ಪೊಲೀಸ್ ಆಯುಕ್ತರಾದ ಬಿಪಿನ್ ಗೋಪಾಲಕೃಷ್ಣ ಅವರಿಗೆ ಪತ್ರ ಬರೆದಿದ್ದರು. ಇನ್ನೊಂದು ಪತ್ರದಲ್ಲಿ ಸರ್ಕಾರದ ಒಳ ಆಡಳಿತಾ ಕಾರ್ಯದರ್ಶಿಗಳಿಗೆ, ರಾಜ್ಯಪಾಲರ ಕಾರ್ಯದರ್ಶಿ, ಹಳೆಮನೆ ಮತ್ತು ಅಸ್ಸಾದಿ ಅವರ ಮೇಲೆ ಬಂದಿರುವ ದೂರಿನ ಮೇಲೆ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ನೀಡಬೇಕು ಎಂದು ವಿನಂತಿ ಮಾಡಿಕೊಂಡಿದ್ದಾರೆ. ಎರಡೂ ಸಹ ಸರ್ಕಾರಿ ಅಫಿಷಿಯಲ್‌ಗಳು ಬರೆದ ಅಫಿಷಿಯಲ್ ಪತ್ರಗಳು, ಸಂದೇಹ ಬೇಡ. ಮತ್ತೂ ಸಂದೇಹವಿದ್ದರೆ ವಿ.ಕ.ದಲ್ಲಿ ಪ್ರಕಟವಾದ ಫೋಟೋ ನೋಡಿ.

ಪತ್ರಿಕಾ ಪ್ರಕಟಣೆಯ ಶೈಲಿಯನ್ನು ವಿ.ಕ. ಸಂಪಾದಕರಿಂದಲೇ ಕಲಿಯಬೇಕು. ವಿಷವನ್ನು ಕೂಡ ಆಕರ್ಷಕವಾಗಿ ಪ್ಯಾಕ್ ಮಾಡಿ, ಅದು ನಿಮ್ಮ ಒಳ್ಳೆಯದಕ್ಕೇ ಎಂದು ನಿಮ್ಮನ್ನು ನಂಬಿಸಿ, ನಿಮಗೆ ಮಾರಬಲ್ಲ ಚಾಣಾಕ್ಷ ಅವರು. ಒಂದು ದೂರು, ಇನ್ನೊಂದು ಆ ದೂರಿನ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ಕೊಡಿ ಎಂಬ ಸರ್ಕಾರೀ ಒಕ್ಕಣೆಕೆಯ ಪತ್ರ–ಇವೆರಡರ ಫೋಟೋಗಳನ್ನು ಮುಖಪುಟದಲ್ಲಿ ಪ್ರಕಟಿಸಿ, ಹಳೆಮನೆ ಮತ್ತು ಅಸ್ಸಾದಿ ಅವರಿಗೆ ನಕ್ಸಲ್‌ಗಳ ಜೊತೆ ಒಡನಾಟ ಇರುವುದಕ್ಕೆ ಇದೇ ಸಾಕ್ಷ್ಯಾಧಾರವೆಂಬಂತೆ ವರದಿ ಮಾಡುವುದು - ಈ ಚಾಲೂತನ ಏನನ್ನು ಸೂಚಿಸುತ್ತದೆ?


ಹಳೆಮನೆ

ತಾನು ಹೇಳುತ್ತಿರುವುದು ಸುಳ್ಳು ಎಂದು ವಿ.ಕ. ವರದಿಗಾರನಿಗೆ ದೇವರಾಣೆಗೂ ಗೊತ್ತಿದೆ. ಆತನ ವೃತ್ತಿಧರ್ಮ ಏನಿದ್ದರೂ ಆ ಸುಳ್ಳನ್ನು ಸತ್ಯವೆಂದು ಓದುಗರನ್ನು ನಂಬಿಸುವ ಕೌಶಲ್ಯ ಮಾತ್ರ. "ಎಡಪಂಥೀಯ"ರಾಗಿರುವ ಮಹಾಪರಾಧವನ್ನು ಮಾಡಿರುವ ಹಳೆಮನೆ, ರಂಗಾಯಣಕ್ಕೆ ನಿರ್ದೇಶಕರಾಗಿ ನೇಮಕಗೊಂಡ ಮೇಲೆ ಸರ್ಕಾರಿ ಕಡತಗಳಿಂದ ಈ ಪತ್ರಗಳನ್ನು ಹೊರತೆಗೆದು ಪ್ರಕಟಿಸಿದ ಪತ್ತೇದಾರೀ ಸಾಹಸದಿಂದ ವಿ.ಕ. ಸಾಧಿಸಿದ್ದಾದರೂ ಏನು? ಈ ಪತ್ರಗಳ ಬಗ್ಗೆ ವಿ.ಕ. ಬಿಪಿನ್ ಗೋಪಾಲಕೃಷ್ಣ ಅವರನ್ನು ಪ್ರಶ್ನಿಸಿದಾಗ, ಅವರು "ಅದು ನನಗೆ ಜ್ಞಾಪಕ ಇಲ್ಲ" ಎಂದು ಉತ್ತರಿಸಿದ್ದಾರೆ. ಒಬ್ಬ ಹಿರಿಯ ಪೊಲೀಸ್ ಅಧಿಕಾರಿಗೆ ಇಷ್ಟು ಗಂಭೀರವೂ, ಸೂಕ್ಷ್ಮವೂ ಆಗಿರುವ ವಿಷಯ ಈಗ ಜ್ಞಾಪಕದಲ್ಲಿ ಇಲ್ಲ ಎಂದರೆ ಅದರ ಅರ್ಥವೇನು? ಹಳೆಮನೆ ಮತ್ತು ಅಸ್ಸಾದಿಯವರು ನಕ್ಸಲ್ ಎಂಬುದರ ಬಗ್ಗೆ ಏನಾದರೂ ಪುರಾವೆ ಸಿಕ್ಕಿದ್ದರೆ ಬಿಪಿನ್ ಗೋಪಾಲಕೃಷ್ಣ ಅದನ್ನು ಮರೆಯುತ್ತಿದ್ದರೆ?


ವಿ.ಭಟ್

ವಿ.ಕ. ತನ್ನ ಹೇಳಿಕೆಗಳಿಗೆ ಸಾಕ್ಷ್ಯಾಧಾರ, ಮಾಹಿತಿ ಇತ್ಯಾದಿಗಳ ಸಮರ್ಥನೆ ಅವಶ್ಯ ಎಂದು ಯಾವತ್ತೂ ಭಾವಿಸಿಲ್ಲ. ಆರೋಪವೇ ಸಾಕ್ಷ್ಯಾಧಾರ ಎಂಬ ಸಂಘ ಪರಿವಾರದ ನೈತಿಕತೆ ವಿ.ಕ.ದ ವೃತ್ತಿ ಧರ್ಮ ಕೂಡ.

ಪೊಲೀಸು ಇಲಾಖೆಯ ಕರ್ತವ್ಯ, ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಇಲಾಖೆ ಪಾಲಿಸಬೇಕಾದ ನೀತಿಸಂಹಿತೆ ಇದೆ. ರಾಜ್ಯ ಸರ್ಕಾರ ಈ ಕೆಲಸವನ್ನು ಅಧಿಕೃತವಾಗಿ ಬಿಜೆಪಿಗೆ ಒಪ್ಪಿಸಿದೆಯೆ? ಅಥವಾ ಬಿಜೆಪಿಯೇ ಈ ಆಂತರಿಕ ಬೇಹುಗಾರಿಕೆಯ ಕೆಲಸವನ್ನು ತನ್ನಷ್ಟಕ್ಕೆ ತಾನೇ ವಹಿಸಿಕೊಂಡಿದೆಯೆ? ಅದು ಹೇಗೆ ಇರಲಿ, ರಾಜಕೀಯ ಪಕ್ಷವೊಂದು ವಿಶ್ವವಿದ್ಯಾಲಯಗಳಲ್ಲಿ ಗೂಢಚಾರಿಕೆ ನಡೆಸುವುದು ಫ್ಯಾಸಿಸ್ಟ್ ದಬ್ಬಾಳಿಕೆ. ಈ ದುಂಡಾವರ್ತಿಗೆ ನಾವು ಧಿಕ್ಕಾರ ಹೇಳಲೇಬೇಕು.

ಪ್ರಜೆಗಳ ಸಾಂವಿಧಾನಿಕ ಹಕ್ಕು ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸುವ ಇಂತಹ ಆಕ್ರಮಣದ ತಂತ್ರಗಳ ವಿರುದ್ಧ ಪ್ರಜೆಗಳನ್ನೂ ಆಳುವವರನ್ನೂ ಎಚ್ಚರಿಸುವುದು ಪತ್ರಿಕೆಗಳ ಕರ್ತವ್ಯ. ಸ್ವತಃ ಪತ್ರಿಕೆಗಳ ಉಳಿವಿಗೂ ಅದು ಅಗತ್ಯ. ಆದರೆ ವಿ.ಕ.ದಂತಹ ಜನಪ್ರಿಯ ಪತ್ರಿಕೆಗಳೇ

ವಿಜಯ ಕರ್ನಾಟಕ

ಹಾಗಾಗಿ, ಬಿಪಿನ್ ಗೋಪಾಲಕೃಷ್ಣ ಅವರ ಆ ಉತ್ತರದ ನಂತರವೂ ವಿ.ಕ. ಹೀಗೆ ಹೇಳುತ್ತದೆ, "ಆದರೆ ಅವರ (ಹಳೆಮನೆ ಮತ್ತು ಅಸ್ಸಾದಿ) ವಿರುದ್ಧ ಯಾವುದೇ ಕ್ರಮ ಜರುಗಿಸಿದ ಹಾಗೂ ಈ ಆರೋಪದಿಂದ ಮುಕ್ತಗೊಳಿಸಿದ ಮಾಹಿತಿ ಇದುವರೆಗೆ ಇಲ್ಲ. ನಕ್ಸಲ್ ಬೆಂಬಲಿಗರನ್ನು ಪತ್ತೆ ಮಾಡಲು ವಿ.ವಿ.ಗಳಲ್ಲಿ ಸಮೀಕ್ಷೆ ನಡೆಸಿದ್ದ ಬಿಜೆಪಿ ರಂಗಾಯಣದಂತಹ ಸಂಸ್ಥೆಗೆ ಹಳೆಮನೆ ಅವರನ್ನು ನಿರ್ದೇಶಕರನ್ನಾಗಿಸುವ ಮೂಲಕ 'ನಾಟಕದ ಅಂಗಣದಲ್ಲಿ' ಮತ್ತೊಂದು ವಿವಾದದ ಸುಂಟರ ಗಾಳಿ ಬೀಸಲು ಹಾದಿ ಮಾಡಿಕೊಟ್ಟಿದೆ."

ವರದಿಯ ಈ ಸಾಲುಗಳು ಭಯಾನಕವಾಗಿವೆ. ರಾಜ್ಯದ ವಿ.ವಿ.ಗಳಲ್ಲಿ ನಕ್ಸಲ್ ಬೆಂಬಲಿಗರನ್ನು ಪತ್ತೆಹಚ್ಚಲು ಬಿಜೆಪಿಗೆ ಅನುಮತಿ ಕೊಟ್ಟವರು ಯಾರು ಎಂಬುದರ ಬಗ್ಗೆ ತಕ್ಷಣ ತನಿಖೆ ನಡೆಯಬೇಕು. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಮತ್ತು ಶಿಕ್ಷಕರು ಈ ಬಗ್ಗೆ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗಿದೆ. ಆಳುವ ಪಕ್ಷ ಇಂತಹದ್ದೊಂದು ಸಮೀಕ್ಷೆಯನ್ನು ನಡೆಸಿದ್ದೇ ಹೌದಾದರೆ ಅದು ವಿ.ವಿ.ಗಳ ಸ್ವಾಯುತ್ತತೆ ಮಾತ್ರವಲ್ಲ, ಶಿಕ್ಷಕರ ಮೂಲಭೂತ ಸ್ವಾತಂತ್ರ್ಯವನ್ನೂ ನಾಶಗೊಳಿಸುವಂತಹದ್ದು. ನಕ್ಸಲ್ ಆರೋಪಿಗಳನ್ನು ಪತ್ತೆಹಚ್ಚುವುದು ರಾಜ್ಯದ ಪ್ರಜೆಗಳ ಹಕ್ಕು ಸ್ವಾತಂತ್ರ್ಯಗಳನ್ನು ತಿರಸ್ಕಾರದಿಂದ ಕಂಡು ಫ್ಯಾಸಿಸಂನ ಹಾದಿಯನ್ನು ಸಲೀಸುಗೊಳಿಸಿದರೆ ದೇಶ ಒಂದು ಬಯಲು ಬಂಧಿಖಾನೆಯಾಗುತ್ತದೆ.

ವಿ.ಕ. ಸೇರಿದಂತೆ ನಮ್ಮ ಜನಪ್ರಿಯ ಮಾಧ್ಯಮಗಳಲ್ಲಿ ಈಗ "ಮಾನವಹಕ್ಕುಗಳ ಹೋರಾಟಗಾರರನ್ನು" ದೇಶದ್ರೋಹಿಗಳಂತೆಯೇ ಚಿತ್ರಿಸಲಾಗುತ್ತಿದೆ. ಹಳೆಮನೆ ಮತ್ತು ಅಸ್ಸಾದಿ ಅವರನ್ನು ನಕ್ಸಲ್ ಪರ ಎಂದು ಯಾವ ಸಾಕ್ಷ್ಯಾಧಾರವೂ ಇಲ್ಲದೆ ವಿ.ಕ. ಹೆಸರಿಸಿ, ಸಾರ್ವಜನಿಕ ಅಭಿಪ್ರಾಯದ ಕಟಕಟೆಯಲ್ಲಿ ನಿಲ್ಲಿಸಿರುವುದರ ಹಿಂದೆ, ಪ್ರಜಾಪ್ರಭುತ್ವ ಹಾಗೂ ಮಾನವಹಕ್ಕುಗಳ ಬಗ್ಗೆ ಅದಕ್ಕೆ ಇರುವ ಅಸಹನೆಯೇ ಕಾರಣ. ಈ ಅಸಹನೆಯ ಫ್ಯಾಸಿಸ್ಟ್ ರಾಜಕೀಯ ವಿ.ಕ.ದ ಗದ್ಯದಲ್ಲಿ ಹೇಗೆ ಅಭಿವ್ಯಕ್ತಗೊಳ್ಳುತ್ತದೆ ಎನ್ನುವುದಕ್ಕೆ ನಕ್ಸಲ್ ಎಂಬ ಪದಪ್ರಯೋಗವನ್ನೇ ಗಮನಿಸಬಹುದು.


ಮುಜಾಫರ್

ನಕ್ಸಲ್, ನಕ್ಸಲೀಯ, ನಕ್ಸಲ್ ಪರ, ನಕ್ಸಲ್ ಬೆಂಬಲಿಗ, ನಕ್ಸಲ್ ಒಡನಾಡಿ, ನಕ್ಸಲ್ ಸಹಾನುಭೂತಿ ಉಳ್ಳವ- ಈ ವ್ಯಕ್ತಿಗಳ ಗುರುತುಚಹರೆಗಳು ಏನು? ಅವರಲ್ಲಿ ಒಬ್ಬರನ್ನು ಮತ್ತೊಬ್ಬರಿಂದ ಪ್ರತ್ಯೇಕಿಸುವುದು ಹೇಗೆ? ಅಥವಾ ಅವರ ನಡುವೆ ವ್ಯತ್ಯಾಸವೇ ಇಲ್ಲವೋ? ಈ ಪ್ರಶ್ನೆಗಳಿಗೆ ರಾಜ್ಯ ಪೊಲೀಸು ಇಲಾಖೆ ಮಾತ್ರವಲ್ಲ, ವಿ.ಕ.ದಂತಹ ಪತ್ರಿಕೆಗಳೂ ಪ್ರಾಮಾಣಿಕವಾಗಿ ಉತ್ತರಗಳನ್ನು ಕಂಡುಕೊಳ್ಳುವುದು ಪ್ರಜಾಪ್ರಭುತ್ವದ ಉಳಿವಿನ ದೃಷ್ಟಿಯಿಂದ ಅತ್ಯಂತ ಜರೂರಿನದ್ದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕುಖ್ಯಾತ ಪಾತಕಿ, ಸೈನೈಡ್ ಮೋಹನನಿಗೆ ಬಲಿಯಾದ ಬೆಳ್ತಂಗಡಿಯ ತರುಣಿ ಲೀಲಾವತಿ ಓರ್ವ ನಕ್ಸಲೀಯಳೆಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಭಾವಿಸಿ, ಆಕೆಯ ಮನೆಯವರಿಗೆ ಬಗೆಬಗೆಯಾಗಿ ಕಿರುಕುಳ ಕೊಟ್ಟಿದ್ದರು. ಆಕೆ ನಾಪತ್ತೆಯಾದದ್ದು ಮೋಹನ ತಿನ್ನಿಸಿದ ಸೈನೈಡ್‌ನಿಂದ. ಆದರೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಆಕೆ ನಕ್ಸಲೀಯಳಾದ್ದರಿಂದ ಭೂಗತಳಾಗಿದ್ದಾಳೆ ಎಂದು ಭಾವಿಸಿದರು. ಮೋಹನನಿಗೆ ಬಲಿಯಾಗಿ ನಾಪತ್ತೆಯಾದ 20 ತರುಣಿಯರಲ್ಲಿ ಲೀಲಾವತಿಯ ಬಗ್ಗೆ ಮಾತ್ರ ಪೊಲೀಸರು ಹಾಗೆ ಭಾವಿಸಲು ಇದ್ದ ಕಾರಣವೇನು? ಲೀಲಾವತಿ ಸಿಐಟಿಯು ಕಾರ್ಮಿಕ ಸಂಘಟನೆ ಹಾಗೂ ದಸಂಸ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಳು. ಅಂದರೆ ವ್ಯಕ್ತಿಯೊಬ್ಬ ನಕ್ಸಲೀಯ ಎಂದು ಸಂದೇಹಿಸಲು ಆತ ರಾಜ್ಯದ ಯಾವುದೇ ಪ್ರಗತಿಪರ ಸಂಘಟನೆ ಅಥವಾ ಹೋರಾಟದಲ್ಲಿ ಭಾಗಿಯಾಗುವುದೂ ಒಂದು ಪುರಾವೆ!

ಛತ್ತೀಸ್‌ಗಢ, ಜಾರ್ಖಂಡ್‌ಗಳಲ್ಲಿ ಗಣಿಗಾರಿಕೆಯಿಂದ ನಿರ್ಗತಿಕರಾಗುತ್ತಿರುವ ಆದಿವಾಸಿಗಳ ಬಗ್ಗೆ ಕಾಳಜಿ ತೋರುವುದು ಕೂಡ ನಕ್ಸಲೀಯ ಅಥವಾ ಅದು ನಕ್ಸಲ್ ಸಹಾನುಭೂತಿ ಮಾತ್ರವೇ? ಕರ್ನಾಟಕದಲ್ಲಿ ಮಲೆನಾಡಿನ ಆದಿವಾಸಿಗಳನ್ನು ಒಕ್ಕಲೆಬ್ಬಿಸಬಾರದು ಎಂದು ಹೇಳಿದರೆ ನಕ್ಸಲೀಯರನ್ನು ಬೆಂಬಲಿಸಿದ ಹಾಗೋ? ಗಣಿರೆಡ್ಡಿಗಳನ್ನು ಟೀಕಿಸುವುದನ್ನು ನಕ್ಸಲೀಯ ಅಥವಾ ನಕ್ಸಲ್ ಪರ ಎಂದು ಕರೆಯಬಹುದೋ?

ಈ ಬಗ್ಗೆ ವಿ.ಕ. ಸಂಪಾದಕರೇ ಆದಷ್ಟು ಬೇಗ ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದು. ಯಾಕೆಂದರೆ ವಿ.ಕ. ಸಂಪಾದಕರ ಪ್ರಕಾರ ಯಾರು ನಕ್ಸಲೀಯ ಹಾಗೂ ಯಾರು ಯಾರು ನಕ್ಸಲ್ ಪರ, ನಕ್ಸಲ್ ಬೆಂಬಲಿಗ, ನಕ್ಸಲ್ ಸಹಾನುಭೂತಿ ಉಳ್ಳವರು ಎಂದು ನಿಖರವಾಗಿ ಗೊತ್ತಾಗದೆ ಹಳೆಮನೆ ಮತ್ತು ಅಸ್ಸಾದಿ ಅವರ ಕೇಸಿನಲ್ಲಿ ಏನೂ ಹೇಳಬರುವುದಿಲ್ಲ. ಹಳೆಮನೆಯವರು ಕರ್ನಾಟಕದ ಎಡಪಂಥೀಯ ಸಾಂಸ್ಕೃತಿಕ ಚಳವಳಿಗಳಾದ ಸಮುದಾಯ, ಬಂಡಾಯ, ದಸಂಸ ಮತ್ತು ಅವೆಲ್ಲವಕ್ಕೂ ಮೊದಲಿನ 'ಒಡನಾಡಿ' ಸಂಘಟನೆಯ ಚಟುವಟಿಕೆಗಳಲ್ಲಿ ನಿಕಟವಾಗಿ ತೊಡಗಿಕೊಂಡಿದ್ದವರು. ಮುಜಾಫರ್ ಅಸ್ಸಾದಿ ವಿಶ್ವವಿದ್ಯಾಲಯದಲ್ಲಿ ಪಾಠ ಮಾಡುವುದರ ಜೊತೆ, ಸೆಮಿನಾರುಗಳಲ್ಲಿ ಭಾಗವಹಿಸಿ ಅಸಮಾನತೆ, ಮತೀಯ ದ್ವೇಷ ಇತ್ಯಾದಿ ಸಮಸ್ಯೆಗಳ ಬಗ್ಗೆ ಉಪನ್ಯಾಸ ಮಾಡುತ್ತಾರೆ ಮತ್ತು ಲೇಖನಗಳನ್ನು ಬರೆಯುತ್ತಾರೆ ಎಂಬುದನ್ನು ಬಿಟ್ಟರೆ ಅವರ ಬಗ್ಗೆ ನನಗೆ ಹೆಚ್ಚಾಗಿ ಗೊತ್ತಿಲ್ಲ.


ಈ ಇಬ್ಬರು ಮಹನೀಯರೂ ಭಾರತದಲ್ಲಿ ತಾವು ಇದನ್ನೆಲ್ಲ ಮಾಡಲು ಸ್ವತಂತ್ರರಿದ್ದೇವೆ ಎಂಬ ನಂಬಿಕೆಯಲ್ಲಿಯೇ ಮಾಡಿದ್ದಾರೆ. ಅವರ ಈ ನಂಬಿಕೆ ಪೆದ್ದುತನದ್ದಾಗಿದ್ದು, ಅವರ ಚಟುವಟಿಕೆ 'ನಕ್ಸಲೀಯವೋ' ಎಂಬುದರ ಬಗ್ಗೆಯೂ ವಿ.ಕ. ಸಂಪಾದಕರು ಸ್ಪಷ್ಟೀಕರಣ ಕೊಡಬೇಕು. ಇತ್ತೀಚೆಗೆ ಮಂಗಳೂರಿನ ಒಂದು ಸಭೆಯಲ್ಲಿ ವಕೀಲ ನೌಶಾದ್ ಕೊಲೆಯ ಸೂಕ್ತ ವಿಚಾರಣೆ ನಡೆದು ಅಪರಾಧಿಗಳಿಗೆ ಶಿಕ್ಷೆ ಆಗದಿದ್ದರೆ ಪೊಲೀಸರಿಗೆ ನೆಮ್ಮದಿಯಿಂದ ಇರಲು ಬಿಡುವುದಿಲ್ಲ ಎಂದು ಕೋಮು ಸೌಹಾರ್ದ ವೇದಿಕೆಯ ಕೆ.ಎಲ್. ಅಶೋಕ್ ಭಾಷಣ ಬಿಗಿದರು. ಅಶೋಕ್ ನಕ್ಸಲೀಯ ಎಂದು ವಿ.ಕ. ಘೋಷಿಸಿಬಿಟ್ಟಿತು.

ಹಾಗಾಗಿ ಯಾವುದು ನಕ್ಸಲೀಯ ಯಾವುದು ಅಲ್ಲ ಎಂದು ಮೊದಲೇ ಸ್ಪಷ್ಟವಾಗಿಬಿಟ್ಟರೆ ನಕ್ಸಲ್ ಅಲ್ಲದ ಅಮಾಯಕರು ವಿ.ಕ.ದ ನಕ್ಸಲ್ ಬೇಟೆಗೆ ಈಡಾಗುವುದಾದರೂ ತಪ್ಪುತ್ತದೆ.

● ಜಿ. ರಾಜಶೇಖರ

ರಾಜಕೀಯ ಚಲನಚಿತ್ರ ಪ್ರಶಸ್ತಿಗಳು 2009

ಶ್ರೇಷ್ಠ ನಟ	: ಯಡಿಯೂರಪ್ಪ
ಶ್ರೇಷ್ಠ ಖಳನಾಯಕ	: ಜನಾರ್ದನ ರೆಡ್ಡಿ
ಶ್ರೇಷ್ಠ ಪೋಷಕನಟ	: ಶ್ರೀರಾಮುಲು
ಶ್ರೇಷ್ಠ ನಟಿ	: ಶೋಭಾ ಕರಂದ್ಲಾಜೆ
ಅತ್ಯುತ್ತಮ ಕಥೆ	: ಜಗದೀಶ್ ಶೆಟ್ಟರ್
ಅತ್ಯುತ್ತಮ ನಿರ್ದೇಶಕಿ	: ಸುಷ್ಮಾ ಸ್ವರಾಜ್
ಅತ್ಯುತ್ತಮ ಸಂಭಾಷಣೆ	: ರೇಣುಕಾಚಾರ್ಯ
ಶ್ರೇಷ್ಠ ನಿರ್ಮಾಪಕ	: ಅನಂತಕುಮಾರ್
ಅತ್ಯುತ್ತಮ ಸಂಗೀತ	: ಟಿವಿ ಒಂಬತ್ತು ಮತ್ತು ಸುವರ್ಣ ನ್ಯೂಸ್
ಅತ್ಯುತ್ತಮ ಸಾಹಿತ್ಯ	: ಸದಾನಂದ ಗೌಡ
ಶ್ರೇಷ್ಠ ಚಿತ್ರ	: ಮುದುಡಿದ ತಾವರೆ ಅರಳಿತು!



ಹಿಂದುಳಿದವನ ಹಿಂಬಡ್ತಿ ಪ್ರಸಂಗ

"ಇದು ಕಥೆಯಲ್ಲ. ಯಾಕೆ ಕಥೆಯಲ್ಲ ಅಂದರೆ ನಾನು ...ವುದೇ ವಿಶ್ವವಿದ್ಯಾಲಯದಲ್ಲಿ ಯಾವುದೇ ಸಾಹಿತ್ಯ ...ರದಲ್ಲಿ ಪದವಿ ಪಡೆದವನಲ್ಲ. ಹೊಟ್ಟೆಪಾಡಿಗಾಗಿ ...ಪಾತ್‌ನಲ್ಲಿ ಟೀ ಅಂಗಡಿ ಇಟ್ಟುಕೊಂಡಿರುವವ. ...ರಿ ಕಚೇರಿಗಳಿರುವ ಆಯಕಟ್ಟಿನ ಒಂದು ಪ್ರದೇಶ ...ರುವ ನಾಲ್ಕು ಟೀ ಅಂಗಡಿಗಳಲ್ಲಿ ನನ್ನದೂ ಒಂದು ಅಂಗಡಿ. ನನ್ನಲ್ಲಿ ಬರುವ ಹಲವಾರು ಗಿರಾಕಿಗಳಲ್ಲಿ ಕರಿಯಣ್ಣನೂ ಒಬ್ಬ. ಇವನ ಕುತೂಹಲಕರ ...ಯವೇನೆಂದರೆ, ಇವನು ಯಾವತ್ತೂ ಯಾರಿಗೂ ...ಕೊಡಿಸಿದವನಲ್ಲ. ಬದಲಾಗಿ ಬಂದವರೊಂದಿಗೆ ಹಲ್ಲು ...ತ್ತಾ ಅವರಿಗೇ ಟೋಪಿ ಹಾಕುತ್ತಿದ್ದ.

...ಬರೀ ಅಷ್ಟೇ ಆಗಿದ್ದರೆ ಅವನ ಬಗ್ಗೆ ಬರೆಯುವ ...ತ್ಯ ನನಗೆ ಇರುತ್ತಿರಲಿಲ್ಲ. ಆತ ನನ್ನಲ್ಲಿ ಶರತ್ತುಬದ್ಧ ... ಕೇಳಿದ್ದ. ಅದೆಂತಹ ಸಾಲ? ಪ್ರತಿ ದಿನ ಒಂದು ... ಟೀ! ಒಂದು ರೂಪಾಯಿ ಬೀಡಿ! "ತಿಂಗಳ ... ಆಗ್ತಿದ್ದಾಗೆ ನಿನ್ನ ಬಾಕಿ ಚುಕ್ತಾ ಮಾಡ್ತೀನಿ" ...ದ್ದ. ನಾನು ನಗುತ್ತಾ ಒಪ್ಪಿಕೊಂಡಿದ್ದೆ.

...ಆದರೆ ಸಂಬಳ ಬಂದ ದಿನದಿಂದ ಆಸಾಮಿ ನಾಪತ್ತೆ! ...ಗೆ ನನ್ನ ಇತರ ಗಿರಾಕಿಗಳೂ ನಾಪತ್ತೆ!! ನನ್ನ ಅಂಗಡಿಗೆ ...ದ ವ್ಯಾಪಾರದಲ್ಲಿ ನೂರಾರು ರೂಪಾಯಿ ...ತವಾಯಿತು. ಕಾರಣವೇನಿರಬಹುದೆಂದು ನಾನು ... ಬಾಚಿ ಆಚೆ ನೋಡಿದಾಗ ನನ್ನ ಮಾಮೂಲು ...ಗಳೊಂದಿಗೆ ಕರಿಯಣ್ಣ ಮತ್ತೊಂದು ಟೀ ಅಂಗಡಿಯ ...ಪ ನಿಂತಿದ್ದ! ದುಡ್ಡಿಗೆ ದುಡ್ಡೂ ಹೋಯಿತು. ...ಗೆ ಗಿರಾಕಿಗಳೂ ಹೋದರಲ್ಲ ಅಂತ ಚಿಂತೆಯಾಯಿತು. ...ಕ್ರಮೇಣ ಮರೆತುಹೋಯಿತು.

...ಹೆಂಡತಿ ಮಕ್ಕಳು ಊರಲ್ಲಿ ಇಲ್ಲದಿದ್ದಾಗ ನನಗೆ ...ಯುವ ಆಸೆ ಅದು ಹೇಗೋ ಜಾಗೃತವಾಗುತ್ತೆ. ...ಒಂದು ದಿನ ನೈಂಟಿ ಹಾಕಿ ಮನೆಗೆ ...ಗೋಣವೆಂದು ಬಾರ್‌ಗೆ ಹೋದರೆ ಬಾರ್ ಹತ್ತಿರ ...ಣ್ಣ! ಈತ ಹೆಸರಿಗೆ ಕರಿಯಣ್ಣನಾದರೂ ಮೈಬಣ್ಣ ... ನನ್ನ ಮುಖ ನೋಡಿದೇಟಿಗೆ ಮುಗುಳ್ನಕ್ಕು ...?" ಅಂದ.

...ನು "ಸುಮ್ನೆ!" ಅಂದೆ.

...ನೈಂಟಿ ಹಾಕ್ತಿಯಾ?" ಎನ್ನುತ್ತಾ ನನ್ನ ಹೆಗಲ ... ಕೈಯಿಟ್ಟ. ನಾನು ಕರಗಿಹೋದೆ.


...ಯಾವ ಬ್ರಾಂಡ್?" ಅಂದ.

...ಯಾವುದೇ ಅಗ್ಗದ ಬೆಲೆಯ ರಮ್, 60 ... ಅಂದೆ. ಆದರೆ ಕರಿಯಣ್ಣ ನನ್ನ ...ಟ್ ಎಂಸಿ ವಿಸ್ಕಿಯನ್ನೇ ಹೇಳಿದ.

... ಚೂರುಚೂರೇ ನನ್ನೊಳಗೆ ...ತ್ತಿದ್ದಂತೆ ನನ್ನೊಳಗಿಂದ ಸತ್ಯ ...ರಲು ತವಕಿಸುತ್ತಿದ್ದದ್ದು ಕರಿಯಣ್ಣನ ...ದಲ್ಲಿ ಗೋಚರವಾಯಿತು.

...ನು ಸರ್ಕಾರಿ ನೌಕರನಾಗಿ ಹೀಗೆ ...ದಾ?" ಎಂದೆನ್ನುತ್ತಾ ನಾನು ...ಗೊಂಡೆ.

...ರಿ ನೌಕರನಿಗೆ ಬರೀ ಒಂದು ಮಗುವಿದ್ರೆ ... ಇನ್‌ಕ್ರೀಮೆಂಟ್ ಎಂಬ ಯೋಜನೆಯನ್ನು ಸರ್ಕಾರ ...ಸಿದಾಗ ಕರಿಯಣ್ಣ ಮತ್ತು ಕೆಂಪಮ್ಮ ದಂಪತಿಗಳಿಗೆ ... ಗಂಡು ಮಗುವಿತ್ತು. ಇಂತಹ ಸಂದರ್ಭದಲ್ಲಿ ...ಹರಣ ಚಿಕಿತ್ಸೆಯನ್ನು ದಂಪತಿಗಳಲ್ಲಿ ಯಾರು ...ಕೊಳ್ಳುವುದು? ಹೆಂಡತಿ ಸಂತಾನಹರಣ ಚಿಕಿತ್ಸೆಗೆ ... ಮುಂದೆಂದಾದರೂ ಗಂಡನಿಂದ ಮತ್ತಾವಳಿಗೋ ...ಗಿ ಅದೆಲ್ಲ ತಕರಾರೇ ಬೇಡವೆಂದು ಆಪರೇಷನ್‌ಗೆ ಒಳಗಾದ.



ತನ್ನ ಶೀಲವನ್ನು ಶಂಕಿಸಿ ಮಾತಾಡಿದ್ದ ಗಂಡನನ್ನು ಕೆಂಪಮ್ಮ ವಾಚಾಮಗೋಚರ ಬೈದದ್ದಲ್ಲದೆ ಮೂರನೇ ದರ್ಜೆಯ ಭಾಷೆಯಲ್ಲಿ "ಅವನ ಶಿಶ್ನದಿಂದ ಬಿದ್ದ ಹುಳಗಳೆ ನನ್ನ ಪಿಂಡದಲ್ಲಿ ಬೆಳಿತಿರೋದು. ಇದನ್ನು ಬೇಕಾದ್ರೆ ಪರೀಕ್ಷೆ ಮಾಡಿಸಿ ತೋರಿಸದಿದ್ರೆ ನಾನು ಒಬ್ಬನಿಗೆ ಹುಟ್ಟಿದವಳೇ ಅಲ್ಲ'' ಎಂದು ಭೀಷ್ಮ ಪ್ರತಿಜ್ಞೆಗೈದಳು.



ಕುಬಾಳ್ ಜಗದೀಶ್

ಒಂದೇ ಮಗುವಿನ ಸಂಸಾರವೆಂಬ ಕಾರಣಕ್ಕೆ ಕರಿಯಣ್ಣನಿಗೆ ಪ್ರಮೋಷನ್ ಸಿಕ್ಕಿತು ಮತ್ತು ಇನ್‌ಕ್ರೀಮೆಂಟ್ ಜಾಸ್ತಿಯಾಗಿತ್ತು. ಈತ ಮೂರು ಇನ್‌ಕ್ರೀಮೆಂಟ್ ಪಡೆಯುವಷ್ಟರಲ್ಲಿ ಕೆಂಪಮ್ಮ ಮತ್ತೆ ಬಸಿರಾದಳು. ತಾನು ಬಸಿರಾಗಿದ್ದು ಕೆಂಪಮ್ಮನಿಗೆ ತಿಳಿಯುವಷ್ಟರಲ್ಲಿ ಹನ್ನೆರಡು ವಾರವಾಗಿತ್ತು. ಆ ಸ್ಥಿತಿಯಲ್ಲಿದ್ದ ಕೆಂಪಮ್ಮನಿಗೆ ಗರ್ಭಪಾತ ಮಾಡಲು ಯಾವ ವೈದ್ಯರೂ ಒಪ್ಪಲಿಲ್ಲ.

ಸಂಗವ್ವಕ್ಕನ ಮುದ್ದಿನ ಸೊಸೆಯು ಬಸಿರಾದ ಸುದ್ದಿಯಂತೆ ಕೆಂಪಮ್ಮ ಬಸಿರಾಗಿದ್ದ ಸುದ್ದಿಯೂ ಕಾಡ್ಗಿಚ್ಚಿನಂತೆ ಹಬ್ಬಿ

ಹಾಸ್ಯ ಲೇಖನ

ನಮ್ಮ ಕಥಾ ನಾಯಕ ಕರಿಯಣ್ಣನ ಮೇಲಧಿಕಾರಿಯ ಕಿವಿಗೆ ಬೀಳಲು ಹೆಚ್ಚು ಸಮಯ ಹಿಡಿಯಲಿಲ್ಲ. ಇಷ್ಟರಲ್ಲಿ ಕರಿಯಣ್ಣನೇ "ಅದು ನನ್ನಿಂದಾಗಿದ್ದಲ್ಲ'' ಎಂದು ಒಂದಿಬ್ಬರಲ್ಲಿ ಹೇಳಿದ್ದು ದಿನ ಬೆಳಗಾಗುವುದರೊಳಗೆ ಎಲ್ಲೆಡೆ ಹಬ್ಬಿ ಸಮಯ ವ್ಯರ್ಥ ಮಾಡುವವರ ಬಾಯಿಗೆ ಕರಿಯಣ್ಣ ವಸ್ತುವಾಗಿದ್ದ.

ಕೊನೆಗೆ ಈ ವಿಷಯ ಕೆಂಪಮ್ಮಳ ಕಿವಿಗೆ ಬಿದ್ದು ಆಕೆ ಕೆರಳಿ ಕೆಂಡವಾದಳು. ಕೆಂಪಮ್ಮ ಬಸಿರಾಗಿದ್ದು ತನ್ನಿಂದಲ್ಲ ಎಂದು ಕರಿಯಣ್ಣ ಹೇಳಿದಾಗ ಅವನಲ್ಲಿ ಯಾವುದೇ ವಿಷ ಇರಲಿಲ್ಲ. ಒಂದು ಜಾತಿಯ ಪರಂಪರೆ ಅವನ ಮಾತಿನಲ್ಲಿ ವ್ಯಕ್ತವಾಗಿತ್ತು. ಈ ವಿಚಾರವನ್ನು ಕರಿಯಣ್ಣ ವಿಸ್ಕಿಯನ್ನು ಅಮೃತವೆಂದು ಆರೋಪಿಸಿ ನನ್ನಲ್ಲೂ ಪ್ರಮಾಣ ಮಾಡಿ ಹೇಳಿದ್ದ.

ಪತಿವ್ರತಾ ಶಿರೋಮಣಿ ಅನ್ನಿಸಿಕೊಳ್ಳುವ ಉದ್ದೇಶವೇ ಇಲ್ಲದ ಕೆಂಪಮ್ಮನಿಗೆ ಸಿನಿಮಾ ನಟ ವಿಷ್ಣುವರ್ಧನ್ ನಂತಿರುವ ಗಂಡನನ್ನು ತನ್ನ ಹದ್ದುಬಸ್ತಿನಲ್ಲಿಟ್ಟುಕೊಳ್ಳುವುದರಲ್ಲೇ ಕಾಲಹರಣವಾಗಿತ್ತು. ಇದ್ದ ಗಂಡನಿಂದ ದಾಹವನ್ನು ತೀರಿಸಿಕೊಂಡಿರುವುದೇ ನಾಗರಿಕತೆಯ ಪರಾಮಾವಧಿಯಂತಲೂ ನೆಮ್ಮದಿಯಾಗಿದ್ದ ಕೆಂಪಮ್ಮನಿಗೆ ಗಂಡ ಆಡಿದ ಮಾತಿನಿಂದ ಸ್ವಾಭಿಮಾನಕ್ಕೆ ಧಕ್ಕೆಯಾಗಿತ್ತು.

ಕರಿಯಣ್ಣ ಮತ್ತು ಕೆಂಪಮ್ಮಳ ಖಾಸಗಿ ವಿಷಯದಲ್ಲಿ ತಾನ್ಯಾಕೆ ತಲೆಹಾಕಲಿ ಎಂದು ಸುಮ್ಮನಿದ್ದ ಮೇಲಧಿಕಾರಿಗೆ ಈ ಗಂಡ-ಹೆಂಡತಿಯರ ದಾಳಿ ವಾಗ್ದಾಳಿ ಕಸಿವಿಸಿಯನ್ನೂ ಅದರೊಂದಿಗೆ ರಂಜನೆಯನ್ನೂ ಒಟ್ಟಿಗೇ ಉಂಟುಮಾಡಿದ್ದವು. ಆದರೆ ಇದೆಲ್ಲ ತೀರ ವಿಪರೀತ ಹಂತಕ್ಕೆ ಹೋಯಿತು. ಆಗ ಸಾಹೇಬರು ಇನ್ನೂ ಸುಮ್ಮನಿರುವಂತಿರಲಿಲ್ಲ. ಬೇರೆಯವರೊಬ್ಬರ ಮೂಲಕ ಕೆಂಪಮ್ಮನಿಗೆ ಹೇಳಿ ಕಳುಹಿಸಿದರು.

ತನ್ನ ಎದುರು ನಿಂತಿದ್ದ ಹಳ್ಳಿಯ ಹೆಣ್ಣು ಮಗಳು ಕೆಂಪಮ್ಮನನ್ನು 'ಮೇಡಂ' ಎಂದು ಸಂಬೋಧಿಸಿ ಮಾತಾಡಬೇಕೋ? 'ಅಮ್ಮ' ಎಂದು ಸಂಬೋಧಿಸಬೇಕೋ? ಎಂಬ ಸಂದಿಗ್ಧದಲ್ಲಿದ್ದ ಸಾಹೇಬರಿದ್ದಾಗ ಅವರ ಸಮಸ್ಯೆಯನ್ನು ಅರ್ಥ ಮಾಡಿಕೊಂಡ ಸ್ಟೆನೊ ನಳಿನಾಕ್ಷಿ "ಏನಮ್ಮ ಸಮ್ಮ ಹಾಬ್ಲು?" ಎಂದು ಹೇಳಿದರು. ಆ ಕ್ಷಣ ಕೆಂಪಮ್ಮನ ಕೋಪದ ಕಟ್ಟೆ ಒಡೆದೇಹೋಯಿತು.

ತನ್ನ ಶೀಲವನ್ನು ಶಂಕಿಸಿ ಮಾತಾಡಿದ್ದ ಗಂಡನನ್ನು ಕೆಂಪಮ್ಮ ವಾಚಾಮಗೋಚರ ಬೈದದ್ದಲ್ಲದೆ ಮೂರನೇ ದರ್ಜೆಯ ಭಾಷೆಯಲ್ಲಿ "ಅವನ ಶಿಶ್ನದಿಂದ ಬಿದ್ದ ಹುಳಗಳೆ ನನ್ನ ಪಿಂಡದಲ್ಲಿ ಬೆಳಿತಿರೋದು. ಇದನ್ನು ಬೇಕಾದ್ರೆ ಪರೀಕ್ಷೆ ಮಾಡಿಸಿ ತೋರಿಸದಿದ್ರೆ ನಾನು ಒಬ್ಬನಿಗೆ ಹುಟ್ಟಿದವಳೇ ಅಲ್ಲ" ಎಂದು ಭೀಷ್ಮ ಪ್ರತಿಜ್ಞೆಗೈದಳು.

ಆಕೆಯ ಎದುರು ಮಾತು ಕಳೆದುಕೊಂಡಂತೆ ಕೂತಿದ್ದ ಸಾಹೇಬನಿಗೆ ಕರಿಯಣ್ಣನ ಗೈರುಹಾಜರಿಯಲ್ಲಿ ಕೆಂಪಮ್ಮಳನ್ನು ಕೆಣಕಬಾರದಿತ್ತು ಎಂದೆನಿಸಿತು. ಸಾಹೇಬ ಅವಳಿಗೆ ಕೈಮುಗಿದು ಹೊರಗೆ ಹೋಗಬಹುದೆಂದು ಸೂಚಿಸಿದ. ಅದನ್ನು ಅರ್ಥಮಾಡಿಕೊಳ್ಳದ ಕೆಂಪಮ್ಮ ಬುಸುಗುಡುತ್ತಲೇ ನಿಂತಿದ್ದರಿಂದ ಸ್ಟೆನೊ ನಳಿನಾಕ್ಷಿ "ನೀನಿನ್ನು ಹೋಗಬಹುದು" ಎಂದಳು. ಆದರೂ ಕದಲದೇ ನಿಂತಿದ್ದ ಕೆಂಪಮ್ಮನಿಗೆ ಸಾಹೇಬ ಸಮಾಧಾನದ ನಾಲ್ಕು ಮಾತು ಹೇಳಿ ಸಾಂತ್ವನ ಹೇಳಿದ ಮೇಲೆ ಆಕೆ ನಿರ್ಗಮಿಸಿದಳು.

ಸಾಹೇಬರ ಛೇಂಬರಿಗೆ ಕೆಂಪಮ್ಮ ಬಂದುಹೋದ ವಿಚಾರ ರೆಕ್ಕೆಪುಕ್ಕ ಪಡೆದು ಸಾಂಬಾರ ಕಾಗೆಯಂತೆ ಕುಪ್ಪಳಿಸಿ ಕುಪ್ಪಳಿಸಿ ಹಾರಿ ಸನಿಹದಲ್ಲಿದ್ದ ನಾಲ್ಕಾರು ಸರ್ಕಾರಿ ಕಚೇರಿಗಳಿಗೆ ತಿಳಿದು ಕೊನೆಗೂ ತಣ್ಣಗಾಗುತ್ತಿದ್ದಂತೆ ಕೆಂಪಮ್ಮ ಅವಳಿಜವಳಿ ಗಂಡು ಮಕ್ಕಳನ್ನು ಹಡೆದಳು. ಆ ಎರಡೂ ಮಕ್ಕಳಲ್ಲಿ ಹರಿದಾಡುತ್ತಿದ್ದ ವಂಶವಾಹಿನಿ ಕರಿಯಣ್ಣನದ್ದೇ ಆಗಿತ್ತು.

ಇದೆಲ್ಲದರಿಂದ ಮುಖಭಂಗಕ್ಕೀಡಾಗಿದ್ದ ಕರಿಯಣ್ಣನಿಂದ ಸರ್ಕಾರ ಮೂರು ಇನ್‌ಕ್ರೀಮೆಂಟ್‌ಗಳನ್ನು ಹಿಂಪಡೆಯಿತಲ್ಲದೇ ಅವನಿಗೆ ಹಿಂಬಡ್ತಿ ನೀಡಿ ನಾನು ಟೀ ಅಂಗಡಿ ನಡೆಸುತ್ತಿದ್ದ ಸಮೀಪದ ಕಚೇರಿಗೆ ವರ್ಗ ಮಾಡಿತ್ತು.

ಇದನ್ನೆಲ್ಲ ಕೇಳಿ "ನಿನಗೆ ಆಪರೇಷನ್ ಮಾಡಿದ ಡಾಕ್ಟರ್ ಮೇಲೆ ಕೇಸು ಹಾಕ್ಬೇಕಿತ್ತು" ಅಂದೆ.

"ಓ.... ಆ .... ಮಕ್ಕಳು ನನ್ನ ಕತೇನೆಲ್ಲ ಕೇಳಿ ನಾವು ಮಾಡೋ ಆಪರೇಷನ್‌ನಲ್ಲಿ ಲಕ್ಷಕ್ಕೆ ಒಂದು ಇಂಥ ಕೇಸು ಆಗುತ್ತೆ ಅದನ್ನು ನಾವೇನು, ಕೋರ್ಟು ಕೂಡ ಗಂಭೀರವಾಗಿ ತಗಳಲ್ಲ, ಏನು ಕಿತ್ಕೋತೀಯ ಕಿತ್ಕೋ ಹೋಗು ಅಂದ್ರು. ನಾನು ಸುಮ್ನಾದೆ. ಆ ದೇವರು ಅದೇನೇನು ಕಷ್ಟ ಕೊಡ್ತಾನೋ ಕೊಡ್ಲಿ ನೋಡೇಬಿಡ್ತೀನಿ" ಎಂದ ಕರಿಯಣ್ಣ.

"ಈಗ ನಿನ್ನ ಹೆಂಡ್ತಿ ಎಲ್ಲಿದ್ದಾಳೆ?" ಅಂದೆ.

"ಆ ಒಂದು ಪ್ರಕರಣದಿಂದ ಏನಾಯಿತಂದ್ರೆ ಆಕೆ ಕೆಮ್ಮುವಾಗ ಹೂಸಿದ್ರೂ ಡಾಕ್ಟರ್ ಹತ್ರ ಕರ್‍ಕೊಂಡ್ಹೋಗಿ ತೋರ್‍ಸಂಗೆ ಆಗಿದೆ" ಎಂದು ಮೌನವಾದ.

ನಾನು ಅವನ ಕೈಯಲ್ಲಿ ಕೈಯಿಟ್ಟು ಒಂದು ಭರವಸೆ ಕೊಟ್ಟೆ. "ನಾಳೆಯಿಂದ ನಿನಗೆ ದಿನಾ ಒಂದು ರೂಪಾಯಿ ಬೀಡಿ, ಒಂದು ಟೀ ಫ್ರೀ" ಅಂದೆ. ಆತ ಅರೆಮನಸ್ಸಿನಿಂದ "ನೀನು ಫ್ರೀಯಾಗೇನು ಕೊಡ್ಬೇಡ. ನನ್ನತ್ರ ದುಡ್ಡಿಲ್ಲದಾಗ ಕೊಡು ಸಾಕು'' ಅಂದ.

ಮರುದಿನ ಮಧ್ಯಾಹ್ನ ನನ್ನ ಟೀ ಅಂಗಡಿಗೆ ಬಂದು "ನಿನ್ನೆ ನೀನು ಮಾತು ಕೊಟ್ಟಿದ್ದು ಜ್ಞಾಪಕ......?" ಅಂದ.

"ಹೂ" ಅಂದೆ.

ಇವತ್ತಿಗೂ ಕರಿಯಣ್ಣ ನನ್ನಂಗಡಿಯ ಮಾಮೂಲು ಗಿರಾಕಿ. ಸರ್ಕಾರದಿಂದ ಅವನಿಗೆ ತಿಂಗಳಿಗೆ ಸಾವಿರ ರೂಪಾಯಿ ಖೋತ ಆಗುತ್ತಿರುವಾಗ ಇದೀ ತಿಂಗಳಿಗೆ ನನಗೆ ತೊಂಭತ್ತು ರೂಪಾಯಿ ನಷ್ಟವಾಗುತ್ತಿರುವುದು ದೊಡ್ಡ ವಿಷಯವೇ ಅಲ್ಲ. ಅದಕ್ಕಿಂತ ಮುಖ್ಯವಾಗಿ ಕರಿಯಣ್ಣ ನನ್ನ ಟೀ ಅನ್ನು ಎಲ್ಲರೆದುರು ಹೊಗಳಿ ನನ್ನ ವ್ಯಾಪಾರ ವೃದ್ಧಿಯಾಗುವಂತೆ ಮಾಡುತ್ತಿದ್ದಾನೆ.

ಅದಕ್ಕಿಂತ ಜಾಹೀರಾತು ಬೇಕಾ?

...ಹಸಿವೆಯೇ? ಯಾರು ಹೇಳಿದ್ದು?"


...ದ ಬರಿಕೆ
...ದು ಸಿಂತ ಹೊಲಗಳು
... ಕರಕಲಾದವು
... ಬಿಟ್ಟ ಭೂಮಿಯೊಳಗಿನ
...ಗೆಣಸುಗಳ ಬಗೆದು ತಿಂದು
... ಬಾಡಿಸಾದ ಮೇಲೆ
... ಗುಳೇ ಹೊರಟರು
... ಜನ ಹಸಿವಿಯಲಿ ಸತ್ತರು.

ಬರ ನೀಗಿಸಲೆಂದು
ಬಂದ ಮಳೆ ಹೊಳೆಗಳಲಿ ತುಂಬಿ
ಬೆಳೆದ ಬೆಳೆಯನ್ನೆಲ್ಲ ನಾಶ ಮಾಡಿತು
ಕೂಡಿಟ್ಟ ಕಾಳುಕಡ್ಡಿಗಳ ಕೊಳೆಸಿ
ಬಿತ್ತಿಯ ಸೂರುಗಳ ನೆಲಸಮ ಮಾಡಿತು
ದಾರಿಕಾಣದ ಜನ ಗುಳೇ ಹೊರಟರು
ಅರ್ಧ ಜನ ಹಸಿವೆಯಲಿ ಸತ್ತರು.


ಶಕ್ತಿ ಕೇಂದ್ರದ ಮೂರನೇ ಮಹಡಿಯ
ಸಿಂಹಾಸನದಿ ವಿರಾಜಮಾನನಾದ
ರಾಜ ಎಡಗೈಲಿ ಅಮೃತವನ್ನು
ಬಲಗೈಲಿ ಲಾಠಿಯನ್ನು ಹಿಡಿದು
ಟಿವಿಯಲಿ ಬಿತ್ತರಿಸಿದ ಸುದ್ದಿ ಕೇಳಿ
ಆಪ್ತ ಸಹಾಯಕನಿಗೆ ಹೇಳಿದ:
ಏನು?
ನನ್ನ ನಾಡಿನಲ್ಲಿ
ಹಸಿವೆಯೇ?
ಯಾರು ಹೇಳಿದ್ದು?



● ಕು.ಸ.ಮಧುಸೂದನ



ಅಮ್ಮನಿಲ್ಲದ ಹಬ್ಬ...



ಮೊನ್ನೆಯಷ್ಟೇ ಬಕ್ರೀದ್ ಹಬ್ಬ ಬಂದುಹೋಗಿದೆ. ನನ್ನ ಪಾಲಿಗೆ ಎಂದಿನಂತಿರಲಿಲ್ಲ ಈ ಬಾರಿಯ ಹಬ್ಬ. ಈ ಬಾರಿ ನನ್ನ ಜೊತೆಗೆ ತಾಯಿ ಇರಲಿಲ್ಲ. ಹಬ್ಬದ ಮುಂಜಾನೆ ಸಾಧಾರಣವಾಗಿ ಆರಂಭವಾಗುವುದೇ ತಾಯಿಯ ಹೆಜ್ಜೆ ಸದ್ದುಗಳೊಂದಿಗೆ. ಮಸೀದಿಯಲ್ಲಿ ತಕ್ಬೀರ್‌ಗಳ ಮೆರವಣಿಗೆ ಹೊರಡುವ ಮುಂಚೆಯೇ ಅಡುಗೆಮನೆಯ ದೀಪಗಳು ಹೊತ್ತಿಕೊಳ್ಳುತ್ತವೆ. ಇನ್ನೂ ಬೆಳಕು ಮೂಡಿರುವುದಿಲ್ಲ. ನಮಗೆಲ್ಲ ಅಮ್ಮನ ಕಣ್ಣ ಬೆಳಕಲ್ಲೇ ಮುಂಜಾವು. ಅಡುಗೆ ಮನೆಯ ಸದ್ದುಗಳನ್ನು, ಸಂಭ್ರಮಗಳನ್ನು ಮಲಗಿದಲ್ಲೇ ಆಲಿಸತೊಡಗುತ್ತೇವೆ. ಅಲ್ಲಿ ಕಡೆಯುವ ಸದ್ದು, ದೋಸೆ ಹುಯ್ಯುವ ಸದ್ದುಗಳು ಕೇಳ ತೊಡಗಿದಂತೆಯೇ ನಮ್ಮೊಳಗಿನ ಹಬ್ಬದ ಸಂಭ್ರಮಕ್ಕೆ ಕಳೆಯೇರತೊಡಗುತ್ತದೆ. ಅಮ್ಮ ಅಡುಗೆಮನೆಯಿಂದಲೇ "ಏಳಿ ಮಕ್ಕಳೇ ಏಳಿ ಮಕ್ಕಳೇ..." ಎನ್ನತೊಡಗಿದರೆ ಆಕೆಯ ಅಡುಗೆಮನೆಯೊಳಗಿನ ಬಹುತೇಕ ಕೆಲಸ ಮುಗಿದಂತೆಯೇ ಸರಿ. ಇನ್ನು ಸ್ನಾನದ ಮನೆಗೆ ನೀರು ತುಂಬಿಸಬೇಕು. ಆದಕ್ಕೆ ಮೊದಲು ಸ್ನಾನದ ಮನೆಯ ಒಲೆಗೆ ಬೆಂಕಿ ಹಾಕಬೇಕು. ಒಲೆಯಲ್ಲಿ ಬೆಂಕಿ ಧಗಿಸುತ್ತಿದ್ದಂತೆಯೇ ಬಾವಿಯಿಂದ ನೀರೆಳೆ ದೆಳೆದು ತುಂಬಿಸಬೇಕು.


ಸಕ್ಕರೆ ನಿದ್ದೆಯಿನ್ನು ಕಣ್ಣಲ್ಲಿ ತುಯ್ಯುತ್ತಾ ಇದೆ. ಮೆಲ್ಲನೆ ಎದ್ದು ಕುಳಿತು ಅಂಗೈಯನ್ನು ಬಿಡಿಸಿ ನೋಡುತ್ತೇವೆ. ಎರಡು ಕೈಗಳಲ್ಲಿ ಮದರಂಗಿ ಬಿಡಿಸಿದ ಹೂಬಳ್ಳಿಗಳು. ಎದ್ದು ನೇರ ಹಿತ್ತಲಿಗೆ ನಡೆದರೆ ಅಲ್ಲಿ ದೇವರಿಗೆ ಬಾಗಿದ ಆಕಾಶ. ಕೈಯನ್ನು ನೀರಿನಿಂದ ತೊಳೆದು ಬಟ್ಟೆಯಿಂದ ಉಜ್ಜಿ ಮತ್ತೆ ಆಕಾಶದ ಬೆಳಕಿಗೆ ಒಡ್ಡಿದರೆ ಅಂಗೈಯ ಕೆಂಪು ಫಳಫಳನೆ ಹೊಳೆಯತೊಡಗುತ್ತದೆ. ಅಡುಗೆಮನೆಯಲ್ಲಿ ಅದಾಗಲೇ ಹಬ್ಬದ ಕಳೆ ಏರತೊಡಗಿದೆ. ಬಾವಿಕಟ್ಟೆಯಿಂದ ತಾಯಿಯ ಧ್ವನಿ ಕೇಳುತ್ತದೆ. ಸ್ನಾನದ ಮನೆಗೆ ನೀರು ತುಂಬಿಸಲು ಆಕೆ ನಮ್ಮನ್ನು ಕರೆಯುತ್ತಿದ್ದಾಳೆ. ಮಕ್ಕಳ ಗುಂಪೆಲ್ಲ ಬಾವಿಕಟ್ಟೆಯ ಬಳಿ ಸೇರುತ್ತದೆ. ನಾವೆಲ್ಲ ಪರಸ್ಪರ ಅಂಗೈಯನ್ನು ಬಿಡಿಸಿ ಮದಿರಂಗಿ ಬಣ್ಣಗಳನ್ನು ತೂಗುವುದರಲ್ಲಿ ಮಗ್ನರಾಗಿದ್ದೇವೆ. ನಮಗೆ ನಮ್ಮದೇ ಲೋಕ. ಅಮ್ಮ ನೀರು ಹೊತ್ತೊಯ್ದು ಸ್ನಾನದ ಮನೆಯ ಹಂಡೆಯನ್ನು ತುಂಬಿಸುತ್ತಿದ್ದರೆ ನಾವೆಲ್ಲರೂ ಆಕೆಯ ಹಿಂದಿನ ಬಾಲ. ಆ ದೊಡ್ಡ ಒಲೆಯಲ್ಲಿ ನೀರು ಕುದಿಯುತ್ತಿದ್ದರೆ ಒಲೆಯ ಬೆಂಕಿ ಅಮ್ಮನ ಮುಖದಲ್ಲಿ ಧಗಧಗ.

ಹಿಂದಿನ ರಾತ್ರಿಯಿಂದಲೇ ಹಬ್ಬದ ತಯಾರಿಯಲ್ಲಿ ಕಳೆದುಹೋಗಿರುವ ಅಮ್ಮನಿಗೆ ಹಬ್ಬ ಆರಂಭವಾಗುವುದೇ ನಮ್ಮೆಲ್ಲರ ಹಬ್ಬದ ಸಂಭ್ರಮ ಇಳಿದಬಳಿಕ. ಸ್ನಾನ ಮಾಡಿದ ನಮ್ಮೆಲ್ಲರಿಗೆ ಹೊಸಬಟ್ಟೆಯನ್ನು ಬಿಡಿಸಿಕೊಟ್ಟು, ನಾವು ತೊಡುವುದನ್ನು ನೋಡಿ ಸಂತಸಪಡುತ್ತಾ ತಂದೆಯನ್ನು, ತಂದೆಯ ಮಕ್ಕಳನ್ನು ಮಸೀದಿಗೆ ಬೀಳ್ಕೊಟ್ಟ ಬಳಿಕ ಅಮ್ಮ ಒಂದೆಡೆ ಕೂತು ಉಸಿರು ಬಿಡುತ್ತಾಳೆ. ಅಂಗೈ ಬಿಡಿಸಿ ನೋಡಿದರೆ ಅಲ್ಲಿನ್ನೂ ಕತ್ತಲು. ಮಕ್ಕಳು, ಮಕ್ಕಳ ತಂದೆಯೂ ಬರುವ ಮೊದಲು ಮಧ್ಯಾಹ್ನದ ಅಡುಗೆಗೆ ಸಿದ್ಧತೆ ನಡೆಸಬೇಕು. ಆದಕ್ಕೆ ಮೊದಲು ತಲೆಗೆ ಒಂದಿಷ್ಟು ನೀರು ಸುರಿದು ಕೊಳ್ಳಬೇಕು. ಹೊಸ ಸೀರೆಯ ಸೆರಗು ಯಾವ ಬಣ್ಣದು, ಹೇಗಿದೆ ಎಂದು ಒಮ್ಮೆಯಾದರೂ ಕಣ್ಣಗಲಿಸಿ ನೋಡಲಿಲ್ಲ, ಸ್ನಾನ ಮುಗಿಸಿ ಹೊಸ ಸೀರೆಯನ್ನು ಬಿಡಿಸಬೇಕು.

****

ಮೊನ್ನೆ ತಾಯಿಯಿಲ್ಲದೆಯೇ ಮೊದಲ ಬಕ್ರೀದ್‌ನ್ನು ಆಚರಿಸಿದೆ. ಆದೆಷ್ಟು ಆಳೆತ್ತರ ಬೆಳೆದರೂ ಅಮ್ಮನ ದನಿಯಿಲ್ಲದೆ ನಮಗೆ ಹಬ್ಬವಿಲ್ಲ. ಸೂರ್ಯ ಉದಯಿಸುವುದಕ್ಕೆ ಮೊದಲೇ ಬಾರಿಬಾರಿಗೂ ನಮ್ಮ ಕೋಣೆಗೆ ಇಣುಕಿ "ಏಳಿ ಮಕ್ಕಳೇ..." ಎನ್ನುವುದು, ಮನೆಯಲ್ಲಿ ನಡೆಯುವ ಹಬ್ಬದ ಸಿದ್ಧತೆಯ ನೇತೃತ್ವ ವಹಿಸಿಕೊಳ್ಳುವುದನ್ನು ಅಮ್ಮ ಒಂದು ಕರ್ತವ್ಯವಾಗಿ ಪಾಲಿಸಿಕೊಂಡು ಬಂದಿದ್ದಾಳೆ... ಕಾಲಲ್ಲಿ, ತೋಳಲ್ಲಿ ಶಕ್ತಿ ಇಂಗಿದ ಬಳಿಕವೂ. ಹೀಗಿರುವಾಗ ಬೆಳ್ಳಂಬೆಳಗ್ಗೆ 'ಏಳಿ ಮಕ್ಕಳೇ' ಎಂದು ಕರೆಯುವ ಧ್ವನಿಯಿಲ್ಲದೆ ಏಳುವುದಾದರೂ ಹೇಗೆ. ಈ ಬಾರಿ ಅಡುಗೆಮನೆಯಲ್ಲಿ ಗದ್ದಲಗಳಿಲ್ಲ. ಸ್ನಾನದ ಮನೆಯಲ್ಲಿ ಬೆಂಕಿ ಉರಿಯಲೂ ಇಲ್ಲ. ಸ್ನಾನದ ಮನೆಯ ಹಂಡೆಯಲ್ಲಿ ಬೇಕಾದಷ್ಟು ತಲೆಗೆ ನೀರು ಸುರಿದುಕೊಳ್ಳಲೂ ಆಗಲಿಲ್ಲ. ನೀರು ಬಿಸಿಯಾಗಬೇಕಾದರೆ ಹೀಟರ್ ಸ್ವಿಚ್ ಅದುಮಿದರೆ ಆಯಿತು. ಎಚ್ಚರವಾದಾಗ ಎದ್ದು ಕೂತು, ಸ್ವಿಚ್ ಅದುಮಿ ಬಕೆಟ್‌ನಲ್ಲಿ ಬಿಸಿ ನೀರನ್ನು ತೂಗುತ್ತಾ, ಆಳೆಯುತ್ತಾ... ಕರೆಂಟಿನ ಮೀಟರ್ ಎಷ್ಟು ಜೋರಾಗಿ ತಿರುಗುತ್ತಿದೆಯೋ ಎಂದು ಭಯಪಡುತ್ತಾ ನೀರು ತಲೆಗೆ ಸುರಿದರೆ ಆಯಿತು. ಹಬ್ಬದ ಸ್ನಾನ ಮುಗಿಯಿತು.

ಹಬ್ಬವೆಂದರೆ ಹಿಂದೆಯೆಲ್ಲ ಒಳಗಿನ ಸದ್ದು. ಅದು ಎದೆಯ ಕೋಣೆಯಿಂದ ಮನೆಯ ಕೋಣೆಗಳನ್ನು ತುಂಬಿ ಅದರ ಪರಿಮಳ ನೆರೆಹೊರೆ, ನೆಂಟಸ್ತಿಕೆಗಳನ್ನೆಲ್ಲ ಬಳಸುತ್ತಾ ಮುಂದೆ ಸಾಗುತ್ತಿತ್ತು. ನಾವು ಮಕ್ಕಳೆಲ್ಲ ಗುಂಪುಗುಂಪಾಗಿ ಮನೆಮನೆಗೆ ಭೇಟಿ ನೀಡುತ್ತಿದ್ದೆವು. ಪ್ರತಿ ಮನೆಗಳಲ್ಲೂ ನಮಗೆ ಉಡುಗೊರೆಗಳಿದ್ದವು. ಹಣವೋ, ತಿಂಡಿಯೋ ಯಾವುದಾದರೊಂದು ರೂಪದಲ್ಲಿ. ಹಬ್ಬಗಳು ಹೊರಗಿನ ಗದ್ದಲಗಳಾದಾಗ ಎಲ್ಲ ಸಮಸ್ಯೆಗಳು ಆರಂಭವಾಗುತ್ತವೆ. ಒಳಗಿನ ಸಣ್ಣಸಣ್ಣ ಖುಷಿಗಳನ್ನೆಲ್ಲ ನಾವು ಕಳೆದುಕೊಳ್ಳುತ್ತಾ




ಹೋಗುತ್ತೇವೆ ಅಥವಾ ಹೊರಗಿನ ಗದ್ದಲಗಳಲ್ಲಿ ಈ ಒಳಗಿನ ಮಾತುಗಳು ನಮಗೇ ಕೇಳಿಸದಂತಾಗುತ್ತದೆ. ಈಗ ಹಬ್ಬಗಳೆಂದರೆ ಒಂದು ರಾಜಕೀಯ ಸಮಾರಂಭ. "ಹಬ್ಬದ ಹಿನ್ನೆಲೆಯಲ್ಲಿ ಸರ್ವಸನ್ನದ್ಧರಾಗಿ ನಿಂತಿದ್ದೇವೆ" ಎನ್ನುತ್ತದೆ ಪೊಲೀಸ್ ಇಲಾಖೆ. ಹಬ್ಬಗಳಿಗೆ ಪೊಲೀಸರಿಗೆ ಒಂದು ನಂಟು ಕುದುರಿದೆ. ಪೊಲೀಸರ ಲಾರಿಗಳ ತುದಿಯಲ್ಲಿ ಹಬ್ಬದ ಮುಂಜಾವನ್ನು ಕಾಣುತ್ತೇವೆ. ಹಬ್ಬಗಳು ಹತ್ತಿರವಾದಂತೆ ಪೊಲೀಸ್ ವರಿಷ್ಠಾಧಿಕಾರಿಗಳು ಪತ್ರಿಕಾ ಹೇಳಿಕೆ ನೀಡುತ್ತಾರೆ. ರಕ್ಷಣೆ ನೀಡಿ ಎಂದು ನಿಯೋಗಗಳು ಎಸ್ಪಿಗಳನ್ನು ಭೇಟಿಯಾಗುತ್ತವೆ. ಒಮ್ಮೆ ಎಲ್ಲವೂ ಒಳ್ಳೆಯದರಲ್ಲಿ ಮುಗಿದರೆ ಸಾಕು ಎನ್ನುತ್ತದೆ ಮನಸ್ಸು.


ಕಳೆದ ರಮ್ಜಾನ್ ಮತ್ತು ಗಣೇಶೋತ್ಸವ ಜೊತೆಯಾಗಿ ಬಂದಾಗ 'ಈ ಬಾರಿ ಮಂಗಳೂರಿನಲ್ಲಿ ಕೋಮುಗಲಭೆ ನಡೆದೇ ತೀರುತ್ತದೆ' ಎಂದು ಮಾತಾಡಿಕೊಂಡವರಿದ್ದರು. ಈ ಕಾರಣದಿಂದಲೇ ಮಂಗಳೂರಿನಲ್ಲಿ ಬಿಗಿ ಬಂದೋಬಸ್ತು, ಹೊರಗಿನ ಗದ್ದಲಗಳು, ಸಂಭ್ರಮಗಳು ಒಳಗೊಳಗೆ ಯಾವುದೋ ಭಯವನ್ನು, ಆತಂಕವನ್ನು ಬಿತ್ತುತ್ತಿದ್ದವು. ಪೊಲೀಸರಂತೂ ಹಬ್ಬಕ್ಕಾಗಿ ಭರ್ಜರಿ ಸಿದ್ಧತೆಗಳನ್ನು ನಡೆಸಿದ್ದರು. ಯಾವುದೇ ಹಿಂಸೆ, ಕರ್ಫ್ಯೂಗಳಿಲ್ಲದೆ ಹಬ್ಬಗಳು ಮುಗಿದರೆ ಹಬ್ಬಗಳು ಯಶಸ್ವಿಯಾದಂತೆ. ಪೊಲೀಸರ ಭರ್ಜರಿ ಸಿದ್ಧತೆಯಿಂದ ಕಳೆದ ಬಾರಿಯ ರಮ್ಜಾನ್, ಗಣೇಶೋತ್ಸವಗಳು ಯಶಸ್ವಿಯಾಗಿತ್ತು. ಈ ಬಾರಿಯ ಬಕ್ರೀದ್ ಹಬ್ಬವೂ ಇದಕ್ಕೆ ಹೊರತಾಗಿರಲಿಲ್ಲ. ಹಬ್ಬದ ದಿನ ಹೊರಗಿನ ಗದ್ದಲಗಳ ನಡುವೆಯೇ ಒಳಗೆಲ್ಲೋ ಆಳದಲ್ಲಿ ತಾಯಿಯ ಧ್ವನಿ "ಏಳಿ ಮಕ್ಕಳೇ..." ನನಗೆ ಮಾತ್ರ ಕೇಳುವಂತಿತ್ತು.

ಶಾಂತವೇರಿಯವರಿಗೆ ನೆಂಟನ ನೆನಪಿನ 'ಶೇವೆ'

ಕರ್ನಾಟಕ ಕಂಡ ಅಪರೂಪದ ರಾಜಕಾರಣಿ, ಸಮಾಜವಾದಿ ಹೋರಾಟಗಾರ ಶಾಂತವೇರಿ ಗೋಪಾಲ ಗೌಡರ ಹೆಸರಿನಲ್ಲಿ ಮತ್ತೊಂದು ಪುಸ್ತಕ ಪ್ರಕಟವಾಗಿದೆ. 'ಶಾಂತವೇರಿ ಗೋಪಾಲಗೌಡರ ನೆನಪು' ಎಂಬ ಈ ಕೃತಿಯ ಕರ್ತೃ ಬಿ.ಎಸ್. ಉಮೇಶ್. ಕೃತಿಕಾರನೇ ತಮ್ಮನ್ನು ಪರಿಚಯಿಸಿಕೊಂಡಂತೆ ಅವರು ಗೋಪಾಲಗೌಡರ ಅತ್ತಿಗೆ ನಾಗಮ್ಮನವರ ತಂಗಿ ಚೆನ್ನಮ್ಮನವರ ಮಗಳ ಗಂಡ.



ಶಾಂತವೇರಿ ಗೋಪಾಲಗೌಡರ ಬದುಕು-ಹೋರಾಟ ಕುರಿತು ಈಗಾಗಲೇ ಸಾಕಷ್ಟು ಕೃತಿಗಳು ಹೊರಬಂದಿವೆ. ಡಾ. ಕಾಳೇಗೌಡ ನಾಗಾವಾರ ಹಾಗೂ ಡಾ. ನಟರಾಜ್ ಹುಳಿಯಾರ್ ಅವರು ಈ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಆದರೂ ವಿಶೇಷವಾದ ವ್ಯಕ್ತಿತ್ವಗಳನ್ನು ತುಂಬ ಹತ್ತಿರದಿಂದ ಬಲ್ಲವರು ಬರೆದಾಗ ಆ ವ್ಯಕ್ತಿಯ ಬಗ್ಗೆ ಅಪರೂಪದ ಒಳನೋಟಗಳು ದಕ್ಕುತ್ತವೆ. ಈ ಕೃತಿಯಲ್ಲೂ ನಾವು ಎಲ್ಲೂ ಕೇಳಿರದ ಗೋಪಾಲಗೌಡರ ವ್ಯಕ್ತಿತ್ವದ ಕೆಲವು ಮುಖಗಳು ಸಿಗುತ್ತವೆ. ತಮ್ಮಿಂದ ಉಪಕೃತನಾದ ವಾಚ್ ರಿಪೇರಿ ಅಂಗಡಿಯವನೊಬ್ಬನು ದುರಹಂಕಾರ ತೋರಿದಾಗ ಆತನ ಇಡೀ ವಾಚು ರಿಪೇರಿ ಅಂಗಡಿಯನ್ನು ಸಿಟ್ಟಿಗೆದ್ದ ಗೋಪಾಲಗೌಡರು ಪುಡಿಪುಡಿ ಮಾಡಿದ್ದು, ಶೀರ್ವಾಳಿ ಸಾಹುಕಾರರ ಮನೆಗೆ ಚುನಾವಣಾ ವಂತಿಗೆ ಪಡೆಯಲು ಹೋದಾಗ ಅವರ ಸಂಪತ್ತಿನ ಮೂಲವನ್ನೇ ಗೌಡರು ಲೇವಡಿ ಮಾಡಿದ್ದು, ತಮ್ಮ ಅಭಿಮಾನಿ ಸಾಹುಕಾರರೊಬ್ಬರ ಕಾರಿನಲ್ಲಿಯೇ ಓಡಾಡುತ್ತ ಅವರು ಸಲ್ಲಿಸಿದ್ದ 20 ಎಕರೆ ಬಗರ್‌ಹುಕುಂನ ಅರ್ಜಿಯನ್ನು ತಿರಸ್ಕರಿಸಿ ಆ ಜಮೀನನ್ನು ಹತ್ತು ಜನ ದಲಿತರಿಗೆ ಹಂಚಿದ್ದು, ತನ್ನ ತಾಯಿಯ ಆಸೆಯಂತೆ ಬೃಹತ್ ತಿರುಗುವ ಕಲ್ಲನ್ನು ಗೆಳೆಯರೊಡಗೂಡಿ ಬೆಟ್ಟದಿಂದ ಮನೆಗೆ ಹೊತ್ತು ತಂದಿದ್ದು... ಹೀಗೆ ಗೌಡರ ಕೆಲವು ಚಿತ್ರಗಳು ಓದುಗನ ಮನಸ್ಸಿನಲ್ಲಿ ನಿಲ್ಲುತ್ತವೆ. ಗೋಪಾಲಗೌಡರ ನಿಧನಾನಂತರ ಅವರು ಭೋಗ್ಯಕ್ಕೆ ನೀಡಿದ್ದ ತಮ್ಮ ಬೆಂಗಳೂರಿನ ಮನೆಯನ್ನು ತೆರವು ಮಾಡದೇ ಸತಾಯಿಸುತ್ತಿದ್ದ ಮಾರವಾಡಿಯೊಬ್ಬನನ್ನು ಗದರಿಸಿ ಗೌಡರ ಪತ್ನಿ ಸೋನಕ್ಕನವರಿಗೆ ಲಂಕೇಶರು ಆ ಮನೆಯನ್ನು ಬಿಡಿಸಿಕೊಟ್ಟ ಪ್ರಸಂಗವೂ ಇಲ್ಲಿ ಬರುತ್ತದೆ. ಕೃತಿಯಲ್ಲಿ ತುಂಬಾ ದೀರ್ಘವಾದ ವಾಕ್ಯಗಳು ಕಿರಿಕಿರಿ ಅನ್ನಿಸಿದರೂ ಗೋಪಾಲಗೌಡರ ಕಾರಣದಿಂದ ಸಹಿಸಿಕೊಳ್ಳಬಹುದು.



ಕೃತಿಗೆ 'ಗೋಪಾಲಗೌಡರ ನೆನಪು' ಎಂದು ಹೆಸರಿಸಿದ್ದರೂ ವಿಷಯಗಳು ಓತಪ್ರೋತವಾಗಿ ಸೇರಿಕೊಂಡಿವೆ. 'ಗೋಪಾಲಗೌಡರ ನಿಧನ' ಎಂಬ ಅಧ್ಯಾಯ ಮುಗಿಯುತ್ತಿದ್ದಂತೆ 'ಅನಂತರ... ಶೇಷಮ್ಮ' ಎಂಬ ಅಧ್ಯಾಯವಿದೆ. ಈ ಅಧ್ಯಾಯ ಗೋಪಾಲಗೌಡರ ನಿಧನಾನಂತರ ಅವರ ತಾಯಿ ಶೇಷಮ್ಮನವರ ಮರಣವನ್ನು ದಾಖಲಿಸುತ್ತದೆ; ಮುಂದಿನ ಅಧ್ಯಾಯಗಳ ಹೆಸರು 'ಅನಂತರ... ಸೋನಕ್ಕ' 'ಅನಂತರ... ರಾಮ ಮನೋಹರ ಶಾಂತವೇರಿ' (ಗೋಪಾಲಗೌಡರ ಮಗ) ಈ ಶಿರೋನಾಮೆಗಳು ಏನನ್ನು ಧ್ವನಿಸುತ್ತವೆ ಎಂಬ ಸೂಕ್ಷ್ಮತೆಯೇ ಲೇಖಕನಿಗಿಲ್ಲ.

150 ಪುಟದ 'ಗೋಪಾಲಗೌಡರ ನೆನಪು' ಪುಸ್ತಕದ ಆರಂಭದಲ್ಲಿಯೇ ಲೇಖಕರು ಮಾಜಿ ಮುಖ್ಯಮಂತ್ರಿ

ಪುಸ್ತಕ ವಿಮರ್ಶೆ

ಎಸ್.ಎಂ. ಕೃಷ್ಣ ಮಾಜಿ ಪ್ರಧಾನಿ ದೇವೇಗೌಡ, ತೀರ್ಥಹಳ್ಳಿಯ ಮಾಜಿ ಶಾಸಕ ಆರಗ ಜ್ಞಾನೇಂದ್ರ, ಹಾಲಿ ಶಾಸಕ ಕಿಮ್ಮನೆ ರತ್ನಾಕರ್ ಹಾಗೂ ತಮ್ಮ ಗೆಳೆಯರೊಂದಿಗೆ ತೆಗೆಸಿಕೊಂಡ 8 ಪುಟಗಳಷ್ಟು ಕಲರ್ ಫೋಟೋಗಳಿವೆ. ಈ ಫೋಟೋಗಳನ್ನು ನೋಡಿದ ಮೇಲೆ ಇದು ಶಾಂತವೇರಿಯವರ ನೆನಪಿನ ಕೃತಿಯೋ ಅಥವಾ ಲೇಖಕ ಉಮೇಶರ ಆತ್ಮಚರಿತ್ರೆಯೋ ಎಂಬ ಅನುಮಾನ ಓದುಗರಿಗೆ ಬಂದರೆ ಅಚ್ಚರಿಯಿಲ್ಲ. ಪುಸ್ತಕದ ಕೊನೆಯಲ್ಲಿ ಶಾಂತವೇರಿಯವರ ಈಗಾಗಲೇ ಬೇರೆ ಬೇರೆ ಪುಸ್ತಕಗಳಲ್ಲಿ ಅಚ್ಚಾದ ಕಪ್ಪು-ಬಿಳುಪು ಫೋಟೋಗಳಿವೆ. ಒಟ್ಟು 26 ಪುಟಗಳು ಈ ಕೃತಿಯ ಕುರಿತು "ಬರೆಸಿಕೊಂಡ ಅಭಿಪ್ರಾಯಗಳಿಗೆ" ಮೀಸಲಾಗಿದೆ.

150 ಪುಟದ ಈ ಪುಸ್ತಕದಲ್ಲಿ 95 ಪುಟಗ
ಮಾತ್ರ ಲೇಖನಕ್ಕಾಗಿ ಮೀಸಲಾಗಿವೆ. ಈ 95 ಪುಟಗಳ
ಕೂಡ ಶಾಂತವೇರಿಯವರು ವಿಧಾನಸೌಧದಲ್ಲಿ ಮಾಡಿ
ಭಾಷಣ, ಕಾಗೋಡು ಹೋರಾಟ ಇತ್ಯಾದಿ ವಿ
ಪುಸ್ತಕಗಳಲ್ಲಿ ಬಂದ ವಿಷಯಗಳ
ಪುನರಾವರ್ತಿತವಾಗಿವೆ. ಶಾಂತವೇರಿಯ
ಒಡನಾಟದಲ್ಲಿ ಉಮೇಶ್ ಕಂಡುಕೊಂಡಿ
ಅವರಿವರಿಂದ ಕೇಳಿದ್ದು ಜರಡಿ ಹಿಡಿ
30 ಪುಟಗಳಷ್ಟು ಸಿಗುವುದೂ ಕಷ್ಟ.

ಈ ಮೂವತ್ತು ಪುಟಗಳಿಗೆ ಓದು
ತೆರಬೇಕಾಗಿರುವ ಬೆಲೆ ಕೇವಲ 250
ರೂಪಾಯಿಗಳು!

'ಶಾಂತವೇರಿಯವರ ನೆನಪುಗಳ
ಪುಸ್ತಕವನ್ನು ಹೊರತರುವ ಜರೂರತ್ತನ್ನು
ಲೇಖಕ ಉಮೇಶರವರು ತಮ್ಮ ಮಾತುಗಳಲ್ಲಿ ಹಿ
ಹೇಳುತ್ತಾರೆ....

"ಇಂದಿನ ದಿಕ್ಕೆಟ್ಟ ರಾಜಕಾರಣ, ನೈತಿಕ ನೆಲೆಯನ್ನೇ ಮರೆತು ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ತೊಡಗಿರುವ ರಾಜಕೀಯ ಮುಂದಾಳುಗಳು.... ಎಲ್ಲೆಲ್ಲೂ ತಾಳತಪ್ಪಿ ತೂಕ ತಪ್ಪಿ ನಡೆಯುತ್ತಿರುವ ಅವ್ಯವಸ್ಥೆಯನ್ನು, ಆಡಳಿತದ ಚುಕ್ಕಾಣಿ ಹಿಡಿದವರ
ಐಲುತನವನ್ನು ಕಂಡಂತೆಲ್ಲಾ ನನ್ನ ಮನಸ್ಸು ತೀವ್ರವಾ
ಈ ನಾಡಿನ ಇಂದಿನ ಜನಗಳ ಮುಂದಿನ ಪೀಳಿಗೆಯವರ ಭವಿಷ್ಯತ್ತಿನ ಬಗ್ಗೆ ಚಿಂತನೆಗೊಳಗಾಗುತ್ತಿತ್ತು (ಪುಟ iii) ಹೀಗಾಗಿ ಇದಕ್ಕೆ ವಿರುದ್ಧವಾದ ಶಾಂತವೇರಿಯವರ ಪ್ರಾಮಾಣಿಕತೆಯನ್ನು ಜನರಿಗೆ ತಿಳಿಸಲು ಈ ಕೃತಿ ರಚಿಸಿದ್ದೇನೆ.

ಈಗಾಗಲೇ ಈ ಕೃತಿಯ ಎರಡು ಮುದ್ರಣ
ಹೊರಬಂದಿವೆ. ಶಾಂತವೇರಿಯವರ ಹೆಸರ
ಬಳಸಿಕೊಂಡು ಸಾರ್ವಜನಿಕ ಶಿಕ್ಷಣ ಇಲಾಖೆಯ
ಸುತ್ತೋಲೆಯೊಂದನ್ನು ಹೊರಡಿಸಿಕೊಂಡಿರ
ಉಮೇಶ್ 250 ರೂ. ಮುಖಬೆಲೆಯ
ಪುಸ್ತಕದ ಐದೈದು ಪ್ರತಿಗಳನ್ನು ರಾಜ್ಯದ
ಶಾಲಾ-ಕಾಲೇಜು ಲೈಬ್ರರಿಗೆ ತಳ್ಳುತ್ತಿದ್ದಾರೆ. ಯ
ಶಾಂತವೇರಿಯವರು ಸಾರ್ವಜನಿಕ ತೆರಿಗೆ ಹ
ಬಳಕೆಯ ಬಗ್ಗೆ ತುಂಬು ಜಾಗ್ರತೆ ವಹಿಸಲು ಸರ್ಕಾ
ಎಚ್ಚರಿಸುತ್ತಿದ್ದರೋ ಅವರ ಹೆಸರಿನಲ್ಲಿಯೇ ಈ
ನಡೆಯುತ್ತಿದೆ. ಕೆಲವು ಶಾಲಾ-ಕಾಲೇಜುಗಳು ತ
ಲಭ್ಯವಿರುವ ಹಣಕಾಸಿನ ವ್ಯವಸ್ಥೆಯಲ್ಲಿ ಎರಡು ಪ್ರತಿಗ
ಮಾತ್ರ ಕೊಂಡುಕೊಂಡರೆ 'ನೀವು ಶಾಂತವೇರಿಯವ
ಅವಮಾನ ಮಾಡುತ್ತಿದ್ದೀರಿ' ಎಂದು ಬೆದ
ಬಲಾತ್ಕಾರವಾಗಿ ಐದೈದು ಪ್ರತಿಗಳನ್ನು ಮಾರುತ್ತಿ

ಗಣ್ಯ ವ್ಯಕ್ತಿಗಳ ಹೆಸರನ್ನು ದುರುಪಯೋಗಪಡಿಸಿಕೊ
ಇಂತಹ "ಮಹಾನ್ ಲೇಖಕರ" ಕೃತಿಗಳ ಬಗ್ಗೆ ಸಾರ್ವ
ಶಿಕ್ಷಣ ಇಲಾಖೆ ಹಾಗೂ ಗ್ರಂಥಾಲಯ ಇಲಾಖೆ ವಿ
ಎಚ್ಚರವನ್ನು ವಹಿಸಬೇಕಿದೆ.

● ಸುತಾ

ವಿಧಾನಪರಿಷತ್‌ಗೆ ನಜೀರ್ ಸಾಬರಂಥೋನು ವಬ್ಬನೂ ನಿಂತಿಲ್ಲ!

"ವಿದ್ಯಾವೃದ್ಧ ಈಗೊಂದು ಯಲಕ್ಷನ್ ಬಂದದಂತೆ?"
ನ ಸೀರ.

"ಆದೂ ವಿಧಾನಪರಿಷತ್ತಿಗೆ ನ್ಯಡಿಯೋ ಚುನಾವಣೆ
ಖ. ನೀನೇನು ಓಟು ಮಾದಂಗಿಲ್ಲ ಬಿಡು."

"ಇನ್ನಾ ರು ಓಟು ಮಾಡ್ತರ್ಲ?"

"ಜಿಲ್ಲಾ ಪಂಚಾತಿ ಸದಸ್ಯರು, ತಾಲೋಕ್ ಪಂಚಾತಿ
ರು ಇಂತವೇ ಸದಸ್ಯರು ಮಾಡ್ತರೆ."

ಯ ಲು ಸೀ ಮೆ
ಕಟ್ಟೆಪುರಾಣ
▶ಬಿ. ಚಂದ್ರೇಗೌಡ

ಓಹೊಹೊ, ನಾವಾರಿಸಿ ಕಳಿಸಿದೋರು ಇಂಥೋರನ
ತ್ತರೆ ಅನ್ನು" ಎಂದ ಸೀರ.

ಊ. ನೀವಾರಿಸಿರೋರು ವಿಧಾನಸಭೆ
ಗ್ಯವ್ರೆ. ಇವುರ್‍ಯಲಲ್ ಆರಿಸಿದೋರು ವಿಧಾನ
ತ್ತಿಗೋಯ್ತರೆ."

ಅವುರೇನು ಮಾಡ್ತರೆ?" ಎಂದ ಕಾಳಮಾವ.

ಅವುರೇನು ಮಾಡದಿಲ್ಲ ಸುಮ್ಮನಿರತರೆ. ಅವುರಿಗೂ
ಸವುಲತ್ತು ಸಿಗತದೆ, ಅವುರಿಗೆ ಕಂಡಿದ್ದ ಮಾಡಿ
ಕಾಲಹಾಕ್ತವೆ. ಕೆಲವು ಕುಡಿತವೆ, ಇಸ್ಪಿಟಾಡತವೆ,
ಕೆಲವುರು ಸಭೆ, ಸಮಾರಂಭ, ಮದುವೆ, ಮುಂಜಿ
ತ್ತವೆ. ಅಂತೂ ಯಮ್ಮೆಲ್ಲೆಗಿಂತ್ಲೂ ಸುಖವಾಗಿರತವೆ."

ಯಮ್ಮೆಲ್ಲೆಗಿಂತ್ಲೂ ಸುಖವಾಗಿರತವೆ ಅಂದ್ರೆ,
ಗಿಂತ್ಲೂ ಆದಾಯ ಜಾಸ್ತಿಯದೆ ಅಂದಂಗಾಯ್ತು."

ಅಷ್ಟೊಂದು ಆದಾಯ ಇಲ್ಲ ಕಣೊ ಅವುಕೆ.
ಸವಲತ್ತು ಬುಟ್ರೆ ಅಂಥ ಪಾಯ್ದೆ ಇಲ್ಲ, ಅಂತ
ಕೊ ಅಂತ ಕ್ಯಲಸ ಮಾಡಕ್ಕೂ ಇವುರ ಕೈಲಾಗದಿಲ್ಲ,
ರೆ ನ್ಯಾಮಕಾವಸ್ತಿ ಗಂಡ ಅನ್ನಂಗೆ ಇದ್ದು ಬತ್ತವೆ."

ಅಷ್ಟೇಯಾ ಅನ್ನು" ಎಂದು ಉಗ್ರಿ ಮಾತನ್ನ
ಳ್ಳತ್ತಿದ್ದ ಕಾಳಮಾವ ತಾತ್ಸಾರದ ದನಿ ಹೊರಡಿಸಿದ.

ನ್ನೇನು ಅಷ್ಟೇಯ. ಏನಪ್ಪ ಅಂದ್ರೆ, ವಿರೋಧ
ರ ಸಂಖ್ಯೆ ಜಾಸ್ತಿಯಿದ್ರೆ, ವಿಧಾನಪರಿಷತ್ತೇ
ವಾಗಿರತದೆ. ಸರಕಾರಕೆ ಹಿಂಗ್ಗಾಮುಗ್ಗಾ ಹಿಕ್ಕಬವುದು.
ಕ್ಯಳಗಲಮನೆ ಪವರ್ರೆ ಬ್ಯಾರೆ, ಮ್ಯಾಗಲ ಮನೆ
ಬ್ಯಾರೆ."

ಟೇಲ್ರು ಮಗನೂ ನಿಂತವುನಂತೆ ಕಂಢ್ಯ" ಎಂದಳು

ಊ ಕಣೆ, ಮಯಿಮಾ ಪಟೇಲ ನಿಂತವುನೆ. ಕಾಂಗ್ರೆಸ್
ತ್ ಆಗ್ಯವುನೆ. ಅವುನಿಗೆ ದಳದೋರು ಸಪೋರ್ಟು
ರಂತೆ" ಎಂದ ಉಗ್ರಿ.

"ದಳದೋರು ಸಪೋರ್ಟು ಮಾಡಿದ್ದರೆ?" ಎಂದು ಸೀರ ಅಚ್ಚರಿಗೊಂಡ.

"ಊ ಕಣೊ, ವಿಧಾನ ಪರಿಷತ್ ಚುನಾವಣೆಲಿ ದಳದೋರು ಕಾಂಗ್ರೆಸ್ಸಿನೋರು ಹೊಂದಾಣಿಕೆ ಮಾಡಿಕಂಡು ಅಭ್ಯರ್ಥಿ ನಿಲ್ಲಿಸ್ಯವುರೆ. ಇಲ್ದೆಯಿದ್ರೆ ಪೂರಾ ಬಜೆಪಿನೆ ಬಂದುಬುಡೋದು" ಎಂದ ಉಗ್ರಿ.

"ಅಂಗಂತಿಯಾ?"

"ಊ ಕಣೊ. ಅವುರೋಟು ದುಂಡಗೆ ಸಿಗವು. ಇವುರೋಟು ಹಂಚೋಗವು. ಆಗ ಆರಾಮಾಗಿ ಬಜೆಪಿಗಳು ಗೆದ್ದು ಬರೋರು. ಅದ್ಕೆ ಕೆಲವು ಕಡೆ ಕಾಂಗ್ರೆಸಿನೋರು ದಳದೋರಿಗೆ ಕೈಕೊಡ್ತರೆ, ಕೆಲವು ಕಡೆ ದಳದೋರು ತಲೆ ಕೊಡ್ತರೆ."

"ಅವೇನ್ಲ ಕೈ ಕೊಡ್ತರೆ, ತಲೆ ಕೊಡ್ತರೆ ಅಂತಿ" ಎಂದಳು ಜುಮ್ಮಿ.

"ಇಸಿಸಿ, ಇರದೇಳಿದೆ ಕಣೆ. ದಳದೋರು ಗೆಲ್ಲಬೇಕಾದ್ರೆ ಒಂದೀಟು ಸಹಾಯ ಮಾಡಬೇಕಾಗಿರತದೆ. ಆಗ ಕಾಂಗ್ರೆಸ್ಸಿನೋರು ಕೈಕೊಟ್ಟು ಯಳಕತ್ತರೆ. ಅಂಗೆ ಕಾಂಗ್ರೆಸ್‌ನೋರು ಗೆಲ್ಲಬೇಕಾದ್ರೆ ಹೊರೆಹೊತ್ತ ಮಹಿಳೆ ಚಿಹ್ನೆ ಜನ ತಲೆ ಕೊಡ್ತರೆ ಅಂತ ಹೇಳಿದ್ದು ನಾನು."

"ಅಂತೂ ವಬ್ಬರಿಗಿಂತ ಇಬ್ಬರು ಲೇಸು ಅನ್ನಂಗಾಯ್ತು."

"ಊ ಕಣೆ, ಒಂದು ಕಾಲ್ದಲಿ ಕಾಂಗ್ರೆಸ್ಸ ಸೋಲಸಬೇಕಾದ್ರೆ ಯಲ್ಲಾ ಪಾರ್ಟಿಯೋರು ಒಂದಾಗೋರು. ಅದೇ ಇವತ್ತು ಬಜೆಪಿ ಸೋಲಸಬೇಕಾದ್ರೆ ಯಲ್ಲಾರು ಒಂದಾಗಬೇಕಾಗ್ಯದೆ ನೋಡು" ಎಂದು ಉಗ್ರಿ ಹೇಳುತ್ತಿದ್ದಂತೆ ಕಾಣಿಸಿಕೊಂಡ ವಾಟಿಸ್ಸೆ.

"ಯಂಥಾ ಸಿಚುಯೇಶನ್ ತಂದು ಮಡಗಿದ್ರು ನೋಡು ಅಪ್ಪಾ ಮಕ್ಕಳು" ಎಂದ.

"ತಂದು ಮಡಗಿದ್ರು ಸರಿ, ಈಗವುರೆ ಮುಂದೆ ಬಂದು ಹೊಂದಾಣಿಕೆ ಮಾಡಿಕಂಡ್ರಲ್ಲಾ ಹೇಳು."

"ಹೊಂದಾಣ್ಕೆ ಮಾಡಿಕಂಡ್ರು ಸರಿ ಕಣೊ. ಆದ್ರೆ ಹಿಂದೆ ಕಾಂಗ್ರೆಸ್ ಸವಾಸವ ಬುಟ್ಟು ಬಿಜೆಪಿ ಜ್ವತಿಗೋಗಬೇಕಾದ್ರೆ ಏನಂತ ದೂರಿದ್ರು ಗೊತ್ತೆ? ಕಾಂಗ್ರೆಸ್ಸು ನಮ್ಮ ಪಾರ್ಟಿಯ ಮುಗುಸಕ್ಕೆ ಅಂತ ಮಸಲತ್ತು ಮಾಡಿತ್ತು, ಅದ್ಕೆ ನಾವು ಅದರ ಸವಾಸ ಬುಟ್ಟು ಸೆಕ್ಯೂಲರ್ ಪಾರ್ಟಿ ಬಿಜೆಪಿ ಜೊತೆಗೋಯ್ತಿವಿ ಅಂತ ಹೇಳಿದ್ರು."


"ಹೇಳಿದ್ರು ಸರಿ ಕಣೊ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಬೇಕಾದ್ರೆ ಅಂತದ್ದೊಂದು ಕಾರಣ ಹೇಳಲೇಬೇಕಾಗಿತ್ತು ಹೇಳಿದ್ರು. ಇವತ್ತು ಉಳುದು ಬದುಕಬೇಕಾದ್ರೆ ಕಾಂಗ್ರೆಸ್ ಕೈ ಹಿಡಿದು ತಲೆ ಕೊಡಬೇಕಾಗ್ಯದೆ, ಅಂಗಂದವುರೆ. ನೀನು ಇಷ್ಟಲ್ಲ ತಿಳದು ರಾಜಕಾರಣಿಗಳ ಮಾತ ಸೀರಿಯಸ್ಸಾಗಿ ತಗತಿಯಲ್ಲೊ ವಾಟಿಸ್ಸೆ."

"ತಗಳದಲ್ಲ ಕಣೊ, ಕೆಲವು ಹಳೆಮಾತ ನ್ಯನಿಸಿಗಂಡೆ. ಅವುಕೆ ಯಾವ ಉತ್ರನೂ ಸಿಕ್ಕಿಲ್ಲ."

"ಸಿಕ್ಕವಲ್ಲೊ, ಕಾಂಗ್ರೆಸ್‌ನೋರು ದಳ ಮುಗುಸಕ್ಕೆ ಅಂತ ಸಂಚು ಮಾಡಿದ್ರು, ಅದ್ಕೆ ನನ್ನ ಮಗ ಪಾರ್ಟಿ ಉಳಿಸಿಗಳಕ್ಕೆ ಬಿಜೆಪಿಗೋದ ಅಂತ ದ್ಯಾವೇಗೌಡ್ರ ಹೇಳಿರಲಿಲ್ವೆ?"

"ಅದೇ ದ್ಯಾವೇಗೌಡ್ರು ಲೋಕಸಭೆವಳಗಡೆ ಏನಂದ್ರು ಗೊತ್ತೇನೊ? ನಾನಿಲ್ಲದಾಗ ಈ ಬಿಜೆಪಿಗಳ್ಯಲ್ಲ ಕುಟಿಲ ತಂತ್ರ ಮಾಡಿ, ನನ್ನ ಮಗನಿಗೆ ಮುಖ್ಯಮಂತ್ರಿ ಆಸೆ ತೋರಿಸಿ, ಕರಕಂಡೋಗಿ ಹಾಳು ಮಾಡಿದ್ರು. ಆದ್ರಿಂದ ಲೋಕಸಭೆಗೆ ಇನ್ನು ಮುಂದೆ ಬಂದು ಮಾತಾಡಲ್ಲ, ಕ್ಷಮಿಸಿ, ಅಂದಿದ್ದ. ಅದ್ಕೆ ಸೋಮನಾಥ ಚಟರ್ಜಿ ಅನ್ನೊ ಲೋಕಸಭೆ ಅಧ್ಯಕ್ಷ ನಿಮ್ಮಂತ ಹಿರಿಯರು ಲೋಕಸಭೆಗೆ ಬರಬೇಕು ಅಂದಿದ್ರು ಗೊತ್ತೆ."

"ಅದ್ಕೆ ಆಲವೇನೊ ಹಾಸನದಲ್ಲಿ ನಿಂತು ಗೆದ್ದು ತಿರಗ ಲೋಕಸಭೆಗೋಗಿರದು. ಇವತ್ತು ದ್ಯಾವೇಗೌಡ್ರು ಲೋಕಸಭೆಗೆ ಹೋಗದೆಯಿದ್ರೆ ಗಣಿ ಕಳ್ರ ಸುದ್ದಿಯ ಯಾರೇಳಬೇಕು ಅಲ್ಲೀ?"



"ಆ ವಿಷಯದಲ್ಲಿ ದೇವೇಗೌಡ್ರು ವಿರೋಧ ಪಕ್ಷದಲ್ಲಿರಕ್ಕೆ ಹೇಳಿ ಮಾಡಿಸಿದೋರು ಕಣೊ. ಅದೇ ಆಡಳತ ಪಕ್ಷದೋರಾದ್ರೆ ಅವರ ಇಡೀ ಮನಿಗೇ ಪವರ್ ಬಂದುಬುಡತದೆ."

"ಎಡೂರಪ್ಪನೂ ಅಂಗೇ ಆಲವೇನೊ. ಅವುನ ಮಕ್ಕಳು, ಮರಿ, ಅಳಿಯಂದಿರ್‍ಯಲ್ಲ ರಾಜಕಾರಣ ಮಾಡ್ತಯಿದ್ದರಂತೆ. ಇದಕೇನೇಳ್ತಿ?"

"ಅಂತೂ ದ್ಯಾವೇಗೌಡ್ರು ಹಲವಾರು ಜನ ರಾಜಕಾರಣಿಗಳಿಗೆ ಮಾದರಿಯಾದ್ರು. ಆದ್ರು ಕೆಲುವಿಷಯದಲ್ಲಿ ಅವುರಿಗವುರೇ ಮಾದ್ರಿ ಕಣೊ. ಬಹಳ ದೀರ್ಘಾವದಿಗೆ ಪಸಲು ಬರೋ ರಾಜಕಾರಣ ಮಾಡ್ತರವುರು. ಈಗ್ಲು ಅವುರು ಕಾಂಗ್ರೆಸ್ ಜೊತೆ ಮಾಡಿಕೊಂಡಿರೊ ಹೊಂದಾಣಿಕೆಲಿ ಮುಂದೆ ಕಾಂಗ್ರೆನಲ್ಲಿ ಯಾವ ಯಾವ ಲೀಡ್ರು ತಲೆ ಉರಳತದೊ ಹೇಳಕ್ಕೆ ಬರದಿಲ್ಲ."

"ಕಾಂಗ್ರೆಸ್ಸಲ್ಲಿ ಅವನ ವೈರಿಗಳು ಇನ್ಯಾರಿದ್ದರೊ? ಡಿ.ಕೆ. ಶಿವಕುಮಾರ, ಸಿದರಾಮುಯ್ಯ. ಡಿ.ಕೆ.ಶಿ. ಆಗ್ಲೆ ಕುಮಾರಸ್ವಾಮಿ ಜ್ವತೆ ಚನ್ನಾಗಿದ್ದನಂತೆ. ಇನ್ನ ರೇವಣ್ಣನೂ ಸಿದರಾಮಯ್ಯನೂ ಒಂದಾಗಿದ್ದರಂತೆ. ಇದಕೇನೇಳ್ತಿ?"

"ನೋಡು ಮತ್ತೆ."

"ಲ್ಯಕ್ಕ ಹಾಕು. ಈ ಮುಂಡೆಮಕ್ಕಳ ಜಗಳ ನಿಜವಾದ ಜಗಳ ಅನಕಂಡೋರ ಕತಿಯೇನು ಅಂತ?"

"ಅದ್ಕೆ ಕಣೊ ಉಗ್ರಿ, ಇವತ್ತಿನ ದಿವಸದಲ್ಲಿ ಯಾರ ಜಗಳನೂ ನಿಜವಾದ ಜಗಳಲ್ಲ, ಯಾವ ಪೈಟಿಂಗೂ ನಿಜವಾದ ಪೈಟಿಂಗಲ್ಲ, ಅದ್ಕೆ ನಾನು ಪುದ್ದಿನಂಗೆ ಭಾಗವಯಿಸಕ್ಕೆ ಹೋಗದಿಲ್ಲ, ಸುಮುನೆ ಸೈಡಲ್ಲಿ ನಿಂತಗಂಡು ವಾಚ್ ಮಾಡ್ತಿನಿ."

"ಇಷ್ಟು ದಿನಕಾರ ವಳ್ಳೆ ಬುದ್ಧಿ ಬತ್ತಲ ಹೇಳು" ಎಂದಳು ಜುಮ್ಮಿ.

"ಬುದ್ಧಿ ಅಲ್ಲ ಕಣಕ್ಕ, ಜ್ಞಾನೋದಯ. ಒಂದೊಂದು ಟೈಮಲ್ಲಿ ಅಂಗಾಯ್ತದೆ ಏನೂ ಮಾಡಕ್ಯಾಗಲ್ಲ, ಅಂತ ನಜೀರ್ ಸಾಬರಿಗೇ ವಿಧಾನ ಪರಿಷತ್ ಅವಧಿ ಮುಗಿಸಿಗಂಡು ಮನಿಗೋಗುವಾಗ ಜ್ಞಾನೋದಯವಾಗಿ ಬೇಜಾರಾಗಿತ್ತು ಗೊತ್ತೆ?"

"ಅದೇನು ಬೇಜಾರಾಗಿತ್ತೊ?"

"ನಜೀರ್ ಸಾಹೇಬ್ರು ವಿಧಾನ ಪರಿಷತ್ ಸದಸ್ಯರಾಗಿದ್ರು. ಸದಸ್ಯನ ಅವಧಿ ಮುಗುದು ಮನಿಗೋಗದಿನ ಭಾಷಣ ಮಾಡಿದ. ಅದು ಯಂಥಾ ಭಾಷಣ ಅಂತೀ. ವಿಧಾನ ಪರಿಷತ್ ಸದಸ್ಯನಾಗಿ ನಾನು ಏನೂ ಮಾಡಕ್ಯಾಗದೆ ಮನಿಗೋಯ್ತಾಯಿದ್ದಿನಿ. ಭಾಳ ಬೇಜಾರಾಗ್ಯದೆ ಅಂದ. ಅವುನ ಮಾತ ಲಂಕೇಶ್ ಕೇಳಿಸಿಕೊಂಡು ಕಾಂಗ್ರೆ ಕೆಸರಲ್ಲೊಂದು ಕಮಲ ಅಂತ ಬರೆದರು. ಅಮ್ಯಾಲೆ ತಿರಗ ಅವುನ ಮ್ಯಾಲೆ ಬರದು ಬರುದು ಸಾಬಿ ಮನಸೇನು, ಅವುನ್ನಂಥೋನು ಅಂತ ಬರದು ಲೀಡ್ರಾಗಂಗೆ ಮಾಡಿ, ಮುಂದೆ ಹೆಗಡೆ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿ, ಪಸ್ಟೈಂ ಹಳ್ಳಿಗೆ ನೀರು ತಂದು ಕೊಟ್ಟ. ಅಗೋ ನೋಡು, ಆ ಕರಿಗಲ್ಲತ್ರ ಇರೋ ಬೋರವೆಲ್ಲು, ಹರಿಜನ್ರ ಕೇರಿಲಿರೋ ಬೋರವೆಲ್ಲು ಅವುನು ಕ್ವರಸಿರವೆಯಾ. ಇವತ್ತು ಯಾವ ಪಾರ್ಟಿ ಲಿಸ್ಟ ತಗಂಡು ನೋಡಿದ್ರೂ ವಿಧಾನ ಪರಿಷತ್ ಚುನಾವಣೆಗೆ ನಜೀರ್ ಸಾಬರಂಥ ವಬ್ಬ ಕ್ಯಾಂಡೇಟ್ ನಿಂತಿಲ್ಲ."


"ನಜೀರ್ ಸಾಬಿ ಅಂಥೋನು ಸಾಬರ ಜನಾಂಗದಲ್ಲೇ ಇಲ್ಲ ಬುಡು" ಎಂದ ಕಾಳಮಾವ.

"ಅವುನು ನಮ್ಮ ಜಾತಿಲುಟ್ಟಬೇಕಾಗಿತ್ತು ಕಂಢ್ಯ" ಎಂದ ಸೀರ.

"ನಿಮ್ಮ ಜಾತಿಲಿ ಮುಂದಿನ ಜನ್ಮಕ್ಕೆ ಸಾಬರಾಗುಟ್ಟೋನವುನೆ ಸ್ವಲುಪ ವೈಟ್ ಮಾಡಬೇಕು" ಎಂದು ವಾಟಿಸ್ಸೆ ನಕ್ಕ.

ಉಗ್ರಿ, ಜುಮ್ಮಿಯೂ ನಕ್ಕರು. ●

...ಲ್‌ಚೌಕದಲ್ಲಿ ಧ್ವಜಾರೋಹಣ



...ನವರಿ 26 ನೇ ತಾರೀಖು ಭಾರತದ ಗಣತಂತ್ರದ ದಿನ; 41 ವರ್ಷದ ಹಿಂದೆ ಭಾರತ ...ಹೊಸ ಸಂವಿಧಾನವನ್ನು ಸ್ವೀಕರಿಸಿದ ದಿನ. ಮೊನ್ನೆ 26 ರಂದು ಮುರಳಿ ಮನೋಹರ ...ಮವರ ನಾಯಕತ್ವದಲ್ಲಿ ಶ್ರೀನಗರದ ಲಾಲ್‌ಚೌಕದಲ್ಲಿ ಭಾರತದ ಧ್ವಜವನ್ನು ಹಾರಿಸಲಾಯಿತು. ... ಪಹರೆಯಲ್ಲಿ ನೂರು ಜನ ಶ್ರೀನಗರಕ್ಕೆ ಹೋಗಿ ಧ್ವಜಾರೋಹಣ ಮಾಡಿದರು. ...ದ ಅನೇಕರಿಗೆ ಹೆಮ್ಮೆಯಾಗಿದೆ; ಆದರೆ ಇದರ ಪೂರ್ಣ ಅರ್ಥ ನಮ್ಮ ಜನಕ್ಕೆ ...ಬೇಕಾಗಿದೆ.

...ತಂತ್ರದ ಮೊದಲ ಪಾಠವೇ ಕಾನೂನಿನ ಪ್ರಕಾರ, ಸಂವಿಧಾನಬದ್ಧವಾಗಿ ಆಡಳಿತ ...ದು; ರಕ್ತಪಾತಕ್ಕೆ ಅವಕಾಶ ಕೊಡದಿರುವುದು. ಒಮ್ಮೆ ರಕ್ತಪಾತ ಎಸಗಲೇಬೇಕಾದ ...ಶುರುವಾದೊಡನೆ ಮತ್ತಷ್ಟು ರಕ್ತಪಾತ ಅನಿವಾರ್ಯವಾಗುತ್ತದೆ. ಜನತಂತ್ರ ವಿರೋಧಿ ಕ್ರಿಯೆಗಳೆಲ್ಲ ಶುರುವಾಗುತ್ತದೆ. ಇಲ್ಲಿ ರಷ್ಯಾ ...ರ್‌ಬಚೋವ್‌ರಿಂದ ನಾವು ಕಲಿಯುತ್ತಿಲ್ಲ. ಗರ್‌ಬಚೋವ್ ಒಮ್ಮೆ ರಷ್ಯಾಕ್ಕೆ ನಿಜವಾದ ಮುಕ್ತ ಆಡಳಿತ, ಜನತಂತ್ರ, ವ್ಯಕ್ತಿಸ್ವಾತಂತ್ರ್ಯ ...ತೀರ್ಮಾನಿಸಿದೊಡನೆ ರಷ್ಯಾದ ದಬ್ಬಾಳಿಕೆಗೊಳಗಾಗಿದ್ದ, ರಷ್ಯಾದಿಂದ ಆಕ್ರಮಿಸಲ್ಪಟ್ಟಿದ್ದ ಬಾಲ್ಟಿಕ್ ರಾಜ್ಯಗಳೆಲ್ಲ ಸ್ವಾತಂತ್ರ್ಯ ...ಡಗಿದವು. ಅವರನ್ನು ಸೈನ್ಯದ ಮೂಲಕ ಹತ್ತಿಕ್ಕುವುದು, ಉಸಿರೆತ್ತದಂತೆ ಮಾಡುವುದು ಸುಲಭವಾಗಿತ್ತು. ಆದರೆ ಅಹಿಂಸೆ ಮತ್ತು ...ಕ್ಕೆ ಬದ್ಧವಾಗಿದ್ದ ಗರ್‌ಬಚೋವ್ ಹಾಗೆ ಮಾಡಲಿಲ್ಲ; ಹಾಗೆ ಮಾಡಿದ್ದರೆ ರಷ್ಯಾ ಕೂಡ ದಮನಕ್ಕೊಳಗಾಗಬೇಕಾಗುತ್ತಿತ್ತು. ...ಚೋವ್ ಸಹನೆಯಿಂದ ಇದ್ದರು; ತಮ್ಮ ಅಧಿಕಾರ ಹೋಗಬೇಕಾಗಿ ಬಂದರೂ ತಮ್ಮ ನಿಲುವು ಬದಲಾಯಿಸಲಿಲ್ಲ. ಭಾರತ ತನ್ನ ...ರೀತಿಯ ಸಮಗ್ರತೆ, ಏಕತೆಯ ಬಗ್ಗೆ ಕೂಡಲೆ ಚಿಂತಿಸದಿದ್ದರೆ ಈ ದೇಶದ ಸಂಪತ್ತೆಲ್ಲ ವ್ಯರ್ಥ ದಮನಗಳಲ್ಲಿ ವ್ಯಯವಾಗುತ್ತದೆ. ...ಎಲ್ಲ ರಾಜ್ಯಗಳಿಗೆ ಸ್ವಾಯತ್ತತೆ, ಸ್ವಾತಂತ್ರ್ಯ ನೀಡಿ ನಿಜವಾದ ವಿಕೇಂದ್ರೀಕರಣ ಸಾಧಿಸಿ ಒಗ್ಗಟ್ಟಾಗಬೇಕಾಗಿದೆ. ದಿಲ್ಲಿಯ ದುಷ್ಟ ...ಗಳು ಪಾಂಡಿಚೇರಿಯ ಕೆರೆಗಳ ಬಗ್ಗೆ, ಕೊಡಗಿನ ಕಾರಂಜಿಗಳ ಬಗ್ಗೆ ಕಾಳಜಿ ವಹಿಸುವುದು ಸಾಧ್ಯವಿಲ್ಲ; ಪಾಲ್‌ಘಾಟ್‌ನ ಚರಿತ್ರೆ, ...ದ ನೋವು ದಿಲ್ಲಿಯ ಮೂರ್ಖರಿಗೆ ತಲುಪುವುದು ಸಾಧ್ಯವಿಲ್ಲ.

...ದ ದುಷ್ಟ ಉಗ್ರವಾದಿಗಳಿಗೆ ಉತ್ತರ ಈ ಬಗೆಯ ವಿಕೇಂದ್ರೀಕರಣ; ಅದು ಅಮೆರಿಕಾದಲ್ಲಿ ಸಾಧ್ಯವಾಗಿದ್ದರೆ, ಆಸ್ಟ್ರೇಲಿಯಾದಲ್ಲಿ ...ದ್ದರೆ ಇಲ್ಲಿ ಕೂಡ ಸಾಧ್ಯ. ಇದಕ್ಕೆ ಹೊಸ ಚಿಂತನೆ ಅಗತ್ಯ. ಸಮಗ್ರತೆಯ ಗಿಳಿಪಾಠ ಒಪ್ಪಿಸುತ್ತ ಸೈನ್ಯದ ರಕ್ಷಣೆಯಲ್ಲಿ ಧ್ವಜಗಳನ್ನು ... ದೇಶಕ್ಕೆ ದುರ್ಗತಿ... ಜನರ ಹತ್ಯೆಗೆ ಕಾರಣವಾಗುವುದು ನಮ್ಮನ್ನು ಮತ್ತಷ್ಟು ಹಿಂಸೆಯತ್ತ ನಡೆಸುತ್ತದೆ.

...ರ್ಷ, ಹಿಂಸೆ, ಕೊಲೆಯನ್ನು ಬದುಕಿನ ಭಾಗವನ್ನಾಗಿಸಿರುವ ರಾಜಕಾರಣಿಗಳಿಗೆ ಜನತಂತ್ರ, ಗಣರಾಜ್ಯೋತ್ಸವ ಎಂದರೆ ಏನೆಂಬುದೇ ...ಗಿದೆ. ಇದು ನಿಜಕ್ಕೂ ವ್ಯಸನಕರ.

ಪಾಳೆಗಾರಿಕೆಯ ಮೌಲ್ಯ

ಮೊನ್ನೆ ಉತ್ತಮ ರಾಜಕಾರಣಿ ದಿಗ್ವಿಜಯ್ ನಾರಾಯಣ್ ಸಿಂಗ್ ಅವರ ಬಗ್ಗೆ ಬರೆದಾಗ ಒಂದು ಅಂಶ ಹೇಳುವುದನ್ನು ಮರೆತೆ. ಆತ ಶ್ರೀಮಂತ ಕುಟುಂಬಕ್ಕೆ, ಫ್ಯೂಡಲ್ (ಅಂದರೆ ಪಾಳೆಯಗಾರಿಕೆಯ) ವರ್ಗಕ್ಕೆ ಸೇರಿದವನು. ಈ ಪಾಳೆಗಾರಿಕೆಯ ಬಗ್ಗೆ ನಾವೆಲ್ಲ ಬೈದು, ಬೈದು ದಿಗ್ವಿಜಯ್ ನಾರಾಯಣ್ ಸಿಂಗ್ ತರಹದವರು ಅಲ್ಲಿಂದ ಬಂದಾಗ ಕೂಡ ಆ ಬಗ್ಗೆ ಆಳವಾಗಿ ಯೋಚಿಸುವುದನ್ನು ಮರೆಯುತ್ತೇವೆ.



ದಿಗ್ವಿಜಯ್ ನಾರಾಯಣ ಸಿಂಗ್ ದೊಡ್ಡ ಕುಟುಂಬದವರು; ಆಳುವ ಕುಟುಂಬದವರು. ಈ ಪಾಳೆಗಾರಿಕೆಯ ಕುಟುಂಬದ ಎಲ್ಲ ಶ್ರೇಷ್ಠ ಮೌಲ್ಯಗಳನ್ನು ಮೈಗೂಡಿಸಿಕೊಂಡವರು. ಈ ಪಾಳೆಗಾರಿಕೆಯಲ್ಲೂ ಮೌಲ್ಯಗಳಿವೆಯೆ? ಆತನನ್ನೇ ನೋಡಿ. ಆತನೆಂದೂ ಇನ್ನೊಬ್ಬರೆದುರು ಕೈಯೊಡ್ಡಲಿಲ್ಲ, ಅಧಿಕಾರವನ್ನಾಗಲಿ, ಹಣವನ್ನಾಗಲಿ ಬೇಡಲಿಲ್ಲ, ಬಂದಾಗ ಕೂಡ ಬೇಡ ಅಂದರು; ತೆಗೆದುಕೊಳ್ಳುವುದು ತಮ್ಮ ಘನತೆಗೆ ಕುಂದು ಎಂದು ನಂಬಿದರು. ಹೀಗಾಗಿ ಮಂತ್ರಿಯಾಗಿ ಪ್ರಧಾನಮಂತ್ರಿಯೆದುರು ನಡು ಬಗ್ಗಿಸುವುದಾಗಲಿ, ಲಂಚ ಪಡೆದು ಟೀಕೆಗೊಳಗಾಗುವುದಾಗಲಿ ಅವರಿಂದ ಸಾಧ್ಯವಾಗಲಿಲ್ಲ.

ಈ ಘನತೆವೆತ್ತ ದಿಗ್ವಿಜಯ್ ನಾರಾಯಣ್ ಸಿಂಗ್ ತಮ್ಮ ರಾಜಕೀಯ ಕೆಲಸಗಳಿಗಾಗಿ ತಮ್ಮ ಹಣ ಖರ್ಚು ಮಾಡಿದರು; ಜನರಿಂದ ದೊರೆತ ಸಂಪತ್ತು ಜನರಿಗಾಗಿ ಖರ್ಚಾಗಲಿ ಎಂದು ತಮ್ಮ ಸಂಪತ್ತನ್ನು ಕರಗಿಸುತ್ತಾ ಹೋದರು. ಅವರ ಜೊತೆಗಾರ ರಾಜಕಾರಣಿಗಳು ಸಾರ್ವಜನಿಕ ಹಣ ತಿಂದು ಕೊಬ್ಬುತ್ತಿದ್ದಾಗ, ಕ್ಷುಲ್ಲಕ ಕ್ರಿಮಿಗಳಾಗುತ್ತಿದ್ದಾಗ ದಿಗ್ವಿಜಯ್ ನಾರಾಯಣ್ ಸಿಂಗ್ ಮಹೋನ್ನತ ರಾಜಕಾರಣಿಯಾಗಿ, ವ್ಯಕ್ತಿಯಾಗಿ ಬೆಳೆದರು.


-ಫೆಬ್ರವರಿ 9, 1992

ದೊಡ್ಡವರಿಗೂ ರಹದಾರಿ ಬೇಕಾ

ನಂ ಅಶೋಕ ಇದ್ದಾರಲ್ಲ... ಚರಿತ್ರೆ ಬುಕ್ಕನಲ್ಲಿ ಬರೋ ಅಶೋಕ ಅಲ್ಲ. ಅವನೇನೋ ಕಳಿಂಗ ಯುದ್ಧದಲ್ಲಿ ಸಾವಿರಾರು ಸೈನಿಕರು ಸಾವುನೋವಿಗೆ ಗುರಿಯಾದರು ಅಂತಾವ ರಾಜ್ಯಾನೆ ಬಿಟ್ಟನಂತೆ. ಪಿದ್ದು ಮುಂದೇದು. ಅವನ್ನೆಲ್ಲ ನಾನು ಹೇಳ್ತಿರೋದು. ಚುನಾವಣಾ ಯುದ್ಧದಲ್ಲಿ ವಿನಹೇನ ಪ್ರಹಾರೇಣಾ ಜಯ ಗಳಿಸಿ, ಅಧಿಕಾರದ ಗದ್ದುಗೆ ಏರಿ, ಸಾರ್ವಜನಿಕ ಹಣ ಕೊಳ್ಳೆ ಹೊಡೆಯುವುದೇ ರಾಜಧರ್ಮ ಎಂದು ನಂಬಿರುವವರು. ಅದೇ ನಂ ಸಾರಿಗೆ ಸಚಿವ... ಅಶೋಕ ಅವರ ವಿಷಯ. ಚರಿತ್ರೆ ಅಶೋಕ ಹಿಂಸೆಗೆ ಅಂಜಿ ರಾಜ್ಯ ತ್ಯಾಗ ಮಾಡಿದ. ಇವರು ರಾಜ್ಯಕ್ಕಾಗಿ ಅಹಿಂಸೆಯನ್ನೇ ತ್ಯಾಗ ಮಾಡಿದರು.

ಅನಿಕ

▸▸ ಎಚ್.ಎಲ್. ಕೇಶವಮೂರ್ತಿ



ಇಬ್ಬರೂ ತ್ಯಾಗಮೂರ್ತಿಗಳೇ! ಒಂದು ರೀತೀಲಿ ಇವರು ರಿವರ್ಸ್ ಚರಿತ್ರೆ ಅಶೋಕ ಇದ್ದಂಗೆ ಅನ್ನಬಹುದೇನೋ.

ಈ ರಿವರ್ಸ್ ಅಶೋಕ ಅಂದ್ರೆ ಅಂತಿಂತಹ ಕುಳ ಅಲ್ಲ. ಬೆರಳು ತೋರಿಸಿದರೆ ಹಸ್ತ ನುಂಗ್ತಾರೆ ಅಂತಾರಲ್ಲ ಆ ಜಾತಿಗೆ ಸೇರಿದವರು. ಯುಗಧರ್ಮ ಎಂದಿದೆಯಲ್ಲ ಅದಕ್ಕೆ ಅನುಸಾರವಾಗಿ ಕೆಲವರು ಪರಿಸರ ಉಳಿಸಿ, ಪರಿಸರ ಉಳಿಸಿ ಅಂತ ಸಾರುತ್ತಿದ್ದರು. ವಾತಾವರಣದ ಉಷ್ಣಾಂಶ ಅದೆಷ್ಟೋ ಡಿಗ್ರಿ ಹೆಚ್ಚಾಗಿದೆ, ಹಿಮ ಎಲ್ಲ ಕರಗಿ ನೀರಾಗಿ ಹರೀತಿದೆ, ಸಮುದ್ರದ ನೀರು ಕಂಡಾಬಟ್ಟೆ ಏರ್ತಿದೆ, ಮಾರಿಷಸ್ ಇನ್ನೇನು ಮುಳುಗೇಹೋಗ್ತದೆ ಅಂತೆಲ್ಲ ಹೇಳ್ತಾ ಬದ್ದಿದ್ರಲ್ಲಾ, ಅದು ಯಾವ ಕಾಲಕ್ಕೋ ಇದೆಲ್ಲ ಆಗೋದು ಅಂತ ಮಂತ್ರಿಗಳು ಉದಾಸೀನ ತೋರಿದರೂ, ಇಷ್ಟೆಲ್ಲ ಜನ ಹಿಂಗೆ ಹಾರಾಡ್ತ ಇರಬೇಕಾದರೆ ಇದ್ರಲ್ಲೇನಾದರೂ 'ಡೀಲ್' ಇರಬಹುದಾ ಎಂಬುದಾಗಿ ಯೋಚಿಸಿದರು. ಅವರ ಆಳವಾದ ಮನಸ್ಸಿಗೆ ಇದು ಇಳಿಯುತ್ತಿದ್ದಂತೆ ಮಂದಹಾಸ ಮೂಡಿತು 'ನಾನು ಪರಿಸರ ರಕ್ಷಣೆಗೆ ಬದ್ಧ' ಎಂದು ಸಾರಿದರು.

ಬದ್ಧ ಸರಿ. ಆದರೆ ಹೇಗೆ? ಹೊಗೆ ಉಗುಳುವ ವಾಹನಗಳನ್ನ ನಿಷೇಧಿಸೋಣ ಅಂದರೆ ಪೆಟ್ರೋಲಿಗೆ ಸೀಮೆಎಣ್ಣೆ ಬೆರೆಸೋ, ಡಕ್ಕೋ ಮಾಡಲ್‌ಗಾಡಿ ಓಡಿಸೋ ಹೆಂಗೋ ಜೀವನಕ್ಕೆ ದಾರಿ ಮಾಡಿಕೊಂಡಿದ್ದಾರಲ್ಲ ಬಡವರು, ಅವರಿಗೆ ಶಾನೆ ತೊಂದರೆ ಆಗ್ತದೆ ಅಂತಾವ ಅದರ ಉಸಾಬಾರಿಗೆ ಹೋಗ್ಲಿಲ್ಲ. ಆದರೂ ಪರಿಸರ ಅನ್ನೋದು, ಹೈಕಮಾಂಡು ಅಂತ ಒಂದಿದೆಯಲ್ಲ 'ಇಷ್ಟು ಸಾಲದು, 'ಇನ್ನೂ ಬೇಕು' ಅಂತ ಚುಚ್ಚೊಳ್ಳುವೆ. ಅದೇ ರೀತಿ ಆಟಕಾಯಿಸ್ತಾ ಇತ್ತು. ಪರಿಸರದವರು ಆರುಚಾಡೋದು ಏನಂತ? 'ಹಸಿರು ನಾಶ ಆಗ್ತಿದೆ' ಅಂತ ತಾನೆ? ಅದೇ ಆಟೋಗಳೆಲ್ಲ ಹಸಿರುಮಯ ಆದರೆ? ಹಾಗೇ ಆ ಚಿತ್ರವನ್ನು ಕಲ್ಪಿಸಿಕೊಂಡರು. ಅವರ ಕಣ್ಣಿಗೆ ಎಲ್ಲೆಲ್ಲೂ ಹಸಿರು ಕಂಡಿತು! ಮನಸ್ಸಿಗೆ ಹಸಿರೋಲ್ಲಾಸ ಆಯಿತು! ಜೇಬಿಗೆ ಹಸಿರಾನಂದವಾಯ್ತು! ತಕ್ಷಣ ಆಟೋಗಳಿಗೆ ಹಸಿರು ಬಣ್ಣ ಬಳಸಲು ಆರ್ಡ್ರು ಮಾಡಿದ್ರು.

ಮಂತ್ರಿಗಳ ಆರ್ಡ್ರಲ್ವಾ, ಪೇಪರಿನ ಮೇಲೆ ತಕ್ಷಣ ಜಾರಿಗೆ ಬಂತು. 'ಇಂತಹ ಅದ್ಭುತ ಯೋಜನೆ ಜಾರಿಗೆ ತಂದ್ರೂ ಪ್ರಚಾರವೇ ಸಿಕ್ಕಿಲ್ವಲ್ಲೋ ನಂಗೆ' ಎಂದು ಒಳ ದನಿ ಚುಚ್ಚಿದಂಗಾಯ್ತು, ಅದೂ ಸರಿಯೆ. ಪ್ರಚಾರ ಇಲ್ಲದ ಸರ್ಕಾರಿ ಕಾರ್ಯಕ್ರಮ ಜಾರಿಗೆ ಬಂದರೂ ಸತ್ತಂತೆಯೇ ಅಲ್ವಾ ಅಂತ ಅವರೇನು ಮಾಡಿದ್ರು? ಅದರ ಉದ್ಘಾಟನೇನೂ ಮಾಡಿದ್ರು, ಯಾವಾಗ ಅಂತೀರಿ? ಈ ಕಾನೂನು ಜಾರಿಗೆ ಬಂದ ಒಂದು ತಿಂಗಳ ನಂತರ, ಗಂಡ ಸತ್ತ ಹನ್ನೆರಡು ತಿಂಗಳಿಗೆ ಮಗು ಹೆತ್ತಂತೆ!

ಉದ್ಘಾಟನೆ ಅಂದ್ರೆ ಸುಮ್ನೆ ಆಯ್ತಾ, ಅದೂ ಸಾಕ್ಷಾತ್ ಮಂತ್ರಿಗಳೇ ಬಂದು ಮಾಡಿದ್ರು ಅಂದ್ಮೇಲೆ ವಿಶೇಷ ಇರಲೇಬೇಕಲ್ವ. ಹೋಟೆಲ್ ಉದ್ಘಾಟನೆ ಮಾಡ್ತಾರೆ, ತಿಂಡಿತಿನ್ತಾರೆ; ಈಜುಕೊಳ ಉದ್ಘಾಟನೆ ಮಾಡ್ತಾರೆ ಈಜಾಡ್ತಾರೆ; ಹಿಂಗೇ ಶೌಚಾಲಯ ಉದ್ಘಾಟನೆ ಮಾಡ್ತಾರೆ ಶೌಚಕ್ಕೆ ಹೋಗ್ತಾರೆ. ಇದು ಸಂಪ್ರದಾಯ. ಹಂಗೆ ಇವರು ಅಲ್ಲಿ ಏನು ಮಾಡಿದರು ಅಂದ್ರೆ ಹಸಿರು ಆಟೋ ಉದ್ಘಾಟನೆ ಅಲ್ವ, ಆಟೋ ಚಲಾಯಿಸಿದರು. ಇದರಲ್ಲೇನು ಅಪರಾಧ ಇಲ್ಲ ಅಲ್ವ. ಅದ್ಯಾವ್ರೋ ಈಗ ಅಶೋಕರನ್ನ ಅಟಕಾಯಿಸಿಕೊಂಡಿವೆಯಂತೆ... ಆಟೋ ಚಾಲನೆಗೆ ಪರವಾನಗಿ ಇತ್ತ ಅಂತಾವ.. ಅಯ್ಯೋ ಶಿವನೆ ಮಂತ್ರಿಗಳಿಗೂ ಪರವಾನಗಿ ಬೇಕಾ... ನಂ ಕುಮಾರಣ್ಣನೇ ತಗಳ್ಳಿ. ಈಗ ಹೆಣ್ಣುಮಗುವಿನ ತಂದೆ ಅಂತ ಜನೆಲ್ಲ ಹುಯ್ಯೋ ಅಂತದೆ. ಅದಕ್ಕೆ ಅನಿತಕ್ಕನಿಂದ ಪರವಾನಗಿ ತಗಂಡಿದ್ರಾ... ಪರವಾನಗಿ ಸಿಕ್ಕಿದ್ರು ಸೋಡಾಚೀಟ ಕೆರ್ದು ಬಿಸಾಕಿದ್ರಾ..... ದೊಡ್ಡೋರು ಅಂದ್ಮೇಲೆ ಪರವಾನಗಿ ಬೇರೆ ಬೇಕೆ ಅಂತಾ.... ಹುಚ್ಚು ಮುಂಡೇವು ಅವೆಲ್ಲೋ....

ಸಾಹೇಬರ ಶಾಪ

ಬಹಳ ಶ್ರಮಪಟ್ಟ- ಆ ಜಾಗ ಪಡೆಯೋಕೆ.

ರೇಟು ಇಷ್ಟು ಅಂದ್ರು.

ಜಾತಿ ಗೊತ್ತುಪಡಿಸಿದ.

ಸ್ವಲ್ಪ ರಿಯಾಯಿತಿ ತೋರಿದರು.

ಒಂದೂ ಕಾಲುಕೋಟಿ! ಕೊಟ್ಟ. ಜಾಗ ಪಡೆದ.

ಹದಿನೈದು ದಿನಾನೂ ಆಗಿಲ್ಲ. ಆಗಲೇ ಲೋಕಾಯುಕ್ತರ ದಾಳಿ.

ಅಪಾಯಿ ಕಷ್ಟ ನೋಡಿ.

ಜಾಗ ಕೊಡಿಸಿದವರು ದೊಡ್ಡವರ ಮಕ್ಕಳು. ಲೋಕಾಯುಕ್ತರ ದಾಳಿ ಆಗಿ, ಜಾಗ ಹೋಯ್ತು, ಹಣ ಹಿಂತಿರುಗಿಸಿ ಅನ್ನುವಂತಿಲ್ಲ, ಕೇಳಿದ ಅನ್ನಿ ನೀನು ಕೊಟ್ಟಿದ್ದು ಜಾಗಕ್ಕೇ ಪರಂತು 'ದಾಳಿ ತಡೆ'ಗಲ್ಲ ಅನ್ನಬಹುದು!

ಶಿಕ್ಷೆಯೇನೂ ಆಗಲ್ಲ, ಆರು ತಿಂಗಳು ಅಷ್ಟೆ. ಮತ್ತೆ ಕೆಲಸಕ್ಕೆ ಹೋಗಬಹುದು ನಿಜ. ಆದರೆ ಅಂತಹ ಫಲವತ್ತಾದ ಜಾಗವೇ ಸಿಗುತ್ತೆ ಅನ್ನುವ ಖಾತರಿ ಇಲ್ಲ, ಸಿಗಬೇಕು ಅಂದ್ರೆ ಮತ್ತೆ ಕೋಟಿಗಟ್ಟಲೆ ಹಣ ಸುರೀಬೇಕು!

ಒಂದೂ ಕಾಲು ಕೋಟಿ ಹೊಳೇಲಿ ಹುಣಿಸೆ ಹಣ್ಣು ತೇಯ್ದ ಹಾಗಾಯಿತು.

ಇದನ್ನೆಲ್ಲ ಯಾಕೆ ಹೇಳುವುದಕ್ಕೆ ಬಂದೆ ಅಂದ್ರೆ ಕೋಲಾರದ ಎಸ್‌ಪಿ ಸಾಹೇಬರನ್ನ ಲೋಕಾಯುಕ್ತರು ಬಲೆಗೆ ಕೆಡವಿದ್ದಾರಂತೆ. ಮಾಧ್ಯಮಗಳೆಲ್ಲ 'ಬೇಲಿಯೇ ಎದ್ದು ಹೊಲ ಮೆಯ್ದ ಹಾಗೆ' ಹಾಗೆ ಹೀಗೆ ಅಂತ ವರದಿ ಮಾಡ್ತಾ ಬದ್ದವೆ. ಅಲ್ಲ ಅವರ ಸಂಕಟ ಏನು



ಎತ್ತ ಯಾವ್ನೋನಾದರೂ ವಿಚಾರಿಸಿದಾನಾ ಅಂತ. ಅವರು ಆ ಜಾಗಕ್ಕೆ ಬರಲು ಯಾರ್‍ಯಾರ ಕೈಕಾಲು ಹಿಡಿದು ಏನೇನು ಸರಬರಾಜು ಮಾಡಿ ಬಂದಿದ್ರೋ ಪಾಪ. ಸುರಿದಿರೋ ಹಣಾನ ನಿಧಾನವಾಗಿ ಎತ್ತಿಕೊಳ್ಳೋಣ ಅಂದ್ರೆ ಈ ಹಾಳಾದ ಸರ್ಕಾರ ಯಾವಾಗ ಎತ್ತಂಗಡಿ ಮಾಡುತ್ತೋ ಏನೋ ಎಂಬ ದಿಗಿಲು. ಅದಕ್ಕೆ ಜಾಗಕ್ಕೆ ಕುಂತ ತಕ್ಷಣ ಆದಾಯದ ಮೂಲಗಳನ್ನು ಹುಡುಕುವುದು ಅನಿವಾರ್ಯ ಆಗಿಬಿಡುತ್ತೆ, ಸಾಹೇಬರೂ ಅದನ್ನೇ ಮಾಡಿದ್ದರು. ಆದರೂ ಸಮಾಧಾನ ಆಗಲಿಲ್ಲ, ಸಿಬ್ಬಂದಿ ಜೇಬಿಗೂ ಕೈ ಇಳೇಬಿಟ್ಟರು. ಇಷ್ಟಕ್ಕೇ ಅದ್ಯಾವನೋ ಹೋಗಿ ಮೇಲಧಿಕಾರೀನೆ ಹಿಡಿಸಿಬಿಡೋದ!

ಈಗೇನೋ ಪಾಪ ಸಾಹೇಬರಿಗೆ ಹೃದಯಬೇನೆ ಕಾಣಿಸಿಕೊಂಡಿದೆಯಂತೆ. ದೊಡ್ಡವರನ್ನ ಜೈಲಿಗೆ ಕಳುಹಿಸ ಬೇಕಾದಾಗಲೇ ಇದು ತಲೆದೋರುವುದು ಅವರ ಪುಣ್ಯ! ವೈದ್ಯ ಮಹಾಶಯರು ಸಾಹೇಬರ ತೊಂದರೆಗಳೆಲ್ಲವನ್ನೂ ಅರ್ಥಮಾಡಿಕೊಂಡು ವಿಐಪಿ ಕೊಠಡಿಗೆ ದಾಖಲಿಸಿ ಸೂಕ್ತ ಚಿಕಿತ್ಸೆ ನೀಡುತ್ತಿದ್ದಾರಂತೆ!

ಇದಕ್ಕೆಲ್ಲ ಕಾರಣ ಅಂದರೆ ಆ ಪಾಪ್ದೆ. ಹೀಗೆ ಮಾಡಬಾರದಿತ್ತು, ಮಾಡಿದ. ದೊಡ್ಡವರ ಶಾಪ ಹಾಗೆಯೇ ಬಿಡುತ್ತೆಯೆ? ಸಾಹೇಬರ ಸ್ನೇಹಿತರು ಅವನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡದೆ ಇದ್ದರೆ ಸ್ನೇಹದ ಋಣ ಏನಾಗಬೇಕು? ಇನ್ನು ಆರು ತಿಂಗಳು ಅಷ್ಟೆ. ಸಾಹೇಬರೇ ಖುದ್ದು ಈ ಕೆಲಸಕ್ಕೆ ಇಳೀತಾರೆ!

ಆ ಪೇದೆ ಎಂತಹ ಮಂಕ ಅಂತೀನಿ. ಇವನ್ನೆಲ್ಲ ಮುಂಚೆಯೇ ಯೋಚಿಸಬಾರದಾಗಿತ್ತಾ? ಕೆಲಸದಲ್ಲಿ ಮುಂದುವರೆಸಲು ಲಂಚ ಕೇಳಿದರು ಎಂದು ದೂರು ನೀಡಿದ್ದಲ್ಲಾ. ನೋಡ್ತಾ ಇರಿ. ಈಗ ತಾನೇ ಕೆಲಸ ಬಿಟ್ಬೋಯ್ತಿನಿ ಅಂತಾನೆ!

ಸಾಹೇಬರ ಶಾಪ ಅಂದ್ರೆ ಸಾಮಾನ್ಯನಾ.......

ಅಮಂಗಳ ಸೂತ್ರ


ಈ ಹಾಳಾದ ಚುನಾವಣೆಗಳು ಯಾಕಾದ್ರೂ ಬರ್ತವೋ. ಹೆಂಗಿದ್ದರೂ ಹಣ ಹಂಚೀ ಗೆಲ್ಲೋರು ಅನ್ನೋದು ಖಾತರಿಯಾಗಿದ್ದ ಮೇಲೆ ಹರಾಜು ಮಾಡಿ ಅಭ್ಯರ್ಥಿನ ಆಯ್ಕೆ ಮಾಡಿಕೋಬಾರದಾ ಎನ್ನುವುದು ಕೆಲವರ ಅಭಿಪ್ರಾಯ ಆಗಿದೆ. ಅದು ಹಂಗಲ್ಲ, ನಮ್ಮದು ಪ್ರಪಂಚದಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವ ಅಂತೆಲ್ಲ ಹೇಳಿಕೊಂಡಿರುವ ನಾವು ಬೇರೆಯವರ ಕಣ್ಣಿಗೆ ಮಣ್ಣು ಎರಚಲಾದರೂ ಚುನಾವಣಾ ಶಾಸ್ತ್ರ ನೆರವೇರಿಸಬೇಕಾಗುತ್ತೆ, ಚುನಾವಣೆಯಿಂದ ಚುನಾವಣೆಗೆ ಅದರ ಖದರೂ ಬದಲಾಗ್ತಾ ಹೋಗ್ತಿದೆ. ಗಂಡಸರನ್ನು ಹೇಗಾದರೂ ಕೆಡವಿಕೊಳ್ಳಬಹುದು. ಈ ಹೆಂಗಸರದ್ದೇ ಕಾಟ. ಕುಡೀತಾವಾ ಅಂದ್ರೆ ಕುಡಿಯೋದೂ ಇಲ್ಲ, ಕುಡಿದ ಅಮಲಿನಲ್ಲಿ ಬಲೆ ಬೀಸೋಕೆ.... ಮೊದಲೆಲ್ಲ ಅರಿಶಿನ ಕುಂಕುಮ ಕೊಟ್ರೋ, ತಾಂಬೂಲ ಕೊಟ್ರೊ, ಭಾಷೆ ತಗಂಡು ಇರಬಹುದಾಗಿತ್ತು, ಈ 'ತಾಂಬೂಲ ಚುನಾವಣೆ' ಹೋಗಿ 'ಸೀರೆ ಚುನಾವಣೆ' ಬಂತು. ಸೀರೆ ಹಂಚಿದ್ದಾಯ್ತು, ಉಂಗುರ, ಮೂಗುತಿ ಅಂತೆಲ್ಲ ಬಡ್ತಿ ಪಡೆದು ಕೊಂಡದ್ದೂ ಇವುಗಳ ಚುನಾವಣೆನೂ ನಡೆಸಿದ್ದಾಯ್ತು, ಹೊಸದೇನಾದ್ರೂ ಮಾಡಬೇಕಲ್ಲ ಅಂತಾವ ಜಾರ್ಖಂಡ್‌ನಲ್ಲಿ ಹೊಸ ವರಸೆ ಶುರು ಹಚ್ಕಂಡವ್ರಂತೆ. ಹೆಂಗಸರು ಚಿನ್ನ ಅಂದ್ರೆ ಬಾಯಿಬಾಯಿ ಬಿಡ್ತಾರೆ ನಿಜ. ಆದರೆ ಓಟನ್ನೂ ಕೊಡ್ತಾರೆ ಎನ್ನುವ ಖಾತರಿ ಏನು? ಅದ್ಕೆ ಈಗ ಏನ್ಮಾಡ್ತಿದಾರೆ ಅಲ್ಲಿ ಅಂದ್ರೆ.... ಭಾರತೀಯ ನಾರಿಯರಿಗೆ ಬಹಳ ಪವಿತ್ರವಾದದ್ದು ಮಂಗಳಸೂತ್ರ ಅಲ್ವಾ.... ಅದ ಕೊಡ್ತಾ ಅವ್ರಂತೆ. ಅದ ಅವರೇ ಕಟ್ತಾರೋ ಏನೋ ಗೊತ್ತಿಲ್ಲ, ಅದಲ್ಲ ವಿಷಯ. ತಾಳಿ ಮೇಲೆ ಯಾವ ಚಿತ್ರಾನೂ ಇರಲ್ಲ, ಅಕಸ್ಮಾತ್ ಇದ್ದರೆ ದೇವರ ಚಿತ್ರ ಇರುತ್ತೆ, ಇವರು ಕೊಡೋ ತಾಳೀಲಿ ಪಕ್ಷದ ಚಿಹ್ನೆ ಇರುತ್ತಂತೆ. ಅವಳು ಅದನ್ನು ಕಟ್ಟಿಕೊಂಡರೆ ಯಾರ ಹೆಂಡತಿ ಆಗ್ತಾಳೆ? ಪಕ್ಷದ ಹೆಂಡತೀನಾ...! ಬಡತನದ ಬೇಗೆಯಿಂದ ಹೆಂಗಸರು ಯಾವ್ಯಾವುದಕ್ಕೆ ಹೆಂಡತೀರು ಆಗಬೇಕೋ ಏನೋ.....! ●

ಢೋಂಗಿ ಸೌಮ್ಯವಾದಿಗಳಿಗೆ ಶಿಕ್ಷೆ ಎಂದು?

ಲಿಬರ್ಹಾನ್ ಆಯೋಗದ ವರದಿಯಿಂದಾಗಿ ಗೋಮುಖ ವ್ಯಾಘ್ರಗಳ ಮುಖವಾಡವೇನೋ ಕಳಚಿಬಿದ್ದಿದೆ. ಆದರೆ ಆಯೋಗವೇ ತಿಳಿಸಿರುವಂತೆ ಈ 68 ಜನ "ಢೋಂಗಿ ಸೌಮ್ಯವಾದಿ"ಗಳಿಗೆ ಶಿಕ್ಷೆಯಾಗುವುದು ಯಾವಾಗ?

ಪ್ರಪಂಚಕ್ಕೆಲ್ಲಾ ತಿಳಿದಿದ್ದ ಸತ್ಯವನ್ನು ಸಾಕ್ಷ್ಯಾಧಾರಗಳ ಸಮೇತ ರುಜುವಾತುಪಡಿಸಲು ಲಿಬರ್ಹಾನ್ ಆಯೋಗ ತೆಗೆದುಕೊಂಡಿರುವ ಕಾಲಾವಧಿ ಹದಿನಾರೂವರೆ ವರ್ಷಗಳಾದರೆ, ಅನವಶ್ಯಕವಾಗಿ ಬಾಬ್ರಿ ಮಸೀದಿಯನ್ನು ಉರುಳಿಸಿ ಈ ದೇಶದ ಕೋಮು ಸೌಹಾರ್ದತೆಗೆ ಕೊಳ್ಳಿ ಇಟ್ಟ ಪಾತಕಿಗಳಿಗೆ ಶಿಕ್ಷೆ ಪ್ರಕಟವಾಗಲು ಇನ್ನೆಷ್ಟು ವರ್ಷಗಳು ಬೇಕು? 'ಪತ್ರಿಕೆ'ಯಲ್ಲಿ ತಿಳಿಸಿರುವಂತೆ ಈ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕ್ರಮಕೈಗೊಳ್ಳಬೇಕಾಗಿರುವುದು ಕೇಂದ್ರ ಸರ್ಕಾರದ ಕರ್ತವ್ಯವೇ ಆದರೂ ಕೇಂದ್ರ ಸರ್ಕಾರದಿಂದ ಇಂತಹ ಕರ್ತವ್ಯ ನಿಷ್ಠೆಯನ್ನು ನಿರೀಕ್ಷಿಸುವುದು ಮೂರ್ಖತನದ ಪರಮಾವಧಿ. ಈ 68 ಜನ 'ಢೋಂಗಿ ಸೌಮ್ಯವಾದಿ'ಗಳನ್ನು ಶಿಕ್ಷಿಸುವ ಮನಸ್ಸು ಕೇಂದ್ರ ಸರ್ಕಾರಕ್ಕೆ ಇಲ್ಲ, ಏಕೆಂದರೆ ದಿವಂಗತ ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಯ ನಂತರ ನವದೆಹಲಿಯಲ್ಲಿ ನಡೆದ ಹತ್ಯಾಕಾಂಡದಲ್ಲಿ ಭಾಗಿಯಾಗಿದ್ದವರನ್ನು ರಕ್ಷಿಸುತ್ತಿರುವ ಕಾಂಗ್ರೆಸ್ ಪಕ್ಷ ನೇತೃತ್ವದ ಯುಪಿಎ ಸರ್ಕಾರ, ಈಗ ಬಾಬ್ರಿ ಮಸೀದಿಯನ್ನು ಉರುಳಿಸಿದವರ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾದರೆ ಸಿಖ್ಖರ ನರಮೇಧದಲ್ಲಿ ಭಾಗಿಯಾಗಿದ್ದವರನ್ನು ಶಿಕ್ಷಿಸಬೇಕು. ಇದು ಕಾಂಗ್ರೆಸಿಗರಿಗೆ ಚೆನ್ನಾಗಿಯೇ ತಿಳಿದಿರುವುದರಿಂದ ಲಿಬರ್ಹಾನ್ ಆಯೋಗದ ವರದಿಯ ಮೇರೆಗೆ ಕಾಟಾಚಾರದ ಎಟಿಆರ್ (Action Taken Report) ಒಂದನ್ನು ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿದೆ.

ಢೋಂಗಿ ಸೌಮ್ಯವಾದಿಗಳಿಗೆ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಲು ಮುಂದಾಗುವುದು ಹಾವಿರುವ ಹುತ್ತಕ್ಕೆ ಕೈ ಹಾಕಿದಂತೆಯೇ ಎಂಬುದನ್ನು ಕೇಂದ್ರ ಸರ್ಕಾರ ಅರಿತಿದೆ. ಬಾಬ್ರಿ ಮಸೀದಿಯನ್ನು ಉರುಳಿಸಿದ ಪಾತಕಿಗಳಿಗೆ ಶಿಕ್ಷೆ ಏನು ಎಂಬ ಬಗ್ಗೆ ಲಿಬರ್ಹಾನ್ ಆಯೋಗವೂ ಸಹ ಮೌನವಹಿಸಿರುವ ಈ ಸಂದರ್ಭದಲ್ಲಿ ಈ ದೇಶದ ಪ್ರಜ್ಞಾವಂತ ಜನರು ಮೌನ ವಹಿಸಿದರೆ ಬಾಬ್ರಿ ಮಸೀದಿಯನ್ನು ಉರುಳಿಸಿದ್ದಕ್ಕಿಂತಲೂ ಘೋರವಾದ ದುರಂತಗಳು ಈ ದೇಶದಲ್ಲಿ ಖಂಡಿತಾ ನಡೆಯಲಿವೆ. ಈ ಬಗ್ಗೆ ವಿಶ್ವ ಹಿಂದೂ ಪರಿಷತ್‌ನ ಮುಖ್ಯಸ್ಥ ಅಶೋಕ ಸಿಂಘಾಲ್ ಈಗಾಗಲೇ ಸೂಚನೆ ನೀಡಿದ್ದಾನೆ. ಅಯೋಧ್ಯೆಯಲ್ಲಿ ನಡೆದಂತಹ ದುರಂತ ಮಥುರಾ ಮತ್ತು ಕಾಶಿಗಳಲ್ಲಿ ಪುನರಾವರ್ತನೆ ಆಗದಂತೆ ತಡೆಯಬೇಕಿರುವುದು ಈ ದೇಶದ ಪ್ರಜ್ಞಾವಂತ ಜನತೆಯ ಆದ್ಯ ಕರ್ತವ್ಯವಾಗಬೇಕು.



ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್‌ನ ಸಭೆಗೆ ಬಾಡಿಗೆ ಜನರನ್ನು ಕರೆ ತಂದಿದ್ದು ನಿಜಕ್ಕೂ ಖುಷಿಯ ಸಮಾಚಾರ. ಇಂತಹ ಸಿಹಿ ಸುದ್ದಿಯನ್ನು ನೀಡಿದ ಪತ್ರಿಕೆಗೆ ಧನ್ಯವಾದಗಳು. ದೇವೇಗೌಡ ಮತ್ತು ಅವರ ಮಕ್ಕಳು ಮಾಡಿದ ತಪ್ಪಿನಿಂದಾಗಿ ಕರ್ನಾಟಕದಲ್ಲಿ ಅಧಿಕಾರಕ್ಕೇರಿದ ಈ ಕೋಮುವಾದಿಗಳು ಕರ್ನಾಟಕದ ಜನತೆ ಕೋಮುವಾದಕ್ಕೆ ಮಣೆ ಹಾಕಿದ್ದಾರೆ ಎಂದು ತಪ್ಪಾಗಿ ಅರ್ಥೈಸಿಕೊಂಡಿದ್ದರು. ಆದರೆ ಕರ್ನಾಟಕದ ಜನತೆ ಬಯಸುವುದು ಕೋಮು ಸೌಹಾರ್ದತೆಯನ್ನೇ ಹೊರತು ಕೋಮುವಾದವನ್ನಲ್ಲ ಎಂಬ ಸತ್ಯ ಇವರು ಅಧಿಕಾರಕ್ಕೇರಿದ ಎರಡು ವರ್ಷಗಳೊಳಗೆ, ಇವರು ಅಧಿಕಾರದಲ್ಲಿರುವಾಗಲೇ ಗೋಚರಿಸಿರುವುದು ಸಂತಸದ ಸಂಗತಿ. ಕರ್ನಾಟಕ ಕೋಮುವಾದದತ್ತ ಹೊರಳುತ್ತಿದೆಯೇನೋ ಎಂದು ದುಗುಡಗೊಂಡಿದ್ದ ಜನಸಾಮಾನ್ಯರಿಗೆ ಇದು ಸಿಹಿ ಸುದ್ದಿ.

'ಆಸರೆ'ಯ ಅಸಲಿತನವನ್ನು ಶಿವಸುಂದರ್‌ರವರು ಡಿಸೆಂಬರ್ 9ರ ಸಂಚಿಕೆಯಲ್ಲಿ ಬಯಲುಗೊಳಿಸಿದ್ದಾರೆ. "ಎಲ್ಲ ನೆರೆಸಂತ್ರಸ್ತರ ಮನೆ ನಿರ್ಮಾಣ ಮಾಡಲು ಸಾಫ್ಟ್‌ವೇರ್ ಕಂಪೆನಿಗಳಿಗೆ ಸರ್ಕಾರ ನೀಡುತ್ತಿರುವ ತೆರಿಗೆ ರಿಯಾಯಿತಿಯನ್ನು ಒಂದು ವರ್ಷದ ಮಟ್ಟಿಗೆ ಹಿಂತೆಗೆದುಕೊಂಡರೂ ಎಲ್ಲಾ ನೆರೆ ಸಂತ್ರಸ್ತರಿಗೆ ಮನೆ ನಿರ್ಮಿಸಿಕೊಡಬಹುದು" ಎಂಬುದು ನಿಜವಾಗಿದ್ದರೂ ಈಗಾಗಲೇ ಗಣಿಚೋರರ ಮುಂದೆ ಮಂಡಿಯೂರಿ ನಡೆಯುತ್ತಿರುವ ಯಡಿಯೂರಪ್ಪನವರ ಸರ್ಕಾರದಿಂದ ಇಂತಹ ಕ್ರಮ ಸಾಧ್ಯವೇ?

"ಹತ್ತು ಕೋಟಿಗೆ ಬಗ್ಗದ ಹನುಮಂತಪ್ಪ" ಸಹ ಒಂದು ಸಿಹಿ ಸುದ್ದಿ. ಕೋಟಿಗಳನ್ನು ಬಿಸಾಡಿ ಯಾರನ್ನು ಬೇಕಾದರೂ ಖರೀದಿಸಬಹುದೆಂಬ ಧಿಮಾಕಿನಿಂದ ವರ್ತಿಸುತ್ತಿರುವ ರೆಡ್ಡಿ ಸಹೋದರರಿಗೆ ಹನುಮಂತಪ್ಪ ಸರಿಯಾದ ಬುದ್ಧಿಯನ್ನೇ ಕಲಿಸಿದ್ದಾರೆ. ರೆಡ್ಡಿಗಳ ಹಣ ನ್ಯಾಯಾಂಗವನ್ನು ಭ್ರಷ್ಟಗೊಳಿಸದಿರಲಿ.

'ನುಡಿಸಿರಿ' ಮಾಡುತ್ತಾ 'ಸಾಂಸ್ಕೃತಿಕ ರಾಯಭಾರಿ' ಎಂಬಂತೆ ಪೋಜು ಕೊಡುತ್ತಿದ್ದ ಮೋಹನ ಆಳ್ವನ ಬಂಡವಾಳವನ್ನು ಬಯಲುಗೊಳಿಸಿದ್ದೀರ. ಕರಾವಳಿಯಲ್ಲಿ ಭಜರಂಗಿಗಳಿಗೆ ಮೂಗುದಾರ ಹಾಕುತ್ತಿರುವ ಪೊಲೀಸ್ ಅಧಿಕಾರಿಗಳ ಕ್ರಮ ಸ್ವಾಗತಾರ್ಹ.

ರಹಮತ್ ತರೀಕೆರೆಯವರ 'ಹೊಳೆಗೆ ಹೊಸ ನೀರು' ಸಾಹಿತ್ಯ ಪ್ರೇಮಿಗಳಿಗೆ ಮುದ ನೀಡುತ್ತಿದೆ. ಕೋಮುವಾದ, ಅನ್ಯಾಯ, ಅಕ್ರಮಗಳ ವಿರುದ್ಧದ 'ಪತ್ರಿಕೆ'ಯ ಹೋರಾಟ ನಿತ್ಯ ನಿರಂತರವಾಗಿ ಮುಂದುವರೆಯಲಿ.


-ಎಸ್.ಎಸ್.ವೆಂಕಟೇಶ್, ಬೆಂಗಳೂರು

ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ
lankesh70@rediffmail.comಗೆ
ಕಳಿಸಬಹುದು

...ಹಿರಿಯರೋ, ಕಿರಿಯರೋ ಒಟ್ಟು ಒಳ್ಳೆ ಸಿನಿಮಾ ಬರಲಿ...

ದಿವಂಗತ ಚಂದ್ರಶೇಖರ್ ಅವರು ಎಂಭತ್ತರ ...ಶಕದಲ್ಲಿ ಪ್ರಧಾನಿ ಹುದ್ದೆಯನ್ನು ಅಲಂಕರಿಸಿದಾಗ ...ಪಕೀಯದಲ್ಲಿ ಒಂದು ಹೊಸ ಉತ್ಸಾಹದ ವಾತಾ...ಣ ಸೃಷ್ಟಿಯಾಯಿತು. ಪಂಚಾಯತ್ ಮೆಂಬರ್, ...ಲ್ಲಾ ಪರಿಷತ್ ಮೆಂಬರ್ ಅಥವಾ ಕನಿಷ್ಠ ನಿಗಮ ...ಮಂಡಲಿಗಳ ಅಧ್ಯಕ್ಷರಾಗಿ ಯಾವುದೇ ಅನುಭವವನ್ನು ...ಪಡೆ ಹೊಂದಿರದಿದ್ದ ಚಂದ್ರಶೇಖರ್ ನೇರವಾಗಿ ದೇಶದ ...ನ್ನತ ಪದವಿಯಾದ ಪ್ರಧಾನ ಮಂತ್ರಿ ಹುದ್ದೆಗೇರಿದ್ದು ...ರಿಗೂ ಆಶ್ಚರ್ಯ ನೀಡಿತ್ತು. ಇದು ಪ್ರಜಾಪ್ರಭುತ್ವದ ...ಬಗು ಮತ್ತು ಅಚ್ಚರಿಗಳಲ್ಲಿ ಒಂದು ಎಂದೇ ಎಲ್ಲರೂ ...ಪಿಸಿದ್ದರು. ಆ ನಂತರ ಚಂದ್ರ...ಖರ್ ಅಷ್ಟೇ ಸಮರ್ಥವಾಗಿ ...ಧಾನಿಯಾಗಿ ಕಾರ್ಯನಿರ್ವಹಿಸಿ ...ರ ಮೆಚ್ಚುಗೆ ಗಳಿಸಿದರು.

...ಆದರೆ ನಿರ್ದೇಶಕ ...ಜೇಂದ್ರಸಿಂಗ್ ಬಾಬು ...ತ್ವದ ಕನ್ನಡ ಚಲನಚಿತ್ರ ...ಾಸಮಿತಿ ಇತ್ತೀಚೆಗೆ ...ಂಡಿರುವ ಕೆಲ ...ಯಗಳು ಮೆಚ್ಚುಗೆಯ ...ಾಗಿ ಟೀಕೆಗಳನ್ನೇ ...ನಿಸುತ್ತಿರುವುದರಿಂದ ...ಲಿನ ಘಟನೆ ನೆನಪಾಯಿತು.



...ಕನ್ನಡ ಚಿತ್ರರಂಗ ದಿನದಿಂದ ...ಕ್ಕೆ ಕುಸಿಯುತ್ತಿರುವ ಇಂದಿನ ...ರ್ಭದಲ್ಲಿ ಅದನ್ನು ಮತ್ತೆ ಮೇಲೆತ್ತಲು ನಿರ್ಮಾಪಕರ ... ಮತ್ತು ನಿರ್ದೇಶಕರ ಸಂಘ ಸೂಕ್ತವಾದ ಕ್ರಮಗಳನ್ನು ...ಳ್ಳುವುದು ಸ್ವಾಗತಾರ್ಹ. ಆದರೆ ದುರದೃಷ್ಟವಶಾತ್ ...ರು ಕೈಗೊಳ್ಳುವ ನಿರ್ಣಯ ...ವೂ ಹಾಸ್ಯಾಸ್ಪದವಾಗಿ ಕಾಣಿ...ದೆ. ಮಾತ್ರವಲ್ಲ ಬಾಬು ನೇತೃ... ಸಮಿತಿಯ ನಿರ್ಣಯಗಳು ...ಿಯ ಮಹಮ್ಮದ್ ಬಿನ್ ...ಘಲಕ್‌ನನ್ನು ನೆನಪಿಸುತ್ತಿವೆ.



...ಇಲ್ಲೊಂದು ಸಿಂಪಲ್ ... ಯಾವುದೇ ರಾಜಕೀಯ ...ಯನ್ನಲಂಕರಿಸದ ಒಬ್ಬ ...ಈ ದೇಶದ ...ನಮಂತ್ರಿಯಾಗಿ ...ಸ್ವಿಯಾಗಲು ...ಸಾಗುವುದಾದರೆ, ...ದ್ರದೇ ಅನುಭವವಿಲ್ಲದ ...ವ್ಯಕ್ತಿ ಚಲನಚಿತ್ರ ...ದೇಶಕನಾಗಿ ಯಶಸ್ವಿಯಾಗಲು ಯಾಕೆ ಸಾಧ್ಯವಿಲ್ಲ? ...ಲ್ಲರಿಗೂ ಗೊತ್ತಿರುವಂತೆ ಯಾವುದೇ ಒಂದು ...ದಲ್ಲಿ ಹೊಸ ನೀರು ಹರಿದು ಬಂದಾಗಲೇ ಏನಾದರೂ ಹೊಸ ಸಾಧನೆ ಸಾಧ್ಯವಾಗುವುದು. ಸಿನಿಮಾದಂತಹ ಕ್ರಿಯೇಟಿವ್ ಮಾಧ್ಯಮದಲ್ಲಂತೂ ಅನುಭವಕ್ಕಿಂತ ಹೊಸ ಚಿಂತನೆ, ಕ್ರಿಯಾಶೀಲತೆಯೇ ಮುಖ್ಯವಾಗುತ್ತದೆ.

ಆದರೆ ಇದನ್ನರಿಯದ ಬಾಬು ಅವರ ಸಮಿತಿ ಇನ್ನು ಮುಂದೆ ಯಾರೇ ಆಗಲಿ, ಮೊದಲು ಐದು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಅನುಭವ ಹೊಂದಿದ ನಂತರವೇ ನಿರ್ದೇಶನಕ್ಕೆ ಕೈ ಹಾಕಬೇಕು ಎಂದು ಫತ್ವಾ ಹೊರಡಿಸಿದೆ. ಅದಕ್ಕೆ ಅವರು ಕೊಟ್ಟಿರುವ ಸಬೂಬು 'ಅನುಭವ ಇಲ್ಲದವರು ಸಿನಿಮಾ ಮಾಡುತ್ತಿರುವುದರಿಂದ ಕನ್ನಡ ಚಿತ್ರರಂಗ ಕೆಟ್ಟುಹೋಗುತ್ತಿದೆ.'


ಒಂದು ವೇಳೆ ಅನುಭವವೇ ಮುಖ್ಯವಾಗಿದ್ದೇ ಆದಲ್ಲಿ ರಾಜೇಂದ್ರಸಿಂಗ್ ಬಾಬುರವರ ಇತ್ತೀಚಿನ ಸಿನಿಮಾಗಳು ಯಾಕೆ ಗೋತಾ ಹೊಡೆಯುತ್ತಿವೆ? 'ಕುಮಾರರಾಮ' ಚಿತ್ರವನ್ನು ಅತ್ಯಂತ ಹಿರಿಯ ನಿರ್ದೇಶಕ ಭಾರ್ಗವ ನಿರ್ದೇಶಿಸಿದ್ದರೂ ಅದು ಯಾಕೆ ಒಂದೇ ವಾರಕ್ಕೆ ಎತ್ತಂಗಡಿಯಾಯಿತು? 'ಬಂಗಾರದ ಮನುಷ್ಯ', 'ಭೂತಯ್ಯನ ಮಗ ಅಯ್ಯು' ತರಹದ ಸದಭಿರುಚಿಯ ಮತ್ತು ಯಶಸ್ವಿ ಚಿತ್ರಗಳನ್ನು ನೀಡಿದ್ದ ಸಿದ್ದಲಿಂಗಯ್ಯನವರ ಆ ನಂತರದ ಚಿತ್ರಗಳೆಲ್ಲಾ ಸೋತು ಮಣ್ಣು ಮುಕ್ಕಿದ್ದೇಕೆ? ಹಾಗೆಯೇ ಯಾವ ಅನುಭವವೂ ಇಲ್ಲದೆ ಕೆಲ ನಿರ್ದೇಶಕರ ಪ್ರಥಮ ಚಿತ್ರಗಳು ಬಾಕ್ಸ್ ಆಫೀಸಿನಲ್ಲಿ ಗೆದ್ದಿದ್ದೇಕೆ?

ಇದೆಲ್ಲದರ ಅರ್ಥ ದೊಡ್ಡವರೆಲ್ಲ ಜಾಣರಲ್ಲ, ಹಾಗೆಯೇ ಚಿಕ್ಕವರೆಲ್ಲ ಕೋಣರಲ್ಲ ಎಂದು ತಾನೇ? ಈ ಹಿನ್ನೆಲೆಯಲ್ಲಿ ನೋಡಿದರೆ ಚಲಚಿತ್ರ ನಿರ್ದೇಶಕನಾಗಬೇಕಾದವನು ಕನಿಷ್ಠ ಐದು ಚಿತ್ರಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ ಅನುಭವವಿರಬೇಕು ಎಂದು ಹೇಳುತ್ತಿರುವುದು ಸಮಂಜಸವಲ್ಲ. ಇಷ್ಟಕ್ಕೂ ಕನ್ನಡದಲ್ಲಿ ಅಂತಹ ಆದರ್ಶಪ್ರಾಯವಾದ ಅಥವಾ ಎತ್ತರದ ಸ್ಥಾನದಲ್ಲಿರುವ ಯಶಸ್ವಿ ನಿರ್ದೇಶಕ ಯಾರಿದ್ದಾರೆ ಎಂದು ಬಾಬು ಘೋಷಿಸಲಿ!


ಬಾಬು ನೇತೃತ್ವದ ಸಮಿತಿಯ ಮತ್ತೊಂದು ಫತ್ವಾ: ಯಾವುದೇ ಚಿತ್ರವನ್ನು ನಿರ್ದೇಶಕ 45 ದಿನಗಳ ಅವಧಿಯೊಳಗೆ ಸಂಪೂರ್ಣ ಗೊಳಿಸಬೇಕು ಎಂಬುದು. ಹಾಗೊಮ್ಮೆ ಆತ ಆ ಅವಧಿಯಲ್ಲಿ ಚಿತ್ರವನ್ನು ಮುಗಿಸದಿದ್ದರೆ ಮುಂದಿನ ಮೂರು ವರ್ಷಗಳ ಕಾಲ ಆತ ಬಹಿಷ್ಕಾರಕ್ಕೊಳಗಾಗಬೇಕಾಗುತ್ತದೆ.

ಈ ಮಾತಂತೂ ನಗು ಬರಿಸುತ್ತದೆ. ಉದಾಹರಣೆಗೆ ನಿರ್ದೇಶಕರ ಸಂಘದ ಅಧ್ಯಕ್ಷ ಮತ್ತು ಕ್ರಿಯಾಶೀಲ ಸಮಿತಿಯ ಅಧ್ಯಕ್ಷರೂ ಆಗಿರುವ ಶ್ರೀಮಾನ್ ರಾಜೇಂದ್ರಸಿಂಗ್ ಬಾಬೂಜಿ ಅವರ ಮೂರು ಚಿತ್ರಗಳು ಕಳೆದ ಹಲವಾರು ವರ್ಷಗಳಿಂದ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಚಿತ್ರೀಕರಣಗೊಳ್ಳುತ್ತಲೇ ಇವೆ! ಆ ಚಿತ್ರಗಳೆಂದರೆ 'ಭೀಮೂಸ್ ಕಿಡ್ಸ್ ಬ್ಯಾಂಗ್ ಬ್ಯಾಂಗ್', 'ತಿಪ್ಪಾರಹಳ್ಳಿ ತರ್ಲೆಗಳು' ಮತ್ತು 'ರಕ್ಷಾಕ್ಷಿ'. ಈ ಚಿತ್ರಗಳು ಯಾಕೆ ಇಷ್ಟು ಸುದೀರ್ಘ ಕಾಲ ಚಿತ್ರೀಕರಣಗೊಳ್ಳುತ್ತಿವೆ? ಆ ಚಿತ್ರಗಳು ಇನ್ನೂ ಯಾಕೆ ಬಿಡುಗಡೆಯಾಗಿಲ್ಲ? ಎಂಬುದಕ್ಕೆ ಬಾಬು ಅವರೇ ಮೊದಲು ವಿವರಣೆ ನೀಡಬೇಕಾಗುತ್ತದೆ ಮತ್ತು ಕನಿಷ್ಠ ಒಂಭತ್ತು ವರ್ಷಗಳ ಕಾಲ ಬಹಿಷ್ಕಾರಕ್ಕೊಳಬೇಕಾಗುತ್ತದೆ!!

ಪರಿಸ್ಥಿತಿ ಹೀಗಿರುವಾಗ ಚಿತ್ರರಂಗಕ್ಕೆ ಬರುತ್ತಿರುವ ಹೊಸ ಹುಡುಗರಿಗೆ ಬುದ್ಧಿವಾದ ಹೇಳುವುದಕ್ಕಾಗಲಿ, ಅವರಿಗೆ ಶಿಸ್ತುಕ್ರಮದ ಬೆದರಿಕೆ ಹಾಕುವುದಕ್ಕಾಗಲಿ ಇವರಿಗೆ ಯಾವ ನೈತಿಕ ಹಕ್ಕಿದೆ?



ಹಾಗೊಮ್ಮೆ ಅತಿ ಕಡಿಮೆ ದಿನಗಳಲ್ಲಿ ಚಿತ್ರೀಕರಣ ಮಾಡಿದ ಚಿತ್ರ ಹಿಟ್ ಆಗುವುದೇ ಆದಲ್ಲಿ ಹತ್ತದಿನ್ನೈದು ದಿನಗಳಲ್ಲಿ ರೀಲು ಸುತ್ತುವ ತೆಲುಗಿನಿಂದ ಕನ್ನಡಕ್ಕೆ ವಲಸೆ ಬಂದ ಸಾಯಿಪ್ರಕಾಶ್ ಮತ್ತು ಮಲೆಯಾಳಿ ನಿರ್ದೇಶಕ ದಿನೇಶ್ ಬಾಬು ಅವರ ಚಿತ್ರಗಳೆಲ್ಲವೂ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಬೇಕಿತ್ತು. ಹಿಂದೊಮ್ಮೆ ಇದೇ ಮಲೆಯಾಳಿ ಮತ್ತು ತೆಲುಗು ನಿರ್ದೇಶಕರಿಂದಾಗಿ ಕನ್ನಡ ಚಿತ್ರರಂಗ ಹಾಳಾಗಿ ಹೋಗುತ್ತಿದೆ ಎಂದು ಬೊಬ್ಬೆ ಹಾಕಿದವರಲ್ಲಿ ರಾಜೇಂದ್ರ ಸಿಂಗ್ ಅಗ್ರಗಣ್ಯರು. "ನಾವು ಕನ್ನಡದ ನಿರ್ದೇಶಕರು ಕಥೆ-ಚಿತ್ರಕಥೆ ಬರೆದು ವರ್ಷಾನುಗಟ್ಟಲೇ ಹಲವಾರು ಲೊಕೇಷನ್‌ಗಳಲ್ಲಿ ಚಿತ್ರೀಕರಣ ಮಾಡಿ ಹೊಸ ಅದ್ದೂರಿ ಚಿತ್ರಗಳನ್ನು ನೀಡಿದರೆ, ಈ ವಲಸೆ ಬಂದ ನಿರ್ದೇಶಕರು ಎರಡೇ ವಾರದಲ್ಲಿ ಕಡಿಮೆ ಬಂಡವಾಳದಲ್ಲಿ ಚಿತ್ರಮಾಡಿ ಉದ್ಯಮವನ್ನು ಹಾಳು ಮಾಡುತ್ತಿದ್ದಾರೆ'' ಎಂದೆಲ್ಲ ಅಂದು ಬೊಬ್ಬೆ ಹಾಕಿದ್ದ ಇದೇ ಬಾಬು ಈಗ ಅಂತಹ ನಿರ್ದೇಶಕ ಕಾರ್ಯಶೈಲಿಗೆ ಶರಣಾಗಿದ್ದಾರೆಯೇ?!



ಕನ್ನಡ ಚಿತ್ರರಂಗದಲ್ಲಿ ಕಡಿಮೆ ಅವಧಿಯಲ್ಲಿ ಮುಗಿಸಿದ ಚಿತ್ರಗಳೂ, ವರ್ಷಾನುಗಟ್ಟಲೆ ನಿರ್ಮಾಣವಾದ ಚಿತ್ರಗಳೂ ಗೆದ್ದಿರುವ ಮತ್ತು ಸೋತಿರುವ ಹಲವಾರು ಉದಾಹರಣೆಗಳು ಸಿಗುತ್ತವೆ. ಹಾಗಂತ ಎರಡೂ ಬಗೆಯ ಚಿತ್ರಗಳಿಂದಾಗಿ ಚಿತ್ರರಂಗ ಹಾಳಾಗಿಹೋಗಿದೆಯೆಂದರೆ ಅದು ಅರ್ಥಹೀನ ಮಾತಾಗುತ್ತದೆ.

ಇದಕ್ಕೆ ಕ್ರೇಜಿಸ್ಟಾರ್ ರವಿಚಂದ್ರನ್ ಅವರನ್ನೇ ಉದಾಹರಣೆಯಾಗಿ ಕೊಡಬಹುದು. ಅವರು ಅತ್ಯಂತ ಪ್ರೀತಿ ಮತ್ತು ಶ್ರದ್ಧೆಯಿಂದ ತನು-ಮನ-ಧನವನ್ನು ಧಾರೆಯೆರೆದು ಮಾಡಿದ ಅದ್ದೂರಿ ಚಿತ್ರಗಳಲ್ಲಿ ಒಂದು 'ಶಾಂತಿ-ಕ್ರಾಂತಿ'. 'ಶಾಂತಿ-ಕ್ರಾಂತಿ' ಸುಮಾರು ಎರಡು ವರ್ಷಗಳ ಕಾಲ ಚಿತ್ರೀಕರಣಗೊಂಡರೆ ಈ ಚಿತ್ರ ಮುಗಿಯುವ ಮೊದಲೇ ಕೇವಲ ಹದಿನೆಂಟೇ ದಿನಗಳಲ್ಲಿ 'ರಾಮಾಚಾರಿ'ಯನ್ನು ಮುಗಿಸಿದರು. ವಿಪರ್ಯಾಸವೆಂದರೆ ಹದಿನೆಂಟು ದಿನಗಳಲ್ಲಿ ಚಿತ್ರೀಕರಣಗೊಂಡ 'ರಾಮಾಚಾರಿ' ಒಂದು ವರ್ಷ ಯಶಸ್ವಿಯಾಗಿ ಪ್ರದರ್ಶನಗೊಂಡರೆ ಎರಡು ವರ್ಷ ತೆಗೆದುಕೊಂಡಿದ್ದ 'ಶಾಂತಿ-ಕ್ರಾಂತಿ' ಎರಡು ವಾರಗಳಲ್ಲೇ ಫ್ಲಾಪ್ ಆಗಿತ್ತು. ಹಾಗೆಯೇ ರವಿಚಂದ್ರನ್ ಅವರ ಪ್ರೀತಿಯ 'ಏಕಾಂಗಿ' ಫ್ಲಾಪ್ ಆದರೆ ಅವರು 'ಕ್ವಿಕಿ' ಎಂದು ನಿರ್ದೇಶಿಸಿದ 'ಮಲ್ಲ' ಹಿಟ್ ಆಗಿತ್ತು. ಆದರೂ ಇವತ್ತಿಗೂ "ನಿಮಗೆ ತೃಪ್ತಿಕೊಟ್ಟ ಚಿತ್ರ ಯಾವುದು?'' ಎಂದು ರವಿಚಂದ್ರರನ್ನು ಕೇಳಿದರೆ ಅವರು ಈಗಲೂ ಹೇಳುವುದು 'ಶಾಂತಿ-ಕ್ರಾಂತಿ' ಅಥವಾ 'ಏಕಾಂಗಿ' ಎಂದೇ.

ಅಷ್ಟೇ ಯಾಕೆ? ಸ್ವತಃ ರಾಜೇಂದ್ರ ಸಿಂಗ್ ಬಾಬು ಉದಾಹರಣೆಯನ್ನೇ ತೆಗೆದುಕೊಳ್ಳೋಣ. ವಿಷ್ಣುವರ್ಧನ್ ಅಭಿನಯಿಸಿದ 'ಬಂಧನ' ಮತ್ತು 'ಮುತ್ತಿನ ಹಾರ' ಚಿತ್ರಗಳನ್ನು ನಿರ್ದೇಶಿಸಿದ್ದವರು ರಾಜೇಂದ್ರಸಿಂಗ್ ಬಾಬು. 'ಬಂಧನ' ಬಾಕ್ಸಾಫೀಸ್‌ನಲ್ಲಿ ಹಣವನ್ನು ಕೊಳ್ಳೆ ಹೊಡೆದು ಹೊಸ ಇತಿಹಾಸವನ್ನೇ ಸೃಷ್ಟಿಸಿದರೆ 'ಮುತ್ತಿನಹಾರ' ಬಾಕ್ಸಾಫೀಸ್‌ನಲ್ಲಿ ಡಮಾರ್ ಎಂದಿತ್ತು. ಆದರೆ ಇಂದಿಗೂ ಇನ್ನೂರು ಚಿತ್ರಗಳ ಸರದಾರ ವಿಷ್ಣುಗೆ "ನಿಮಗೆ ತೃಪ್ತಿ ನೀಡಿದ ಚಿತ್ರ ಯಾವುದು?'' ಎಂದು ಕೇಳಿದರೆ 'ಮುತ್ತಿನ ಹಾರ' ಎನ್ನುತ್ತಾ ವಿಷ್ಣು ಆ ಚಿತ್ರದ ಬಗ್ಗೆ ಗಂಟೆಗಟ್ಟಲೇ ಮಾತನಾಡಲು ಆರಂಭಿಸುತ್ತಾರೆ. ಅಂದರೆ ಬಾಕ್ಸಾಫೀಸ್ ಕಲೆಕ್ಷನ್‌ಗೂ ಕಲಾವಿದರ ತೃಪ್ತಿಗೂ ನೇರವಾದ ಸಂಬಂಧವಿಲ್ಲ ಎಂದಲ್ಲವೇ?

ನಿಜ, ಕನ್ನಡ ಚಿತ್ರರಂಗ ದಿನದಿಂದ ದಿನಕ್ಕೆ ಪಾತಾಳಕ್ಕೆ ಸಾಗುತ್ತಿದೆ. ಅದನ್ನು ತಡೆಯಲು ಇರುವ ಒಂದೇ ಒಂದು ದಾರಿಯೆಂದರೆ ಅತ್ಯುತ್ತಮ ಚಿತ್ರಗಳನ್ನು ನಿರ್ಮಿಸುವುದು. ಅದು ಹಿರಿಯರಿಂದಾಗಲಿ, ಕಿರಿಯರಿಂದಾಗಲಿ, ಉದ್ಯಮದ ಬಗ್ಗೆ ಗಂಧಗಾಳಿ ಗೊತ್ತಿಲ್ಲದವರಿಂದಾದರೂ ಪರವಾಗಿಲ್ಲ. ಇದನ್ನು ರಾಜೇಂದ್ರ ಸಿಂಗ್ ಬಾಬು ಮತ್ತವರ ತಂಡ ಅರಿತುಕೊಳ್ಳಬೇಕಿದೆ.

-ಶೆಣೈ

...ನ್ನಡಿಗನ ...ಾರ್ನಿಂಗ್!




ಇತ್ತೀಚಿನ ದಿನಗಳಲ್ಲಿ ಆಲ್ಬಂ ಮತ್ತು ರಾಕ್ ಬ್ಯಾಂಡ್‌ಗಳು ಪಾಪ್ಯುಲರ್ ಆಗುತ್ತಿದ್ದಂತೇ ನಮ್ಮ ಕನ್ನಡದ ಕೆಲ ಹುಡುಗರಲ್ಲೂ ಆಲ್ಬಂನ ಕ್ರೇಜ್ ಹೆಚ್ಚುತ್ತಿದೆ.

ಈಗಾಗಲೇ ಕನ್ನಡದಲ್ಲಿ ಹಲವಾರು ಆಲ್ಬಂಗಳೂ ಬಂದಿವೆ. ಆದರೆ ಅವುಗಳಲ್ಲಿ ಹೆಸರು ಮಾಡಿರುವುದು ಮಾತ್ರ ಕೆಲವೇ ಆಲ್ಬಂಗಳು.

ರೋಹಿತ್ ಎಂಬ ಇಪ್ಪತ್ತೆರಡರ ಯುವಕ ಈಗ ತನ್ನ ಸ್ನೇಹಿತರೊಂದಿಗೆ ಸೇರಿ 'ವಾರ್ನಿಂಗ್' ಎಂಬ ಇಂಗ್ಲಿಷ್ ಆಲ್ಬಂ ಅನ್ನು ಹೊರತರುತ್ತಿದ್ದಾನೆ. ಈ ಆಲ್ಬಂನಲ್ಲಿ ಬರುವ ಏಳು ಹಾಡುಗಳಿಗೆ ರೋಹಿತ್‌ನೇ ಟ್ಯೂನ್ ಕಂಪೋಸ್ ಮಾಡಿ, ಅಷ್ಟೂ ಹಾಡುಗಳನ್ನು ಸ್ವತಃ ತಾನೇ ಹಾಡಿದ್ದಾನೆ. ಮಾತ್ರವಲ್ಲ, ಈಗ ಆ ಆಲ್ಬಂನಲ್ಲಿ ನಟಿಸಲೂ ಮುಂದಾಗಿದ್ದಾನೆ. ಎಲ್ಲರೂ ಕನ್ನಡ ಆಲ್ಬಂನಲ್ಲಿ ಇಂಗ್ಲಿಷ್ ಪದ ಬಳಕೆ ಮಾಡಿದರೆ ರೋಹಿತ್ ತನ್ನ 'ವಾರ್ನಿಂಗ್'ನ ಮಧ್ಯೆಮಧ್ಯೆ ಕನ್ನಡದ ಸಾಲುಗಳನ್ನು ಬಳಸಿದ್ದಾನಂತೆ.

'ಮಾನಸಿಕ ಖಿನ್ನತೆಗೆ ಗುರಿಯಾಗಿ, ಮಾದಕ ವ್ಯಸನಿಗಳಾಗಿ ಕಡೆಗೆ ಆತ್ಮಹತ್ಯೆಯ ದಾರಿ ಹಿಡಿಯುತ್ತಿರುವ ಯುವ ಪೀಳಿಗೆಯನ್ನು ಬಡಿದೆಬ್ಬಿಸುವ ಉದ್ದೇಶದಿಂದ ಈ ಆಲ್ಬಂ ತಯಾರಿಸುತ್ತಿದ್ದೇನೆ' ಎನ್ನುವ ರೋಹಿತ್‌ನ ಉತ್ಸಾಹಕ್ಕೆ ಮಣಿದು ಆತನ ಕುಟುಂಬ ವರ್ಗದವರು ಈ ಆಲ್ಬಂ ನಿರ್ಮಾಣಕ್ಕೆ 16 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ.

'ಬೆನ್ನೆಲುಬಾಗಿ ನಿಲ್ಲುವುದು' ಎಂದರೆ ಇದೇ ಅಲ್ಲವೇ?



ಗಣೇಶನ ಅಗ್ನಿಪರೀಕ್ಷೆ

ಈ ವರ್ಷ ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ ಯಾವ ಚಿತ್ರವೂ ಬಿಡುಗಡೆ ಆಗುವುದಿಲ್ಲವೇನೋ ಎಂದು ಎಲ್ಲರೂ ತರ್ಕಿಸುತ್ತಿರುವಾಗ ಮುಂದಿನ ವಾರ ಅವರ ಚಿತ್ರವೊಂದು ತೆರೆ ಕಾಣುವ ಭಾಗ್ಯವನ್ನು ಕಂಡಿದೆ. ಅದು ಸ್ವತಃ ಗಣೇಶ್ ಅವರೇ ನಿರ್ಮಿಸಿರುವ 'ಮಳೆಯಲಿ, ಜೊತೆಯಲಿ' ಚಿತ್ರ.

ಇದಕ್ಕಿಂತಲೂ ಮೊದಲು ಆರಂಭವಾದದ್ದು 'ಉಲ್ಲಾಸ ಉತ್ಸಾಹ' ಚಿತ್ರ. ಇದು ತೆಲುಗಿನ 'ಉಲ್ಲಾಸಂಗ, ಉತ್ಸಾಹಂಗ' ಚಿತ್ರದ ರಿಮೇಕ್. ಅಲ್ಲಿ ಭರ್ಜರಿ ಯಶಸ್ಸು ಕಂಡ ಈ ಚಿತ್ರವನ್ನು ಒಂದೆರಡು ತಿಂಗಳಲ್ಲಿ ಮುಗಿಸಿ ಬಿಡುಗಡೆ ಮಾಡುವ ಉದ್ದೇಶ ನಿರ್ಮಾಪಕ ತ್ಯಾಗರಾಜ್ ಅವರದ್ದಾಗಿತ್ತು. ಆದರೆ ಆ ನಂತರದ ದಿನಗಳಲ್ಲಿ ಗಣೇಶನ ಮಾರುಕಟ್ಟೆ ಬಿದ್ದುಹೋಗಿದ್ದರಿಂದ ತ್ಯಾಗರಾಜ್ ಅವರು ಯಾವ ಉಲ್ಲಾಸವೂ ಇಲ್ಲದೆ, ಉತ್ಸಾಹವೂ ಇಲ್ಲದೆ ಆ ಚಿತ್ರವನ್ನು ನಿಧಾನವಾಗಿ ಮುಂದುವರಿಸಲಾರಂಭಿಸಿದರು. ಇದನ್ನು ಗ್ರಹಿಸಿದ ಗಣೇಶ್ ತನ್ನ ಸ್ವಂತ ನಿರ್ಮಾಣದ ಚಿತ್ರವನ್ನು ಬೇಗನೇ ಮುಗಿಸಿ ಅದನ್ನು ಬಿಡುಗಡೆ ಮಾಡಲು ರೆಡಿಯಾಗಿ ತಮ್ಮ ತಾರಾಮೌಲ್ಯವನ್ನು ತಾವೇ ಉಳಿಸಿಕೊಳ್ಳಲು ಮುಂದಾಗಿದ್ದಾರೆ.

ಒಂದು ರೀತಿಯಲ್ಲಿ ಗಣೇಶ್ ತನಗೆ ತಾನೇ ಅಗ್ನಿಪರೀಕ್ಷೆಗೆ ಒಡ್ಡಿಕೊಂಡಿದ್ದಾರೆ. ಈ ಚಿತ್ರ ಯಶಸ್ಸುಗೊಂಡರೂ ಅದರ ಕ್ರೆಡಿಟ್ ಗಣೇಶ್‌ಗೆ ಸಲ್ಲುತ್ತದೆ. ಒಂದು ವೇಳೆ ಅದು ಮುಗ್ಗರಿಸಿದರೂ ಸ್ವತಃ ಗಣೇಶ್ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಆದರೆ ಒಂದಂತೂ ಸತ್ಯ, ಈ ಚಿತ್ರ ಗೆದ್ದ ಕೂಡಲೇ 'ಉಲ್ಲಾಸ, ಉತ್ಸಾಹ' ಚಿತ್ರವನ್ನು ಬಿಡುಗಡೆ ಮಾಡಲು ಅದರ ನಿರ್ಮಾಪಕ ಉತ್ಸುಕರಾಗುತ್ತಾರೆ!



ಕನ್ನಡಕ್ಕಾಗಿ ಪ್ರಾರ್ಥನೆ

ಕರ್ನಾಟಕದಲ್ಲಿ ಕನ್ನಡಕ್ಕೆ ಸಂಚಕಾರ ಒದಗಿಬಂದಿರುವ ಇಂದಿನ ದಿನದಲ್ಲಿ ಸಿನಿಮಾದ ಮೂಲಕ ಕನ್ನಡ ಭಾಷೆ ಮತ್ತು ಇಲ್ಲಿನ ಸಂಸ್ಕೃತಿಯ ಉಳಿವಿಗಾಗಿ 'ಪ್ರಾರ್ಥನೆ' ಮಾಡುತ್ತಿರುವವರು ಹಿರಿಯ ಪತ್ರಕರ್ತ ಸದಾಶಿವ ಶೆಣೈ.

ಎಲ್ಲ ಅಂದುಕೊಂಡಂತೆಯೇ ಆಗಿದ್ದಿದ್ದರೆ, ಈ ಹೊತ್ತಿಗೆ ಈ. ಕೃಷ್ಣಪ್ಪ ನಿರ್ಮಾಣದಲ್ಲಿ ಶೆಣೈ ನಿರ್ದೇಶನದ 'ಮಾತೃಭೂಮಿ' ಎಂಬ ದೊಡ್ಡ ಕ್ಯಾನ್‌ವಾಸ್ ಚಿತ್ರ ಹೊರಬರಬೇಕಿತ್ತು, ನಿರ್ಮಾಪಕರ ಅಸಹಕಾರ.... ಇತ್ಯಾದಿ ಕಾರಣಗಳಿಗಾಗಿ 'ಮಾತೃಭೂಮಿ' ಆರಂಭವಾಗಲೇ ಇಲ್ಲ ಎನ್ನುವುದೀಗ ಇತಿಹಾಸ.

ಇದಕ್ಕೆಲ್ಲಾ ತಲೆ ಕೆಡಿಸಿಕೊಳ್ಳದ ಶೆಣೈ ಈಗ 'ಪ್ರಾರ್ಥನೆ' ಎಂಬ ಹೊಸ ಚಿತ್ರವನ್ನು ನಿರ್ದೇಶಿಸುವ ತಯಾರಿಯಲ್ಲಿದ್ದಾರೆ. ಅನಂತ್ ನಾಗ್, ಸುಧಾರಾಣಿ ಮುಖ್ಯ ಪಾತ್ರದಲ್ಲಿರುವ ಈ ಚಿತ್ರದಲ್ಲಿ ಟಿ.ಎನ್.ಸೀತಾರಾಂ, ಶ್ರೀನಿವಾಸ ಪ್ರಭು, ಯುವ ನಿರ್ದೇಶಕ ಗುರುಪ್ರಸಾದ್ ಸೇರಿದಂತೆ ಇನ್ನೂ ಹಲವಾರು ಕಲಾವಿದರು ಕಾಣಿಸಿಕೊಳ್ಳಲಿದ್ದಾರೆ.

ಕಥೆಗಳೇ ಇಲ್ಲದೆ ಸಿನಿಮಾಗಳನ್ನು ಮಾಡುವ ಕೆಟ್ಟ ಸಂಪ್ರದಾಯದ ನಡುವೆ ಕನ್ನಡ ಶಾಲೆಯೊಂದನ್ನು ಉಳಿಸಿಕೊಳ್ಳಲು ಹೋರಾಡುವ ಒಬ್ಬ ಮೇಷ್ಟ್ರು, ಆ ನಿಟ್ಟಿನಲ್ಲಿ ಆತ ಎದುರಿಸುವ ಸಮಸ್ಯೆಗಳು... ಹೀಗೆ ಒಂದು ಉತ್ತಮ ಚಿತ್ರವಾಗಬಲ್ಲ ಗಟ್ಟಿ ಕಥೆಯನ್ನಿಟ್ಟುಕೊಂಡು 'ಪ್ರಾರ್ಥನೆ' ಆರಂಭಿಸುತ್ತಿದ್ದಾರೆ ಸದಾಶಿವ ಶೆಣೈ...

ನಮ್ಮ ತಂಡದ ಶೆಣೈ ಅವರಿಗೆ ಬೆಸ್ಟ್ ವಿಷಸ್.





ಅರ್ಧ ಕನ್ನಡ ಇನ್ನರ್ಧ ತೆಲುಗು

ಒಂದು ಹುಡುಗಿಗಾಗಿ ಕರ್ನಾಟಕ ಮತ್ತು ತಮಿಳುನಾಡಿನ ಇಬ್ಬರು ಕಿತ್ತಾಡಿಕೊಳ್ಳುವ ಕಥಾಹಂದರವನ್ನು ಹೊಂದಿದ್ದ 'H_2O' ಚಿತ್ರ ಏಳೆಂಟು ವರ್ಷಗಳ ಹಿಂದೆಯೇ ಬಂದಿತ್ತು. ಇನ್ನು ಕರ್ನಾಟಕದ ಹುಡುಗನೊಬ್ಬ ತಾನು ಪ್ರೀತಿಸಿದ ಹುಡುಗಿಗಾಗಿ ಆಂಧ್ರಕ್ಕೆ ಹೋಗಿ ಅಲೆದಾಡುವ ಕಥೆ 'ಸತ್ಯ ಇನ್ ಲವ್' ಚಿತ್ರದ್ದಾಗಿತ್ತು. ಈಗ ಅಂಥದ್ದೇ ಕತೆಯ ಇನ್ನೊಂದು ಚಿತ್ರ ಸೆಟ್ಟೇರಿದೆ.

ಅದು ವಿಜಯ ರಾಘವೇಂದ್ರ ಅಭಿನಯದ 'ರಾಧಾ'. ಇಲ್ಲೂ ಸಹ ನಾಯಕ ವಿಜಯ ರಾಘವೇಂದ್ರ ತನ್ನ ಪ್ರಿಯತಮೆಯ ಬೆನ್ನತ್ತಿ ಆಂಧ್ರಕ್ಕೆ ಹೋಗುತ್ತಾನಂತೆ... ಹೀಗಾಗಿ ಚಿತ್ರದ ಮೊದಲಾರ್ಧದಲ್ಲಿ ಕನ್ನಡವೇ ಪ್ರಧಾನವಾಗಿದ್ದರೆ, ದ್ವಿತೀಯ ಭಾಗದಲ್ಲಿ ಕನ್ನಡ ಕಡಿಮೆಯಾಗಿ ತೆಲುಗು ಆವರಿಸುತ್ತದಂತೆ. ಹಿಂದೆ 'ಶ್ರೀ' ಚಿತ್ರದಲ್ಲಿ ಮಾರ್ಷಲ್ ಫೈಟ್ ಮಾಡಲು ವಿಜಯ ರಾಘವೇಂದ್ರ ಬ್ಯಾಂಕಾಕ್‌ನಲ್ಲಿ ಹಲವು ತಿಂಗಳ ಕಾಲ ಟ್ರೈನಿಂಗ್ ಪಡೆದಿದ್ದರು. ಈಗ 'ರಾಧಾ' ಚಿತ್ರದ ಬಡಿದಾಟಕ್ಕಾಗಿ ಸಾಹಸ ನಿರ್ದೇಶಕ ಡಿಫರೆಂಟ್ ಡ್ಯಾನಿ ಬಳಿ ಒಂದು ತಿಂಗಳ ತಾಲೀಮು ನಡೆಸಿದ್ದಾರೆ.

ವಿಜಯರಾಘವೇಂದ್ರ ತನ್ನ ನಟನೆಯ ಚಿತ್ರಗಳಿಗೆ ಇಷ್ಟೆಲ್ಲಾ ಬೆವರು ಹರಿಸುತ್ತಿದ್ದರೂ ಒಂದೇ ಒಂದು ಗೆಲುವೂ ಅವರಿಗೆ ದಕ್ಕದೇ ಇರುವುದು ದುರಾದೃಷ್ಟವಲ್ಲದೇ ಮತ್ತೇನೂ ಅಲ್ಲ.



ಶಿವಣ್ಣ 'ಪುಣ್ಯವಂತ'!

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ನಟಿಸಿದ ಚಿತ್ರಗಳು ಸಾಲುಸಾಲಾಗಿ ಸೋಲುತ್ತಿರುವಾಗ ಅವರೆಂಥ ಪುಣ್ಯವಂತ? ಎಂದು ಪ್ರಶ್ನಿಸಬೇಡಿ!

ಇದು ಶಿವರಾಜ್ ಕುಮಾರ್ ಅಭಿನಯದ 101ನೇ ಚಿತ್ರದ ಹೆಸರು. ಶಿವಣ್ಣ ಅಭಿನಯದ 101ನೇ ಚಿತ್ರವನ್ನು ನಿರ್ದೇಶಿಸುತ್ತಿರುವ 'ಪುಣ್ಯವಂತ' ವಿ. ನಾಗೇಂದ್ರ ಪ್ರಸಾದ್. 'ಅಂಬಿ', 'ನಲ್ಲ', 'ಮೇಘವೇ ಮೇಘವೇ' ಎಂಬ ಮೂರು ಫ್ಲಾಪ್ ಚಿತ್ರಗಳನ್ನು ನಿರ್ದೇಶಿಸಿರುವ ಗೀತರಚನೆಕಾರ ನಾಗೇಂದ್ರ ಪ್ರಸಾದ್ ಈಗ 'ಪುಣ್ಯವಂತ'ನ ಮೂಲಕ ಮತ್ತೊಂದು ಪ್ರಯತ್ನ ಮಾಡುತ್ತಿದ್ದಾರೆ.

ತುಂಬು ಸಾಂಸಾರಿಕ ಚಿತ್ರವಾದ 'ಪುಣ್ಯವಂತ'ನ ಮತ್ತೊಂದು ವಿಶೇಷವೆಂದರೆ ಕನ್ನಡ ಚಿತ್ರರಂಗದ ಒಟ್ಟು 100 ಕಲಾವಿದರು ಅದರಲ್ಲಿ ನಟಿಸಲಿದ್ದಾರಂತೆ. 100 ಜನರೊಂದಿಗೆ ನಟಿಸುತ್ತಿರುವ ಶಿವಣ್ಣ ಪುಣ್ಯವಂತನೋ ಅಥವಾ ಶಿವಣ್ಣನೊಂದಿಗೆ ನಟಿಸುತ್ತಿರುವ ನೂರು ಮಂದಿ ಕಲಾವಿದರು ಪುಣ್ಯವಂತರೋ ಎಂಬುದು ಸಿನಿಮಾ ಆರಂಭಗೊಂಡನಂತರವಷ್ಟೇ ಗೊತ್ತಾಗಲಿದೆ!





ರಮ್ಯಾಳ ಕಮರಿದ ಕನಸು!

'ಕಾಲಿಗೆ ಬಂದ ಅದೃಷ್ಟವನ್ನು ಎಡಗಾಲಲ್ಲಿ ಒದೆಯುವುದು' ಅಂದರೆ ಇದೇ ಇರಬೇಕು.

ಯಾರೇ ಆಗಲಿ ಕೇವಲ ಹಣದ ಬೆನ್ನತ್ತಿ ಹೋದರೆ ಏನೆಲ್ಲಾ ನಷ್ಟಗಳನ್ನು ಭರಿಸಬೇಕಾಗುತ್ತದೆ ಎನ್ನುವುದಕ್ಕೆ ನಟಿ ರಮ್ಯಾ ಬೆಸ್ಟ್ ಎಕ್ಸಾಂಪಲ್!

ಇತ್ತೀಚೆಗೆ ಖ್ಯಾತ ನಟ ಪ್ರಕಾಶ್ ರೈ ಮೊಟ್ಟಮೊದಲ ಬಾರಿಗೆ ಕನ್ನಡ ಚಿತ್ರವೊಂದನ್ನು ನಿರ್ದೇಶಿಸುತ್ತಿದ್ದಾಗ ಅದು ಅವರೇ ನಿರ್ಮಿಸಿ ನಟಿಸಿರುವ ತಮಿಳಿನ 'ಅಭಿಯುಂ ನಾನುಂ' ಚಿತ್ರದ ರೀಮೇಕ್ ಎಂದು ಪ್ರಕಟಗೊಂಡಾಗ ಅದರಲ್ಲಿ ಪ್ರಕಾಶನ ಮಗಳ ಪಾತ್ರ ಯಾರ ಪಾಲಾಗುತ್ತದೆ ಎಂಬ ಕಾತರ ಬಹಳಷ್ಟು ಜನರದ್ದಾಗಿತ್ತು, ಕಡೆಗೂ ಆ ಪಾತ್ರ ರಮ್ಯಾಳ ಪಾಲಾದಾಗ ಸಂತೋಷ ಪಟ್ಟವರೇ ಹೆಚ್ಚು, ಯಾಕೆಂದರೆ ರಮ್ಯಾಳ ಕಿರುಕ್ಕುಗಳೇನೇ ಇದ್ದರೂ ಸದ್ಯಕ್ಕೆ ಕನ್ನಡದಲ್ಲಿರುವ ಕೆಲವೇ ಕೆಲವು ಉತ್ತಮ ಕಲಾವಿದರಲ್ಲಿ ಆಕೆಯೂ ಒಬ್ಬಳು.

ಆದರೆ ರಮ್ಯಾ ಈಗ ಕ್ಷುಲ್ಲಕ ಕಾರಣ ನೀಡಿ 'ನಾನು ನನ್ನ ಕನಸು' ಚಿತ್ರದಿಂದ ಹೊರಬಂದಿದ್ದಾಳೆ. ರಮ್ಯಾ ಹೇಳುವ ಪ್ರಕಾರ "ಆ ಚಿತ್ರದ ನಿರ್ಮಾಪಕರು ನನಗೆ ಹದಿನಾರು ಲಕ್ಷಕ್ಕಿಂತ ಹೆಚ್ಚು ಕೊಡಲು ಸಾಧ್ಯವಿಲ್ಲ ಎಂದರು. ಅದಕ್ಕೇ ನಾನು ನಟಿಸಲು ನಿರಾಕರಿಸಿದ್ದೇನೆ'' ಎಂಬುದು.

25 ರಿಂದ 30 ಲಕ್ಷದ ದೊಡ್ಡ ಮೊತ್ತದ ಸಂಭಾವನೆ ಕೊಟ್ಟ ತಕ್ಷಣ ಕೆಲಸಕ್ಕೆ ಬಾರದ ಕಮರ್ಷಿಯಲ್ ಚಿತ್ರಗಳಲ್ಲಿ ನಟಿಸಲು ಒಪ್ಪುವ ರಮ್ಯಾ 16 ಲಕ್ಷ ರೂ. ಪಡೆದು 'ಕನಸು' ಚಿತ್ರದಲ್ಲಿ ನಟಿಸಿದ್ದರೆ ಆಕೆಗೆ ಯಾವ ನಷ್ಟವೂ ಆಗುತ್ತಿರಲಿಲ್ಲ. ಈ ಉದ್ಯಮದಲ್ಲಿ ವ್ಯವಹಾರ ಮುಖ್ಯ ಎಂಬುದು ನಿಜ. ಆದರೆ ಈಗಾಗಲೇ ಹಲವಾರು ಸೋಲುಗಳನ್ನು ಕಂಡಿರುವ ರಮ್ಯಾ ಸದ್ಯ ಈ ಚಿತ್ರಕ್ಕೆ ಕಡಿಮೆ ಸಂಭಾವನೆ ಪಡೆದು ನಟಿಸಬಹುದಿತ್ತು, ಕಡೇ ಪಕ್ಷ "ನೀವು ಕೊಡುವ ಸಂಭಾವನೆಗೆ ನಟಿಸಲು ಸಾಧ್ಯವಿಲ್ಲ'' ಎಂದು ಹೇಳಿ ನಯವಾಗಿ ಹೊರಬರಬಹುದಿತ್ತು.

ಆದರೆ ಹೇಳದೆ ಕೇಳದೆ ಚಿತ್ರೀಕರಣಕ್ಕೂ ಹಾಜರಾಗದೇ ರಮ್ಯಾ ಚಿತ್ರತಂಡಕ್ಕೆ ಏಕಾಏಕಿ ಕೈಕೊಟ್ಟಿರುವುದರಿಂದ ಸಹಜವಾಗೇ ಪ್ರಕಾಶ್ ರೈ ಬೇಸರಗೊಂಡಿದ್ದಾರೆ. ಹೀಗಾಗಿ ರಮ್ಯಾ ನಿರ್ವಹಿಸಬೇಕಿದ್ದ ಪಾತ್ರವನ್ನು ಅವರು ಅಮೂಲ್ಯ ಮಡಿಲಿಗೆ ಹಾಕಿದ್ದಾರೆ. ರೈ ಫೋನು ಮಾಡಿ ಈ ಅವಕಾಶವನ್ನು ನೀಡಿದಾಕ್ಷಣ ನಮ್ರತೆಯಿಂದ ಸ್ವೀಕರಿಸಿದ ಅಮೂಲ್ಯ ಬಾಬಾಬುಡನ್‌ಗಿರಿಯಲ್ಲಿ ನಡೆಯುತ್ತಿರುವ ಚಿತ್ರೀಕರಣಕ್ಕೆ ತೆರಳಲು ಸಜ್ಜಾಗಿ ನಿಂತಿದ್ದಾಳೆ.

ಸದ್ಯ 'ಪ್ರೇಮಿಸಂ' ಚಿತ್ರದ ಹಾಡೊಂದು ಬಾಕಿ ಉಳಿದಿದ್ದು ಅಮೂಲ್ಯಳಿಗೂ ಬೇರಾವ ಕಮಿಟ್‌ಮೆಂಟುಗಳೂ ಇರಲಿಲ್ಲ. ಅಲ್ಲದೇ ಇತ್ತೀಚೆಗಷ್ಟೇ ತಂದೆಯನ್ನು ಕಳೆದುಕೊಂಡ ಬೇಸರದಲ್ಲಿದ್ದ ಅಮೂಲ್ಯಳಲ್ಲಿ ರೈ ಸಿನಿಮಾ ಹೊಸ 'ಕನಸು' ಮೂಡಿಸಿದೆ.

● ಅರುಣ್

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44